ಸೋಮವಾರ, ಜುಲೈ 18, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹಬ್ಬದ ಸಂಭ್ರಮ

ಪಂಜಾಬ್‌ನ ಅಮೃತಸರದಲ್ಲಿ ಭಾನುವಾರ 'ಸಾವನ್ ಹಬ್ಬ'ದ ಸಂಭ್ರಮಾಚರಣೆಯಲ್ಲಿ ನವ ವಿವಾಹಿತೆಯರು ಪಾಲ್ಗೊಂಡಿದ್ದರು

ಕಸದಿಂದ ನಲುಗಿರುವ ಹಳ್ಳಿಗಳ ಅಭಿವೃದ್ಧಿಗೆ ₹85 ಕೋಟಿ; ಬಿಡದಿಯಲ್ಲಿ ತ್ಯಾಜ್ಯದಿಂದ ವಿದ್ಯುತ್

ತ್ಯಾಜ್ಯ ನಿರ್ವಹಣೆಗಾಗಿ 'ಅಮೃತ' ಶಕ್ತಿ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಕಸದಿಂದ ಸಾಕಷ್ಟು ನಲುಗುತ್ತಿರುವುದು ನಗರದ ಹೊರವಲಯದಲ್ಲಿರುವ ಹಲವು ಹಳ್ಳಿಗಳು. ಈ ಗ್ರಾಮಗಳ 'ವಿಷ'ವನ್ನು ತೊರೆಯಲು ಇದೀಗ 'ಅಮೃತ'ದ ಶಕ್ತಿ ಬಂದಿದೆ. ₹85 ಕೋಟಿ ವೆಚ್ಚದಲ್ಲಿ ಆ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾಗಲಿವೆ.

ನಗರದಲ್ಲಿ ಉತ್ಪತ್ತಿಯಾಗುವ 6 ಸಾವಿರಕ್ಕೂ ಹೆಚ್ಚು ಟನ್ ತ್ಯಾಜ್ಯದ ಸಂಸ್ಕರಣೆ ಘಟಕ, ಲ್ಯಾಂಡ್‌ಫಿಲ್‌ಗಳಿಗೆ ಹೋಗುತ್ತದೆ. ಬಹುತೇಕ ಇವೆಲ್ಲವೂ ಹೊರಭಾಗದ ಹಳ್ಳಿಗಳ ಹತ್ತಿರದಲ್ಲೇ ಇವೆ. ಇದರಿಂದ ಗ್ರಾಮಗಳಲ್ಲಿ ಸಾಕಷ್ಟು ರೀತಿ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿತ್ತು. ಅಲ್ಲದೆ, ಹಳ್ಳಿಗಳ ರಸ್ತೆಗಳೂ ಹಾಳಾಗಿಹೋಗಿದ್ದವು. ಈ ಬಗ್ಗೆ ಹೋರಾಟಗಳೂ ನಡೆದಿದ್ದವು.

ಇದೀಗ ಅಮೃತ ನಗರೋತ್ಥಾನ ಯೋಜನೆಯಲ್ಲಿ ತ್ಯಾಜ್ಯ ಸಂಸ್ಕರಣೆ ಘಟಕ ಅಥವಾ ಲ್ಯಾಂಡ್‌ಫಿಲ್‌ಗಳ ಸುತ್ತಲಿರುವ ಹಳ್ಳಿಗಳನ್ನು 15 ಹಳ್ಳಿಗಳ ಸಂಪರ್ಕ ರಸ್ತೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳಿಗೆ ₹85 ಕೋಟಿಯ ಅನುಮೋದನೆ ದೊರೆತಿದೆ.

ಸುವಿಧಾ: ಪೌರಕಾರ್ಮಿಕರಿಗಾಗಿ 221 ಸುವಿಧಾ ಕ್ಯಾಬಿನ್‌ಗಳಿಗೆ ಅನುಮೋದನೆ ದೊರೆತಿದ್ದು, 84 ಆರಂಭವಾಗಿವೆ. 225 ಸುವಿಧಾ ಕ್ಯಾಬಿನ್‌ಗಳನ್ನು ಬಿಬಿಎಂಪಿ 2ನೇ ಹಂತದಲ್ಲಿ ನಗರೋತ್ಥಾನ ಅನುದಾನದಲ್ಲಿ ನಿರ್ಮಾಣ ಮಾಡಲಿದೆ. ಪೌರಕಾರ್ಮಿಕರು ಪ್ರತಿದಿನ ಕೆಲಸ ಆರಂಭಿಸುವ ಸ್ಥಳಗಳಲ್ಲಿ ಈ ಕ್ಯಾಬಿನ್ ಸ್ಥಾಪಿಸಲಾಗುತ್ತದೆ. ಶೌಚಾಲಯ, ಬಟ್ಟೆ ಬದಲಿಸಲು ಜಾಗ, ಸಾಮಗ್ರಿಗಳನ್ನು ಇರಿಸಿಕೊಳ್ಳುವ ಸೌಲಭ್ಯ ಇದರಲ್ಲಿರಲಿದೆ.

ಸ್ಯಾನಿಟರಿ ತ್ಯಾಜ್ಯ: ಸ್ಯಾನಿಟರಿ ಹಾಗೂ ವೈದ್ಯಕೀಯ ತ್ಯಾಜ್ಯವನ್ನು ಈಗ 4 ಸಂಸ್ಥೆಗಳಿಗೆ ನೀಡಿ, ಅವುಗಳನ್ನು ಸುಡಲು ಹಣವನ್ನೂ ನೀಡಲಾಗುತ್ತಿದೆ. ಈಗ ಬಿಬಿಎಂಪಿ ವತಿಯಿಂದಲೇ 2 ಘಟಕ ನಿರ್ಮಿಸಿ ಆ ತ್ಯಾಜ್ಯ ನಿರ್ವಹಣೆ ಮಾಡುವ ಯೋಜನೆ ಅನುಷ್ಠಾನಗೊಳಿಸಲಾಗುತ್ತದೆ' ಎಂದು ಘನತ್ಯಾಜ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

ಬಿಡದಿಯಲ್ಲಿ ತ್ಯಾಜ್ಯದಿಂದ ವಿದ್ಯುತ್: ಬಿಡದಿಯಲ್ಲಿ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಇಲ್ಲಿ 600 ಎಂಟಿಪಿಡಿ ತ್ಯಾಜ್ಯವನ್ನು 11 ಮೆಗಾವ್ಯಾಟ್ ವಿದ್ಯುತ್ ಅನ್ನಾಗಿ ಪ್ರತಿದಿನವೂ ಉತ್ಪಾದಿಸಲಾಗುತ್ತದೆ. ಇದಕ್ಕಾಗಿ ಬಿಬಿಎಂಪಿ ₹55 ಕೋಟಿಯನ್ನು ಕೆಪಿಟಿಸಿಎಲ್‌ಗೆ ಪಾವತಿಸುತ್ತಿದೆ.

ಮಿಟ್ಟಗನಹಳ್ಳಿ ಲ್ಯಾಂಡ್‌ಫಿಲ್

ಬಿಬಿಎಂಪಿ ಎಲ್ಲಿಗೆ ಎಷ್ಟು 'ಅಮೃತ'?

ಹಳ್ಳಿಗಳ ಅಭಿವೃದ್ಧಿ

'ತ್ಯಾಜ್ಯ ಸಂಸ್ಕರಣೆ ಹಾಗೂ ಲ್ಯಾಂಡ್‌ಫಿಲ್ ಪ್ರದೇಶಗಳ ಸುತ್ತಲಿನ ಗ್ರಾಮಗಳ ಜನರು ರಸ್ತೆ ಮಾಡಿಕೊಡಬೇಕು, ಆಸ್ಪತ್ರೆ ಕಟ್ಟಡ ನಿರ್ಮಿಸಿಕೊಡಿ, ಸ್ಪ್ರೇ ಮಾಡಿಕೊಡಿ ಎಂಬೆಲ್ಲ ಬೇಡಿಕೆಗಳನ್ನು ಇಟ್ಟಿದ್ದರು. ಹಿಂದೆಯೂ ಸಾಕಷ್ಟು ಇಂತಹ ಕೆಲಸಗಳನ್ನು ಮಾಡಿಕೊಟ್ಟಿದ್ದೇವೆ. ಇದೀಗ ಅಮೃತ್ ನಗರೋತ್ಥಾನದಲ್ಲಿ ಹಳ್ಳಿಯವರ ಬೇಡಿಕೆಯನ್ನು ಸಮಗ್ರವಾಗಿ ಈಡೇರಿಸುವ ಉದ್ದೇಶ ಹೊಂದಲಾಗಿದೆ' ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

ಘನತ್ಯಾಜ್ಯ ನಿರ್ವಹಣೆಗೆ ಕ್ರಿಯಾಯೋಜನೆಗಳು (₹ಕೋಟಿಗಳಲ್ಲಿ)

ಕನ್ನಹಳ್ಳಿ, ಚಿಕ್ಕನಾಗಮಂಗಲ, ದೊಡ್ಡಬಿದರಕಲ್ಲು ತ್ಯಾಜ್ಯ ಸಂಸ್ಕರಣೆ ಘಟಕ ಹಾಗೂ ಇತರೆ ಲ್ಯಾಂಡ್‌ಫಿಲ್ ಪ್ರದೇಶಗಳಿಗೆ ರಸ್ತೆಗಳ ನಿರ್ಮಾಣ	₹25
ಪ್ರಾಣಿ ತ್ಯಾಜ್ಯ ಸಂಸ್ಕರಣೆಯಿಂದ ಪ್ರಾಣಿ ಆಹಾರ ಉತ್ಪಾದನೆ ಘಟಕ ಸ್ಥಾಪನೆ	₹10
ಎನ್‌ಜಿಟಿ ಸಮಿತಿ ನಿರ್ದೇಶನದಂತೆ ನಾಲ್ಕು ತ್ಯಾಜ್ಯ ಸಂಸ್ಕರಣ ಘಟಕಗಳಲ್ಲಿ ಸೋರಿಕೆ ಸಂಸ್ಕರಣ (20 ಕೆಎಲ್‌ಡಿ) ಘಟಕಗಳ ಸ್ಥಾಪನೆ	₹10
ಬಿಡದಿಯಲ್ಲಿ 11 ಮೆಗಾವ್ಯಾಟ್ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಘಟಕ	₹55
ಹೊಸ ವೈಜ್ಞಾನಿಕ ಲ್ಯಾಂಡ್‌ಫಿಲ್ ಪ್ರದೇಶಗಳ ಸ್ಥಾಪನೆ	₹40
ಪೌರಕಾರ್ಮಿಕರಿಗಾಗಿ 225 ಸುವಿಧಾ ಕ್ಯಾಬಿನ್	₹20
ಘನತ್ಯಾಜ್ಯ ನಿರ್ವಹಣೆ ಪ್ರದೇಶಗಳಿಗೆ ಫೆನ್ಸಿಂಗ್	₹5
ಸಫಾಯಿ ಕರ್ಮಚಾರಿಗಳಿಗೆ ಸುರಕ್ಷಿತ ಸಾಧನ, ಸಮವಸ್ತ್ರ	₹15
ರಸ್ತೆ/ಪಾದಚಾರಿ ಮಾರ್ಗಗಳನ್ನು ಗುಡಿಸಲು ಉಪಕರಣಗಳು	₹10
ಸ್ಯಾನಿಟರಿ ತ್ಯಾಜ್ಯಗಳ ಸಂಸ್ಕರಣ ಘಟಕ	₹10
ಆರ್.ಆರ್. ನಗರ ವಿಧಾನಸಭೆ ಕ್ಷೇತ್ರದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಮೂಲಸೌಕರ್ಯ	₹15
ಮಿಟ್ಟಗನಹಳ್ಳಿ/ ಕನ್ನೂರು ಲ್ಯಾಂಡ್‌ಫಿಲ್ ಪ್ರದೇಶಗಳ ಸುತ್ತ ಹಳ್ಳಿಗಳ ಅಭಿವೃದ್ಧಿ	₹20
ಬೆಳ್ಳಹಳ್ಳಿ ಮತ್ತು ಬಾಗಲೂರು ಲ್ಯಾಂಡ್ ಫಿಲ್ ಪ್ರದೇಶಗಳ ಸುತ್ತ ಹಳ್ಳಿಗಳ ಅಭಿವೃದ್ಧಿ ಕಾಮಗಾರಿ	₹20
ಬಿಬಿಎಂಪಿಯ 6 ತ್ಯಾಜ್ಯ ಸಂಸ್ಕರಣ ಘಟಕಗಳ ಸುತ್ತಮುತ್ತಲಿನ ಹಳ್ಳಿಗಳ (ಕನ್ನಹಳ್ಳಿ, ಕೆಸಿಡಿಸಿ, ಚಿಕ್ಕನಾಗಮಂಗಲ, ದೊಡ್ಡಬಿದರಕಲ್ಲು, ಸುಬ್ಬರಾಯನಪಾಳ್ಯ, ಸೀಗೇಹಳ್ಳಿ, ಲಿಂಗಧೀರಹಳ್ಳಿ) ಅಭಿವೃದ್ಧಿ ಕಾಮಗಾರಿ	₹10
ಎಂಎಸ್‌ಜಿಪಿ ತ್ಯಾಜ್ಯ ಸಂಸ್ಕರಣೆ ಘಟಕದ ಸುತ್ತಲಿನ ಹಳ್ಳಿಗಳ ಅಭಿವೃದ್ಧಿ ಕಾಮಗಾರಿ	₹10
ಒಟ್ಟು	₹275

ಪ್ರಾಣಿ ಆಹಾರ ಉತ್ಪಾದನೆ

ಪ್ರಾಣಿಗಳ ವರ್ಜ್ಯ, ತ್ಯಾಜ್ಯವನ್ನು ಸಂಗ್ರಹಿಸಿ, ಅದರಿಂದ ಪ್ರಾಣಿಗಳಿಗೆ ಆಹಾರವನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಬಿಬಿಎಂಪಿ ಜಾಗ ಮತ್ತು ಸೌಲಭ್ಯವನ್ನು ನೀಡಲಿದ್ದು, ಖಾಸಗಿ ಸಂಸ್ಥೆಯವರು ನಿರ್ವಹಣೆ ಮಾಡಿ, ನಾಯಿ ಸೇರಿದಂತೆ ಇತರೆ ಪ್ರಾಣಿಗಳಿಗೆ ಆಹಾರ ಉತ್ಪಾದಿಸಿ ಮಾರಾಟ ಮಾಡಲಿದ್ದಾರೆ. ಬಿಬಿಎಂಪಿ ಇಂತಿಷ್ಟು ಎಂದು ಹಣವನ್ನೂ ನೀಡಲಿದ್ದಾರೆ.

ಸುದ್ದಿ 2 ನಿಮಿಷ

'ರಕ್ತದ ಆಕರಕೋಶ: ದಾನಿಗಳ ಕೊರತೆ'

ಬೆಂಗಳೂರು: 'ರಕ್ತದ ಕ್ಯಾನ್ಸರ್ ಹಾಗೂ ರಕ್ತ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರಕೋಶ ಸಹಾಯಕ. ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರಕೋಶ ದಾನ ಮಾಡುವ ಮೂಲಕ ರೋಗಿಗಳ ಚೇತರಿಕೆಗೆ ನೆರವಾಗಬೇಕು' ಎಂದು ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್ ಮನವಿ ಮಾಡಿಕೊಂಡರು

ನಗರದಲ್ಲಿ ಬೆಂಗಳೂರು ಪ್ರೆಸ್ ಕ್ಲಬ್ ಸಹಯೋಗದಲ್ಲಿ ಫೌಂಡೇಷನ್ ಆಯೋಜಿಸಿದ್ದ ರಕ್ತದ ಆಕರಕೋಶ ದಾನಿಗಳ ನೋಂದಣಿ ಅಭಿಯಾನದಲ್ಲಿ ಮಾತನಾಡಿದ ಅವರು, 'ದಾನಿಗಳಿಂದ ಪಡೆದ ರಕ್ತದ ಆಕರ ಕೋಶಗಳನ್ನು ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ ಮಾಡಲಾಗುತ್ತದೆ. ರಕ್ತದ ಆಕರಕೋಶ ಅಗತ್ಯವಿರುವ ರೋಗಿಗಳಿಗೆ ಕುಟುಂಬದಲ್ಲಿ ಹೊಂದಾಣಿಕೆಯಾಗಬಲ್ಲ ದಾನಿಗಳು ಸಿಗುವುದು ಶೇ 30 ರಷ್ಟು ಮಾತ್ರ. ಉಳಿದವರು ಸಂಬಂಧಿಗಳಲ್ಲದ ದಾನಿಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ' ಎಂದರು.

'ದೇಶದಲ್ಲಿ ಪ್ರತಿವರ್ಷ ಲಕ್ಷಕ್ಕೂ ಅಧಿಕ ಮಂದಿ ರಕ್ತದ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಮಾಹಿತಿ ಕೊರತೆಯಿಂದಾಗಿ ಕೆಲವರು ರಕ್ತದ ಆಕರಕೋಶ ದಾನಕ್ಕೆ ಹಿಂದೇಟು ಹಾಕುತ್ತಾರೆ. ಭಾರತವು ಯುವ ಜನರನ್ನು ಹೊಂದಿರುವ ರಾಷ್ಟ್ರವಾಗಿರುವುದರಿಂದ ವಿದ್ಯಾರ್ಥಿಗಳ ಮೂಲಕ ರಕ್ತದ ಆಕರಕೋಶ ದಾನದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವುದು ನಮ್ಮ ಗುರಿಯಾಗಿದೆ' ಎಂದು ಹೇಳಿದರು.

ಬೆಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಬಿ.ಮಲ್ಲಪ್ಪ ಇದ್ದರು.

ಸ್ಮಶಾನಕ್ಕೆ ಜಾಗ ಮಂಜೂರು

ಯಲಹಂಕ: ಕೊಲುವರಾಯನಹಳ್ಳಿಯಲ್ಲಿ ನಡೆದ 'ಜಿಲ್ಲಾಧಿಕಾರಿ ನಡೆ-ಹಳ್ಳಿಯ ಕಡೆಗೆ' ಕಾರ್ಯಕ್ರಮದಲ್ಲಿ ನಗರ ಜಿಲ್ಲಾಧಿಕಾರಿ ಸಂಗಪ್ಪ ಅವರು ಗ್ರಾಮದಲ್ಲಿ ಸ್ಮಶಾನಕ್ಕಾಗಿ 37 ಗುಂಟೆ ಸರ್ಕಾರಿ ಜಾಗವನ್ನು ಮಂಜೂರು ಮಾಡಿ ಸ್ಥಳದಲ್ಲೇ ಮಂಜೂರಾತಿ ಪತ್ರ ವಿತರಿಸಿದರು.

ಕೆರೆ, ರಾಜಕಾಲುವೆ ಒತ್ತುವರಿ, ರೈತರಿಗೆ ಪಹಣಿ ಕಾಲಂ ಸಂಖ್ಯೆ 3 ಮತ್ತು 9ರ ತಿದ್ದುಪಡಿ, ಪಿಂಚಣಿ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ರೈತರು ಮತ್ತು ಸಾರ್ವಜನಿಕರಿಂದ ಅರ್ಜಿಗಳು ಬಂದಿವೆ. ಸ್ಥಳದಲ್ಲೇ ಕೆಲವು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಬಾಕಿಯಿರುವ ಅರ್ಜಿ ಪರಿಶೀಲಿಸಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಆದೇಶಿಸಲಾಗಿದೆ ಎಂದು ತಿಳಿಸಿದರು. 'ವಂಶವೃಕ್ಷ ಪಡೆಯಬೇಕಾದರೆ ಆಧಾರ್ ಸಂಖ್ಯೆ ಕಡ್ಡಾಯವಾಗಿ ನೀಡಬೇಕೆಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಅಣ್ಣತಮ್ಮಂದಿರ ಮಧ್ಯೆ ವ್ಯಾಜ್ಯ ಮತ್ತು ಕೆಲವರು ನಿಧನರಾಗಿ ಹಲವು ವರ್ಷಗಳು ಕಳೆದಿವೆ. ಇಂತಹ ಪರಿಸ್ಥಿತಿಯಲ್ಲಿ ಆಧಾರ್ ಸಂಖ್ಯೆ ಸಲ್ಲಿಸಲು ತುಂಬಾ ಕಷ್ಟವಾಗುತ್ತಿದೆ' ಎಂದು ದಿಬ್ಬೂರು ಗ್ರಾಮದ ನಿವಾಸಿ ಆಂಜಿನಪ್ಪ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ವಂಶ ವೃಕ್ಷಕ್ಕೆ ಸಂಬಂಧಿಸಿದಂತೆ ಆಧಾರ್ ಸಂಖ್ಯೆ ಕಡ್ಡಾಯಗೊಳಿಸದೇ ಸ್ಥಳದ ಮಹಜರು ಮಾಡಿ ಕುಟುಂಬದ ಸದಸ್ಯರ ಸಂಖ್ಯೆ ಮತ್ತು ಸಂಬಂಧಗಳ ಬಗ್ಗೆ ಖಾತ್ರಿ ಪಡಿಸಿಕೊಂಡು ವಂಶವೃಕ್ಷ ನೀಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಈಡಿಗ ನೌಕರರ ಸಂಘಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ

ಶ್ರೀನಿವಾಸ್.ಎಂ.

ಬೆಂಗಳೂರು: ಕರ್ನಾಟಕ ರಾಜ್ಯ ಈಡಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ನೂತನ ಅಧ್ಯಕ್ಷರಾಗಿ ಶ್ರೀನಿವಾಸ್.ಎಂ. ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೇಂದ್ರ ಕಾರ್ಯಕಾರಿಣಿಯಲ್ಲಿ ಈ ಆಯ್ಕೆ ಆಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ. ಮಂಜಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರ ಆದಾಯ 1.7 ಪಟ್ಟು ಹೆಚ್ಚಳ

ಮುಂಬೈ (ಪಿಟಿಐ): 2017–18ರ ಮಟ್ಟಕ್ಕೆ ಹೋಲಿಸಿದರೆ 2021–22ರಲ್ಲಿ ರೈತರ ಆದಾಯವು ಗರಿಷ್ಠ 1.7 ಪಟ್ಟು ಹೆಚ್ಚಳವಾಗಿದೆ ಎಂದು ಎಸ್‌ಬಿಐ ವರದಿ ಹೇಳಿದೆ.

ಮಹಾರಾಷ್ಟ್ರದಲ್ಲಿ ಸೋಯಾ ಬೆಳೆಯುವ ರೈತರ ಆದಾಯ, ಕರ್ನಾಟಕದಲ್ಲಿ ಹತ್ತಿ ಬೆಳೆಯುವ ರೈತರ ಆದಾಯವು ಈ ಅವಧಿಯಲ್ಲಿ ಎರಡು ಪಟ್ಟಿಗಿಂತ ಹೆಚ್ಚಾಗಿದೆ ಎಂದು ಎಸ್‌ಬಿಐ ಮುಖ್ಯ ಅರ್ಥಶಾಸ್ತ್ರಜ್ಞ ಸೌಮ್ಯಕಾಂತಿ ಘೋಷ್ ಸಿದ್ಧಪಡಿಸಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದಾಯದಲ್ಲಿ ಆಗಿರುವ ಏರಿಕೆಯ ಕಾರಣದಿಂದಾಗಿ ಈ ಅವಧಿಯಲ್ಲಿ ದೇಶದ ಜಿಡಿಪಿ ಕೃಷಿ ವಲಯದ ಪಾಲು ಶೇಕಡ 18.8ಕ್ಕೆ ಹೆಚ್ಚಳವಾಗಿದೆ.

ಮುಂದಿನ ತಿಂಗಳಲ್ಲೇ 'ನಮ್ಮ ಕ್ಲಿನಿಕ್' ಆರಂಭ

ಭಾನುವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಲ್ಲ 243 ವಾರ್ಡ್‌ಗಳಲ್ಲಿ ಮುಂದಿನ ತಿಂಗಳಲ್ಲೇ 'ನಮ್ಮ ಕ್ಲಿನಿಕ್'ಗಳನ್ನು ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಾವೇರಿನಗರದ ಶಿವ ದೇವಸ್ಥಾನದ ಬಳಿ ಭಾನುವಾರ ನಡೆದ ಸಮಾರಂಭದಲ್ಲಿ ಪಶ್ಚಿಮ ಕಾರ್ಡ್ ರಸ್ತೆಯಿಂದ ಹೊರ ವರ್ತುಲ ರಸ್ತೆ ಸಂಪರ್ಕಿಸುವ ಮೇಲ್ಸೇತುವೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಕೊಳೆಗೇರಿ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

'ಸರ್ಕಾರ ಬೆಂಗಳೂರಿನಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಜತೆಗೆ ಶಿಕ್ಷಣ ಮತ್ತು ಆರೋಗ್ಯಕ್ಕೂ ಆದ್ಯತೆ ನೀಡಿದೆ. ಬೆಂಗಳೂರಿನಲ್ಲಿ 20 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲಾಗುತ್ತಿದೆ. ಅಮೃತ ಯೋಜನೆಯಡಿ ನಗರದಲ್ಲಿ 75 ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಜನರಿಗೆ ವಾರ್ಡ್ ಮಟ್ಟದಲ್ಲೇ ವೈದ್ಯಕೀಯ ಸೌಲಭ್ಯ ಒದಗಿಸಲು ನಮ್ಮ ಕ್ಲಿನಿಕ್‌ಗಳನ್ನು ಆರಂಭಿಸಲಾಗುತ್ತಿದೆ' ಎಂದರು.

'ಅಮೃತ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿಗೆ ₹6,000 ಕೋಟಿ ಅನುದಾನ ಒದಗಿಸಲಾಗಿದೆ. 400 ಕಿ.ಮೀ. ಉದ್ದದ ರಾಜಕಾಲುವೆಗಳ ಅಭಿವೃದ್ಧಿಗೆ ₹1,600 ಕೋಟಿ ಒದಗಿಸಲಾಗಿದೆ. ₹15,000 ಕೋಟಿ ವೆಚ್ಚದ ಉಪನಗರ ರೈಲು ಯೋಜನೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಪೆರಿಫೆರಲ್ ವರ್ತುಲ ರಸ್ತೆ ಕಾಮಗಾರಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ನಮ್ಮ ಮೆಟ್ರೊ 2ನೇ ಹಂತದ ಕಾಮಗಾರಿಗಳನ್ನು 2024ರಲ್ಲೇ ಪೂರ್ಣಗೊಳಿಸಲು ಗಡುವು ನೀಡಲಾಗಿದೆ' ಎಂದು ಬೊಮ್ಮಾಯಿ ತಿಳಿಸಿದರು.

'ಹೊಸ ಮೇಲ್ಸೇತುವೆ ಕಾಮಗಾರಿಯು ತುಮಕೂರು ರಸ್ತೆ– ಮೈಸೂರು ರಸ್ತೆ ಸಂಪರ್ಕಿಸುವ 11 ಕಿ.ಮೀ. ಉದ್ದದ ಆರು ಪಥಗಳ ಕಾರಿಡಾರ್ ನಿರ್ಮಾಣದ ಭಾಗವಾಗಿದೆ. ಈ ಯೋಜನೆಯಿಂದ ಸುತ್ತಮುತ್ತಲ ಪ್ರದೇಶಗಳಲ್ಲಿ ಸಂಚಾರ ದಟ್ಟಣೆಯಲ್ಲಿ ಶೇಕಡ 40 ರಷ್ಟು ತಗ್ಗುವ ನಿರೀಕ್ಷೆ ಇದೆ' ಎಂದರು.

'ಬಿಬಿಎಂಪಿಯ ಪ್ರತಿ ವಾರ್ಡ್‌ನಲ್ಲೂ ಚುನಾಯಿತ ಪ್ರತಿನಿಧಿಗಳು ಇದ್ದರೆ ಅಭಿವೃದ್ಧಿ ಕೆಲಸಗಳ ವೇಗ ಹೆಚ್ಚುತ್ತದೆ. ಶೀಘ್ರದಲ್ಲೇ ಚುನಾವಣೆ ನಡೆಸಲಾಗುವುದು' ಎಂದರು.

ಅಧ್ಯಕ್ಷತೆ ವಹಿಸಿದ್ದ ಅಬಕಾರಿ ಸಚಿವ ಕೆ. ಗೋಪಾಲಯ್ಯ ಮಾತನಾಡಿ, 'ಮುಖ್ಯಮಂತ್ರಿಯವರು ನಮ್ಮ ಕ್ಷೇತ್ರಕ್ಕೆ ಅಮೃತ ನಗರೋತ್ಥಾನ ಯೋಜನೆಯಡಿ ₹220 ಕೋಟಿ ಅನುದಾನ ಒದಗಿಸಿದ್ದಾರೆ. ಮೇಲ್ಸೇತುವೆ ನಿರ್ಮಾಣಕ್ಕೆ ಪ್ರತ್ಯೇಕವಾಗಿ ₹ 55 ಕೋಟಿ ನೀಡಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕ್ಷೇತ್ರ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ' ಎಂದರು.

ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಾವೇರಿನಗರದ ಶಿವ ದೇವಸ್ಥಾನದ ಬಳಿ ಭಾನುವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು. ಸಚಿವರಾದ ಮುನಿರತ್ನ, ಕೆ. ಗೋಪಾಲಯ್ಯ, ಭೈರತಿ ಬಸವರಾಜ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇದ್ದರು

ರಾಜ್, ಪುನೀತ್ ಹೆಸರಿಡುವ ಪ್ರಸ್ತಾವ

'ಪಶ್ಚಿಮ ಕಾರ್ಡ್ ರಸ್ತೆಯಿಂದ ಹೊರ ವರ್ತುಲ ರಸ್ತೆಯನ್ನು ಸಂಪರ್ಕಿಸುವ ನೂತನ ಮೇಲ್ಸೇತುವೆಗೆ ಡಾ. ರಾಜ್ ಕುಮಾರ್ ಅಥವಾ ಪುನೀತ್ ರಾಜ್‌ಕುಮಾರ್ ಅವರ ಹೆಸರಿಡುವ ಪ್ರಸ್ತಾವವನ್ನು ಮಂಡಿಸುತ್ತೇನೆ' ಎಂದು ತೋಟಗಾರಿಕಾ ಸಚಿವ ಮುನಿರತ್ನ ಭರವಸೆ ನೀಡಿದರು.

ಕಾಮಗಾರಿಯನ್ನು 2022ರ ಮಾರ್ಚ್ 31ರೊಳಗೆ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ವೇದಿಕೆಯಲ್ಲೇ ಸೂಚನೆ ನೀಡಿದ ಸಚಿವರು, 'ಮುಖ್ಯಮಂತ್ರಿ ಬೊಮ್ಮಾಯಿ ಅವರೇ ಈ ಮೇಲ್ಸೇತುವೆ ಉದ್ಘಾಟಿಸುತ್ತಾರೆ' ಎಂದರು.

ಪುನೀತ್ ಅಭಿಮಾನಿಗಳ ಹರ್ಷೋದ್ಗಾರ

ನೂತನವಾಗಿ ರಚನೆಯಾಗಿರುವ ಪುನೀತ್ ರಾಜ್‌ಕುಮಾರ್ ವಾರ್ಡ್ (ಕಾವೇರಿನಗರ) ವ್ಯಾಪ್ತಿಯಲ್ಲೇ ಮೇಲ್ಸೇತುವೆ ಭೂಮಿ ಪೂಜೆ ನೆರವೇರಿತು. ಸಮಾರಂಭಕ್ಕೆ ಬಂದ ಮುಖ್ಯಮಂತ್ರಿ ಮತ್ತು ಸಚಿವರನ್ನು ಪುನೀತ್ ಅವರ ಅಭಿಮಾನಿಗಳು ಹರ್ಷೋದ್ಗಾರದೊಂದಿಗೆ ಸ್ವಾಗತಿಸಿದರು.

ಚಾಲುಕ್ಯ ಡಾ.ರಾಜ್ ಕುಮಾರ್ ಟ್ರಸ್ಟ್ ಮತ್ತು ಇತರ ಕನ್ನಡಪರ ಸಂಘಟನೆಗಳ ನೇತೃತ್ವದಲ್ಲಿ ಕುರುಬರಹಳ್ಳಿಯಲ್ಲಿರುವ ಡಾ. ರಾಜ್‌ಕುಮಾರ್ ಪ್ರತಿಮೆ ಎದುರು ನೂರಾರು ಮಂದಿ ಅಭಿಮಾನಿಗಳು ಪುನೀತ್ ಅವರ ಚಿತ್ರವುಳ್ಳ ಬಾವುಟ, ಫ್ಲೆಕ್ಸ್ ಹಿಡಿದು ಘೋಷಣೆ ಕೂಗಿದರು. ನೆಚ್ಚಿನ ನಟನ ಹೆಸರನ್ನು ವಾರ್ಡ್‌ಗೆ ನಾಮಕರಣ ಮಾಡಿರುವುದಕ್ಕೆ ಮುಖ್ಯಮಂತ್ರಿಯವರಿಗೆ ಜೈಕಾರ ಹಾಕಿದರು. ಸಮಾರಂಭದ ವೇದಿಕೆಯವರೆಗೂ ಮೆರವಣಿಗೆಯಲ್ಲಿ ಬಂದು, ಅಲ್ಲಿಯೂ ಘೋಷಣೆ ಕೂಗಿ ಸಂಭ್ರಮಿಸಿದರು.

'ಕನ್ನಡ ಸೇರಿ ಒಂಬತ್ತು ಭಾರತೀಯ ಭಾಷೆಗಳಲ್ಲಿ ಎಂಜಿನಿಯರಿಂಗ್ ಪಠ್ಯ'

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಅನುಷ್ಠಾನ ಕುರಿತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ದೆಹಲಿಯಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಕನ್ನಡ ಸೇರಿದಂತೆ ಒಂಬತ್ತು ಭಾರತೀಯ ಭಾಷೆಗಳಲ್ಲಿ ತಾಂತ್ರಿಕ ಶಿಕ್ಷಣ ಪಠ್ಯಗಳ ಅನುವಾದಗಳನ್ನು ಬಿಡುಗಡೆ ಮಾಡಲಾಗಿದೆ.

ಭಾರತೀಯ ಭಾಷೆಗಳಲ್ಲಿ ತಾಂತ್ರಿಕ ಶಿಕ್ಷಣದ ಬಗ್ಗೆ ಅರಿವು ಮೂಡಿಸಲು ತಾಂತ್ರಿಕ ವಿಶ್ವವಿದ್ಯಾಲಯಗಳ ಕುಲಪತಿಗಳು, ಎನ್‌ಐಟಿಗಳ ನಿರ್ದೇಶಕರು ಮತ್ತು ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಎಂಜಿನಿಯರಿಂಗ್‌ನ ಶಿಕ್ಷಣ ತಜ್ಞರು ಈ ಸಮಾವೇಶವನ್ನು ಆಯೋಜಿಸಿದ್ದರು.

ದೇಶದ ಎಲ್ಲ ಪ್ರಮುಖ ಪ್ರಾದೇಶಿಕ ಭಾಷೆಗಳನ್ನು ಮಾತನಾಡುವವರಿಗೆ ಎಂಜಿನಿಯರಿಂಗ್ ಪ್ರವೇಶ ಸುಲಭವಾಗಿಸುವುದು ಎಐಸಿಟಿಇ ಗುರಿ ಎಂದು ಮಂಡಳಿಯ ಅಧ್ಯಕ್ಷ ಪ್ರೊ. ಅನಿಲ್ ಡಿ. ಸಹಸ್ರಬುಧೆ ಹೇಳಿದರು.

ಭಾರತೀಯ ಭಾಷೆಗಳಲ್ಲಿ ಎಂಜಿನಿಯರಿಂಗ್ ಪುಸ್ತಕಗಳನ್ನು ಭಾಷಾಂತರಿಸಲು ಎಐಸಿಟಿಇಗೆ ನೆರವಾಗುತ್ತಿರುವ ವಿವಿಧ ರಾಜ್ಯಗಳ ಪ್ರಮುಖ ವ್ಯಕ್ತಿಗಳನ್ನು ಸಹ ಸಮಾವೇಶದಲ್ಲಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮರಾಠಿ, ಕನ್ನಡ, ತೆಲುಗು ಮತ್ತು ಹಿಂದಿ ಮುಂತಾದ ಭಾರತೀಯ ಭಾಷೆಗಳಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳನ್ನು (ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್) ಓದುತ್ತಿರುವ ವಿದ್ಯಾರ್ಥಿಗಳು ತಮ್ಮ ಅನುಭವ ಹಂಚಿಕೊಂಡರು.

ಎಐಸಿಟಿಇಯ ಉಪಾಧ್ಯಕ್ಷರಾದ ಪ್ರೊ. ಎಂ.ಪಿ. ಪೂನಿಯಾ ಮಾತನಾಡಿ 'ಎನ್‌ಇಪಿ 2020 ಭಾರತೀಯ ಭಾಷೆಗಳಲ್ಲಿ ಶಿಕ್ಷಣದ ಬಗ್ಗೆ ಅರಿವು ಮೂಡಿಸುತ್ತದೆ ಎಂದರು.

ಚಿತ್ರಾವಳಿ

ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಆಯ್ಕೆಯಾಗಿ ಉನ್ನತ ಹುದ್ದೆಗಳನ್ನು ಪಡೆದಿರುವ ಒಕ್ಕಲಿಗ ಸಮುದಾಯದ ಲೋಕೇಶ್ ಬಿ.ಎಸ್. ಕೃಪಾಲಿನಿ ಜಿ.ಕೆ., ಶ್ರುತಿ ಎಂ.ಕೆ., ಹರ್ಷವರ್ಧನ್ ಎಚ್.ಜಿ. ಮತ್ತು ರವೀಂದ್ರನ್ ಅವರನ್ನು ಚುಂಚಶ್ರೀ ಬಳಗವು ಒಕ್ಕಲಿಗರ ಸಂಘದ ಕೇಂದ್ರ ಕಚೇರಿ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸನ್ಮಾನಿಸಿತು. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್ ಜಿ., ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಚುಂಚಶ್ರೀ ಬಳಗದ ಮುಖ್ಯ ಸಂಚಾಲಕ ಗಾ.ನಂ. ಶ್ರೀಕಂಠಯ್ಯ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಕೋನಪ್ಪ ರೆಡ್ಡಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಇದ್ದರು – ಪ್ರಜಾವಾಣಿ ಚಿತ್ರ

ಯಲಹಂಕ ತಾಲ್ಲೂಕಿನ ಚಿಕ್ಕಜಾಲ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಆರ್.ಎಚ್.ಮಂಜುಳಾ ಪ್ರಸಾದ್‌ಕುಮಾರ್ ಅವರನ್ನು ಪಂಚಾಯಿತಿ ಸದಸ್ಯರು ಅಭಿನಂದಿಸಿದರು. ಮಂಜುಳಾ, ಅಂಜಲಿ, ಗೌರಿ, ಭವ್ಯಾ, ಅಮರಾವತಿ, ಉದಯಶಂಕರ್, ರವಿಕುಮಾರ್, ಪ್ರೇಮ್‌ಕುಮಾರ್, ವಿನೋದ್, ಹರ್ಷ, ಸತೀಶ್, ಪಿಡಿಒ ಡಿ.ವೆಂಕಟೇಶ್ ಇದ್ದರು

ಪೆರಿಫೆರಲ್ ವರ್ತುಲ ರಸ್ತೆಗೆ ಮತ್ತೆ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆಯನ್ನು (ಪಿಆರ್‌ಆರ್) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ನಿರ್ಮಾಣ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎರಡನೇ ಬಾರಿಗೆ ಟೆಂಡರ್ ಕರೆದಿದೆ.

ಈ ಹಿಂದೆ ಮಾರ್ಚ್‌ನಲ್ಲಿ ಕರೆದಿದ್ದ ಟೆಂಡರ್ ಅನ್ನು ಬಿಡಿಎ ಒಂದು ತಿಂಗಳ ಹಿಂದೆ ರದ್ದುಪಡಿಸಿತ್ತು. ಇದೀಗ 74 ಕಿ.ಮೀ ಉದ್ದದ 8 ಪಥಗಳ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣಕ್ಕೆ ಜುಲೈ 17ರಂದು ಟೆಂಡರ್ ಆಹ್ವಾನಿಸಿದೆ. ರೈಲ್ವೆ ಮೇಲ್ಸೇತುವೆ, ಕೆಳಸೇತುವೆ, ಟೋಲ್ ಪ್ಲಾಜಾ, ಪ್ರಮುಖ ಸೇತುವೆಗಳು ಸೇರಿದಂತೆ ಸೌಲಭ್ಯಗಳ ಡಕ್ಟ್ ಸೇರಿದಂತೆ ಹಲವು ಸೌಕರ್ಯಗಳನ್ನು ಒದಗಿಸಬೇಕಿದೆ. ಇದು ಪಿಪಿಪಿ ಮಾದರಿಯಲ್ಲಿ ನಿರ್ಮಾಣವಾಗಲಿದ್ದು, ಅಂದಾಜು 2,560 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಿದೆ ಎಂದು ಟೆಂಡರ್‌ನಲ್ಲಿ ತಿಳಿಸಲಾಗಿದೆ. ಆಗಸ್ಟ್ 30ರಂದು ತಾಂತ್ರಿಕ ಬಿಡ್ ತೆರೆಯಲಾಗುತ್ತದೆ.

'ಪಿಪಿಆರ್ ಯೋಜನೆಗೆ ಎಂಜಿನಿಯರಿಂಗ್ ಸುಮಾರು ₹7 ಸಾವಿರ ಕೋಟಿ ವೆಚ್ಚವಾಗುವ ಸಾಧ್ಯತೆ ಇದೆ. 2018ರಲ್ಲಿ ಅಂದಾಜು ಮಾಡಿದ್ದಕ್ಕಿಂತ ಸುಮಾರು 1,800 ಕೋಟಿ ಹೆಚ್ಚಾಗಲಿದೆ' ಎಂದು ಬಿಡಿಎ ಎಂಜಿನಿಯರ್ ಸದಸ್ಯ ಶಾಂತರಾಜಣ್ಣ ತಿಳಿಸಿದರು.

'ನ್ಯಾಯಯುತ ಪರಿಹಾರ ಹಕ್ಕು ಮತ್ತು ಭೂಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಕಾಯ್ದೆ–2013 ಅನ್ವಯವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದು ದೇಶದಾದ್ಯಂತ ಅನುಸರಿಸಲಾಗುತ್ತಿದೆ. ಹೀಗಾಗಿ ಭೂಸ್ವಾಧೀನಕ್ಕೆ ಬಿಡಿಎ ಕಾಯ್ದೆಯೇ ಅನ್ವಯವಾಗಲಿದೆ. ಸುಮಾರು ₹6 ಸಾವಿರ ಕೋಟಿ ಇದಕ್ಕಾಗಿ ಬೇಕಾಗಲಿದೆ. ಭೂಸ್ವಾಧೀನಕ್ಕೆ ಹೆಚ್ಚಿನ ಹಣ ನೀಡಬೇಕು ಎಂಬುದು ರೈತರ ಬೇಡಿಕೆಯಾಗಿದೆ. ಈ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ. ಸಚಿವ ಸಂಪುಟ ಸಭೆಯಲ್ಲಿ ಎಷ್ಟು ನಿರ್ಧಾರವಾಗುತ್ತದೆಯೋ ಅದರಂತೆ ಬಿಡಿಎ ನಡೆದುಕೊಳ್ಳುತ್ತದೆ' ಎಂದರು.

ಸಂಕ್ಷಿಪ್ತ ಸುದ್ದಿ

ಗಡಿ ಬಿಕ್ಕಟ್ಟು: ಭಾರತ, ಚೀನಾ ಮಧ್ಯೆ 16ನೇ ಸುತ್ತಿನ ಮಾತುಕತೆ

ನವದೆಹಲಿ: ಪೂರ್ವ ಲಡಾಖ್‌ನಲ್ಲಿ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿಯ ಗಡಿ ಬಿಕ್ಕಟ್ಟನ್ನು ಬಗೆಹರಿಸುವ ನಿಟ್ಟಿನಲ್ಲಿ ಭಾರತ ಮತ್ತು ಚೀನಾ ಮಿಲಿಟರಿ ಕಮಾಂಡರ್‌ಗಳ ಮಟ್ಟದ ಮಾತುಕತೆ ಭಾನುವಾರ ನಡೆಯಿತು.

ಭಾರತದ ಗಡಿಯಲ್ಲಿರುವ ಚುಶೂಲ್ ಠಾಣೆಯಲ್ಲಿ ನಡೆದ 16ನೇ ಸುತ್ತಿನ ಮಾತುಕತೆಯಲ್ಲಿ ಲೆಫ್ಟಿನೆಂಟ್ ಜನರಲ್ ಅನಿಂದ್ಯ ಸೇನ್‌ಗುಪ್ತ ನೇತೃತ್ವದ ಮಿಲಿಟರಿ ಅಧಿಕಾರಿಗಳ ನಿಯೋಗ ಪಾಲ್ಗೊಂಡಿತ್ತು. ಚೀನಾ ಸೇನಾಧಿಕಾರಿಗಳ ನಿಯೋಗದ ನೇತೃತ್ವವನ್ನು ಮೇಜರ್ ಜನರಲ್ ಯಾಂಗ್ ಲಿನ್ ವಹಿಸಿದ್ದರು.

ಸಂಘರ್ಷ ಏರ್ಪಟ್ಟ ಗಡಿ ಠಾಣೆಗಳಿಂದ ಯೋಧರನ್ನು ಸಂಪೂರ್ಣವಾಗಿ ಹಿಂದಕ್ಕೆ ಪಡೆಯಬೇಕು ಎಂಬ ತನ್ನ ವಾದವನ್ನು ಭಾರತ ಪುನರುಚ್ಚರಿಸಿತು ಎಂದು ಮೂಲಗಳು ಹೇಳಿವೆ.

ಕೇರಳ: ಮಾಜಿ ಸಚಿವ ಐಸಾಕ್‌ಗೆ ಇ.ಡಿ ನೋಟಿಸ್

ತಿರುವನಂತಪುರ: ಕೇರಳ ಮೂಲಸೌಕರ್ಯ ಬಂಡವಾಳ ಮಂಡಳಿಯಲ್ಲಿ (ಕೆಐಎಫ್‌ಎಫ್‌ಬಿ) ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿ ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ಮಾಜಿ ಹಣಕಾಸು ಸಚಿವ ಹಾಗೂ ಸಿಪಿಎಂ ನಾಯಕ ಥಾಮಸ್ ಐಸಾಕ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ಜಾರಿ ಮಾಡಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಥಾಮಸ್ ಐಸಾಕ್ ಅವರು, 'ನನಗೆ ಇ.ಡಿ ಯಿಂದ ಯಾವುದೇ ನೋಟಿಸ್ ಬಂದಿಲ್ಲ' ಎಂದು ಹೇಳಿದ್ದಾರೆ.

'ಒಂದು ವೇಳೆ ನನಗೆ ನೋಟಿಸ್ ಬಂದರೂ, ನಾನು ವಿಚಾರಣೆಗೆ ಹಾಜರಾಗುವುದಿಲ್ಲ. ನನಗೆ ಮಾಡಲು ಬೇರೆ ಮಹತ್ವದ ಕೆಲಸಗಳಿವೆ. ಅಧಿಕಾರಿಗಳು ನನ್ನನ್ನು ಬಂಧಿಸಬೇಕಾಗುತ್ತದೆ' ಎಂದೂ ಅವರು ಹೇಳಿದ್ದಾರೆ.

ನೀಟ್: ಶೇ 95ರಷ್ಟು ಹಾಜರಾತಿ

ನವದೆಹಲಿ (ಪಿಟಿಐ): ದೇಶದಾದ್ಯಂತ ಭಾನುವಾರ ನಡೆದ, ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪರೀಕ್ಷೆ 'ನೀಟ್'ಗೆ ಶೇ 95ರಷ್ಟು ಅಭ್ಯರ್ಥಿಗಳು ಹಾಜರಾಗಿದ್ದರು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ತಿಳಿಸಿದೆ.

'ಪರೀಕ್ಷೆಗಾಗಿ 18,72,329 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು. ಈ ಪೈಕಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 10.64 ಲಕ್ಷ ಇತ್ತು. ಇದೇ ಮೊದಲ ಬಾರಿಗೆ ನೀಟ್‌ಗಾಗಿ ನೋಂದಣಿ ಮಾಡಿಸಿದ ಅಭ್ಯರ್ಥಿಗಳ ಸಂಖ್ಯೆ 18 ಲಕ್ಷದ ಗಡಿ ದಾಟಿತ್ತು' ಎಂದು ಎನ್‌ಟಿಎ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇಂಧನ ಸಚಿವ ಸುನೀಲ್ ಕುಮಾರ್ ಹೇಳಿಕೆ

'ಬೆಳಕು': ಅನುಮತಿ ಕಡ್ಡಾಯವಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಕು ಯೋಜನೆ ಅಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯ್ತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ(ಬಿಬಿಎಂಪಿ) ಅನುಮತಿ ಕಡ್ಡಾಯವಲ್ಲ (ನಿರಾಕ್ಷೇಪಣಾ ಪತ್ರ) ಎನ್ನುವ ಆದೇಶ ಹೊರಡಿಸಲಾಗಿದೆ' ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ಹೇಳಿದರು.

ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘವು ನಗರದಲ್ಲಿ ಭಾನುವಾರ ಆಯೋಜಿಸಿದ್ದ ವಿದ್ಯುತ್ ಗುತ್ತಿಗೆದಾರರ ಸಮಾವೇಶ ಹಾಗೂ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ವಿದ್ಯುತ್ ಸಂಪರ್ಕ ಪಡೆಯಲು ನಾಲ್ಕೂವರೆ ವರ್ಷಗಳ ವಾಸಸ್ಥಳ ದೃಢೀಕರಣ ಪತ್ರ ನೀಡಬೇಕೆಂದು ಹಿಂದಿನ ಸರ್ಕಾರವು ಆದೇಶಿಸಿತ್ತು. ನಮ್ಮ ಸರ್ಕಾರವು ವಾಸ ದೃಢೀಕರಣ ಪತ್ರ ರದ್ದು ಪಡಿಸಿದೆ. ಇದರಿಂದ, ಗ್ರಾಹಕರಿಗೆ ಅನುಕೂಲವಾಗಿದೆ. ವಿದ್ಯುತ್ ಪರಿವರ್ತಕಗಳನ್ನು ನಾಲ್ಕು ಗಂಟೆಯಲ್ಲೇ ಬದಲಾವಣೆ ಮಾಡಲು ಕಾರ್ಯಾದೇಶ ನೀಡಲಾಗಿದೆ. ಹೆಸ್ಕಾಂ, ಬೆಸ್ಕಾಂ, ಸೆಸ್ಕ್‌ನಲ್ಲಿ ಏಕದರ ನಿಗದಿ ಪಡಿಸಲಾಗುವುದು' ಎಂದು ವಿವರಣೆ ನೀಡಿದರು.

ಗುತ್ತಿಗೆದಾರರ ಸಂಘದ ರಾಜ್ಯ ಅಧ್ಯಕ್ಷ ಸಿ.ರಮೇಶ್ ಅವರು ಮಾತನಾಡಿ, 'ರಾಜ್ಯ ವಿದ್ಯುತ್ ಗುತ್ತಿಗೆದಾರರ ಸಂಘಕ್ಕೆ 100 ವರ್ಷಗಳ ಇತಿಹಾಸವಿದೆ. ವಿದ್ಯುತ್ ಗುತ್ತಿಗೆದಾರರ ಸಂಕಷ್ಟ ಹಾಗೂ ಸಮಸ್ಯೆಗಳ ಪರಿಹರಿಸಲು ಸಂಘವು ಸತತವಾಗಿ ಶ್ರಮಿಸುತ್ತಿದೆ' ಎಂದು ಹೇಳಿದರು.

'ರಾಜ್ಯದಲ್ಲಿ 30 ಸಾವಿರ ವಿದ್ಯುತ್ ಗುತ್ತಿಗೆದಾರರು ಇದ್ದಾರೆ. ಇವರನ್ನೇ ನಂಬಿ 10 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ₹ 1 ಲಕ್ಷದಿಂದ ₹ 5 ಲಕ್ಷದ ತನಕ ತುಂಡು ಗುತ್ತಿಗೆ ನೀಡಬೇಕು. ಪ್ಯಾಕೇಜ್ ಮಾಡುವುದರಿಂದ ಸಣ್ಣಪುಟ್ಟ ಗುತ್ತಿಗೆದಾರರಿಗೆ ತೊಂದರೆ ಆಗಲಿದೆ' ಎಂದು ಅವರು ಈ ವೇಳೆ ಮಾಹಿತಿ ನೀಡಿದರು.

ಸಂಘದ ವೆಬ್‌ಸೈಟ್ ಮತ್ತು ಲಾಂಛನ ಬಿಡುಗಡೆ ಮಾಡಲಾಯಿತು.

ಇದೇ ವೇಳೆ ಗುತ್ತಿಗೆದಾರರ ಸಂಘವು ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಸಚಿವರಿಗೆ ಮನವಿ ಸಲ್ಲಿಸಿತು. ಉಪಾಧ್ಯಕ್ಷರಾದ ಎಂ.ಎನ್.ಉಮೇಶ್, ಊರ್ಬನ್ ಪಿಂಟೊ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಚಂದ್ರಬಾಬು, ಸಹ ಕಾರ್ಯದರ್ಶಿ ಅನ್ವರ್ ಮಿಯಾ, ಸಂಘಟನಾ ಕಾರ್ಯದರ್ಶಿ ಶಿವಾನಂದ ಬಿ. ಬಾಲಪ್ಪನವರ್, ಕೋಶಾಧ್ಯಕ್ಷ ಕ.ಚಂದ್ರಬಾಬು ಅವರುಗಳು ಹಾಜರಿದ್ದರು.

ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಆಯೋಜಿಸಿದ್ದ ವಿದ್ಯುತ್ ಗುತ್ತಿಗೆದಾರರ ಸಮಾವೇಶದಲ್ಲಿ ಇಂಧನ ಸಚಿವ ವಿ.ಸುನೀಲ್ ಕುಮಾರ್ ಅವರನ್ನು ಅಭಿನಂದಿಸಲಾಯಿತು. ವಿಧಾನ ಪರಿಷತ್ ಸದಸ್ಯ ಎಸ್. ಕೇಶವ ಪ್ರಸಾದ್, ಗುತ್ತಿಗೆದಾರರ ಸಂಘದ ರಾಜ್ಯ ಅಧ್ಯಕ್ಷ ಸಿ. ರಮೇಶ್, ಉಪಾಧ್ಯಕ್ಷರಾದ ಎಂ.ಎನ್. ಉಮೇಶ್, ಊರ್ಬನ್ ಪಿಂಟೊ, ಪ್ರಧಾನ ಕಾರ್ಯದರ್ಶಿ ಎಚ್.ವಿ.ಚಂದ್ರಬಾಬು ಇದ್ದರು —ಪ್ರಜಾವಾಣಿ ಚಿತ್ರ

ವಿದ್ಯುತ್ ಗುತ್ತಿಗೆದಾರಿಗೆ ಸರ್ಕಾರವು ನೆರವು ಕಲ್ಪಿಸುತ್ತಿದೆ. ಸಣ್ಣ ಗುತ್ತಿಗೆದಾರರೂ ಬದುಕಬೇಕು
ವಿ.ಸುನೀಲ್ ಕುಮಾರ್, ಇಂಧನ ಸಚಿವ

ವಿದ್ಯುತ್ ಗುತ್ತಿಗೆದಾರರ ಸಂಘದ ಸಾಮಾಜಿಕ ಸೇವೆ ಗುರುತಿಸಿ, ಸಂಘಕ್ಕೆ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು
ಸಿ.ರಮೇಶ್, ಅಧ್ಯಕ್ಷ, ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ

ಸೋಮವಾರ, ಜುಲೈ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 198 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಓದಿದ ವಿಷಯ
ನೆನಪಿಟ್ಟುಕೊಳ್ಳಲು
ನೂರೆಂಟು ದಾರಿಗಳಿವೆ.
ಆ ಮಾರ್ಗಗಳ ಕುರಿತ
ಮಾಹಿತಿ ಇಲ್ಲಿದೆ...



ಆಳ-ಅಗಲ
ರಾಷ್ಟ್ರಪತಿ ಚುನಾವಣೆ: ಒಗ್ಗಟ್ಟು ತೋರಲು ವಿಪಕ್ಷಗಳು ವಿಫಲ

ಲಸಿಕೆ: 200 ಕೋಟಿ ಡೋಸ್ ಮೈಲಿಗಲ್ಲು 9

ಶ್ರೀಲಂಕಾ: 100ನೇ ದಿನಕ್ಕೆ ಜನಹೋರಾಟ 10

ಇದೇ 21 ರಂದು ಫಲಿತಾಂಶ ಪ್ರಕಟ
ರಾಷ್ಟ್ರಪತಿ ಚುನಾವಣೆ ಇಂದು 9

ಸರ್ಕಾರ, ವಿಪಕ್ಷ ಸದನಕ್ಕೆ ಸಜ್ಜು

ಮುಂಗಾರು ಅಧಿವೇಶನ ಇಂದಿನಿಂದ: ಅಗ್ನಿಪಥ, ಬೆಲೆ ಏರಿಕೆ ಚರ್ಚೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಪರಸ್ಪರ ಮುಖಾಮುಖಿಯಾಗಲು ಸರ್ಕಾರ ಮತ್ತು ವಿರೋಧ ಪಕ್ಷಗಳು ಸಜ್ಜಾಗಿವೆ. ರಕ್ಷಣಾ ಪಡೆಗಳ ಅಲ್ಪಾವಧಿ ನೇಮಕಾತಿಯ ಅಗ್ನಿಪಥ ಯೋಜನೆ, ನಿರುದ್ಯೋಗ ಮತ್ತು ಕೇಂದ್ರೀಯ ತನಿಖಾ ಸಂಸ್ಥೆಗಳ ದುರ್ಬಳಕೆಯಂತಹ ವಿಚಾರಗಳಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ವಿರೋಧ ಪಕ್ಷಗಳು ಸಿದ್ಧವಾಗಿವೆ. ವಿರೋಧ ಪಕ್ಷಗಳಿಗೆ ತಕ್ಕ ಎದುರೇಟು ನೀಡಲು ಸರ್ಕಾರವೂ ಸಜ್ಜಾಗಿದೆ.

24 ಹೊಸ ಮಸೂದೆಗಳು ಸಂಸತ್ತಿನಲ್ಲಿ ಮಂಡನೆಯಾಗಲು ಕಾದಿವೆ. ಈಗಾಗಲೇ ಮಂಡನೆಯಾಗಿರುವ ಎಂಟು ಮಸೂದೆಗಳು ಬಾಕಿ ಇವೆ. ಮುಂಗಾರು ಅಧಿವೇಶನವು ಸೋಮವಾರ ಆರಂಭವಾಗಿ ಆಗಸ್ಟ್ 12ರಂದು ಕೊನೆಯಾಗಲಿದೆ. ಒಟ್ಟು 26 ದಿನಗಳಲ್ಲಿ 18 ದಿನ ಕಲಾಪ ನಡೆಯಲಿದೆ. ಈ ಅಧಿವೇಶನದ ಅವಧಿಯಲ್ಲೇ ರಾಷ್ಟ್ರಪತಿ, ಉಪರಾಷ್ಟ್ರಪತಿ ಸ್ಥಾನಗಳಿಗೆ ಚುನಾವಣೆ ಮತ್ತು ಮತ ಎಣಿಕೆ ನಡೆಯಲಿರುವುದು ವಿಶೇಷ.

ಅಧಿವೇಶನದ ಮುನ್ನಾದಿನ ಅಂದರೆ ಭಾನುವಾರ ಸರ್ವಪಕ್ಷ ಸಭೆ ನಡೆಸಲಾಗಿದೆ. ಈ ಸಭೆಯಲ್ಲಿ 35 ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಅಧಿವೇಶನದಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಸಿದ್ಧ ಎಂಬ ಸಂದೇಶವನ್ನು ವಿರೋಧ ಪಕ್ಷಗಳು ಈ ಸಭೆಯಲ್ಲಿ ನೀಡಿವೆ.

8ನೇ ಪುಟ ನೋಡಿ

ಪದ ನಿಷೇಧ ಇಲ್ಲ: ಸರ್ಕಾರದ ಸ್ಪಷ್ಟನೆ

ಇತ್ತೀಚೆಗೆ ವಿವಾದಕ್ಕೆ ಕಾರಣವಾಗಿದ್ದ ‘ಅಸಂಸದೀಯ ಅಭಿವ್ಯಕ್ತಿಗಳು’ ಎಂಬ ಹೊಸ ಕಿರುಹೊತ್ತಗೆಯ ಬಗ್ಗೆ ಸಭೆಯಲ್ಲಿ ಚರ್ಚೆ ಆಗಿದೆ. ಯಾವುದೇ ಪದವನ್ನು ನಿಷೇಧಿಸಲಾಗಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಆದರೆ, ಮಾತನಾಡುವಾಗ ಹೆಚ್ಚಿನ ಎಚ್ಚರ ವಹಿಸಬೇಕು ಎಂದು ಸಂಸದರನ್ನು ಸರ್ಕಾರ ಕೋರಿದೆ. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರ ಮೇಲೆ ಈ ಕಿರುಹೊತ್ತಗೆಯ ವಿಚಾರದಲ್ಲಿ ಅನಗತ್ಯ ವಾಗ್ದಾಳಿ ನಡೆಸಲಾಗಿದೆ ಎಂದು ಬಿಜೆಡಿಯ ಪಿನಾಕಿ ಮಿಶ್ರಾ ಹೇಳಿದರು.

ಮಹಿಳಾ ಮೀಸಲು ಮಸೂದೆಯನ್ನು ಶೀಘ್ರವೇ ಅಂಗೀಕರಿಸಬೇಕು ಎಂದೂ ಅವರು ಒತ್ತಾಯಿಸಿದರು.

ಪ್ರಧಾನಿ ಮೋದಿ ಗೈರುಹಾಜರಿಗೆ ಆಕ್ಷೇಪ

ಪ್ರಧಾನಿ ನರೇಂದ್ರ ಮೋದಿ ಅವರು ಸರ್ವಪಕ್ಷ ಸಭೆಗೆ ಹಾಜರಾಗದಿರುವುದಕ್ಕೆ ಕಾಂಗ್ರೆಸ್ ಪಕ್ಷವು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ‘ಸಂಸತ್ತಿನ ಮುಂಬರುವ ಅಧಿವೇಶನದ ಬಗ್ಗೆ ಚರ್ಚಿಸಲು ಸರ್ವಪಕ್ಷ ಸಭೆ ನಡೆದಿದೆ. ಪ್ರಧಾನಿ ಮೋದಿ ಅವರು ಎಂದಿನಂತೆ ಗೈರುಹಾಜರಾಗಿದ್ದಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ. ‘ಇದು ಅಸಂಸದೀಯ ಅಲ್ಲವೇ’ ಎಂದು ಅವರು ಪ್ರಶ್ನಿಸಿದ್ದಾರೆ. ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಶಿ, ಜೈರಾಮ್ ಟ್ವೀಟ್‌ಗೆ ಉತ್ತರ ನೀಡಿದ್ದಾರೆ. ‘2014ಕ್ಕೂ ಮುಂಚೆ ಕಾಂಗ್ರೆಸ್ ಸರ್ಕಾರ ಇದ್ದಾಗ, ಸರ್ವಪಕ್ಷ ಸಭೆಯಲ್ಲಿ ಪ್ರಧಾನಿ ಎಂದೂ ಭಾಗಿಯಾಗಿರಲಿಲ್ಲ’ ಎಂದು ಜೋಶಿ ಹೇಳಿದ್ದಾರೆ.

ಭಾರತದ ಪಿ.ವಿ. ಸಿಂಧು ಭಾನುವಾರ ಸಿಂಗಪುರ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಪ್ರಶಸ್ತಿ ಜಯಿಸಿದರು. ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಸಿಂಧು, ಚೀನಾದ ವಾಂಗ್ ಜಿ ಯಿ ಅವರನ್ನು ಮಣಿಸಿದರು 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಾರ್ಗರೇಟ್ ಆಳ್ವ ವಿರೋಧ ಪಕ್ಷಗಳ ಅಭ್ಯರ್ಥಿ

ನವದೆಹಲಿ: ಉಪರಾಷ್ಟ್ರಪತಿ ಚುನಾವಣೆಗೆ ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಕರ್ನಾಟಕದ ಮಾರ್ಗರೇಟ್ ಆಳ್ವ (80) ಅವರನ್ನು ಆಯ್ಕೆ ಮಾಡಲಾಗಿದೆ. ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರ ನಿವಾಸದಲ್ಲಿ ಭಾನುವಾರ ನಡೆದ 17 ಪಕ್ಷಗಳ ಮುಖಂಡರ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು.

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಾಗೂ ಆಮ್ ಆದ್ಮಿ ಪಕ್ಷಗಳ (ಎಎಪಿ) ಬೆಂಬಲವೂ ಆಳ್ವ ಅವರಿಗೆ ಸಿಕ್ಕಿದ್ದು, ಒಟ್ಟು 19 ಪಕ್ಷಗಳು ಅವರ ಉಮೇದುವಾರಿಕೆಯನ್ನು ಬೆಂಬಲಿಸಿವೆ. ಈ ಚುನಾವಣೆಯಲ್ಲಿ ಜೆಎಂಎಂ ಸಹ ವಿರೋಧ ಪಕ್ಷಗಳ ಜತೆಗಿದೆ ಎಂದು ಪವಾರ್ ಹೇಳಿದ್ದಾರೆ.

ರಾಜ್ಯಪಾಲರಾಗಿ, ಕೇಂದ್ರ ಸಚಿವೆಯಾಗಿ ಕೆಲಸ ಮಾಡಿರುವ ಆಳ್ವ ಅವರು ಮಂಗಳವಾರ ನಾಮಪತ್ರ ಸಲ್ಲಿಸಲಿದ್ದಾರೆ. ತಮ್ಮ ಮೇಲೆ ವಿಶ್ವಾಸವಿಟ್ಟು ಚುನಾವಣಾ ಕಣಕ್ಕೆ ಇಳಿಸಲು ನಿರ್ಧರಿಸಿರುವ ವಿರೋಧ ಪಕ್ಷಗಳಿಗೆ ಅವರು ಧನ್ಯವಾದ ಹೇಳಿದ್ದಾರೆ.

ಆಗಸ್ಟ್ 6ರಂದು ಚುನಾವಣೆ ನಡೆಯಲಿದ್ದು, ಎನ್‌ಡಿಎ ಅಭ್ಯರ್ಥಿಯನ್ನಾಗಿ ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನಕರ್ ಅವರನ್ನು ಕಣಕ್ಕಿಳಿಸಲಾಗಿದೆ.

ಇನ್ನೊಂದು ಸುದ್ದಿ 9

ಮೊಸರು, ಮಜ್ಜಿಗೆ ದರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಂದಿನಿ’ ಬ್ರ್ಯಾಂಡ್‌ನ ಮೊಸರು, ಲಸ್ಸಿ ಮತ್ತು ಮಜ್ಜಿಗೆಯ ಬಿಡಿ ಮಾರಾಟ ದರಗಳು ಸೋಮವಾರದಿಂದ (ಜುಲೈ 18) ₹1ರಿಂದ ₹3 ರಷ್ಟು ಏರಿಕೆಯಾಗಲಿವೆ.

200 ಗ್ರಾಂ ಮೊಸರು ಪೊಟ್ಟಣದ (ಸ್ಯಾಷೆ) ದರ ₹10 ರಿಂದ ₹12ಕ್ಕೆ ಹೆಚ್ಚಳವಾಗಿದೆ. 200 ಮಿ.ಲೀ. ಪೊಟ್ಟಣ ಮಜ್ಜಿಗೆ ದರವು ₹7 ರಿಂದ ₹8ಕ್ಕೆ ಮತ್ತು 200 ಮಿ.ಲೀ. ಪೊಟ್ಟಣದ ಲಸ್ಸಿ ದರವನ್ನು ₹10ರಿಂದ 11ಕ್ಕೆ ಹೆಚ್ಚಿಸಲಾಗಿದೆ.

ಇತ್ತೀಚೆಗೆ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಡೇರಿ ಮತ್ತು ಇತರ ಆಹಾರಗಳ ಪ್ಯಾಕೇಜ್ ಉತ್ಪನ್ನಗಳಿಗೆ ನೀಡಿದ್ದ ವಿನಾಯಿತಿ ರದ್ದುಪಡಿಸಿ, ಈ ಉತ್ಪನ್ನಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ವಿಧಿಸಲು ತೀರ್ಮಾನಿಸಲಾಗಿತ್ತು.

ಮೊಸರು, ಮಜ್ಜಿಗೆ, ಸಿಹಿ ಲಸ್ಸಿ ಉತ್ಪನ್ನಗಳ ಮೇಲೆ ಜಿಎಸ್‌ಟಿ ವಿಧಿಸಿರುವುದರಿಂದ ನಂದಿನಿ ಮೊಸರು, ಮಜ್ಜಿಗೆ, ಲಸ್ಸಿ ಪೊಟ್ಟಣಗಳ ಮೇಲಿನ ದರ ಪರಿಷ್ಕರಿಸಲಾಗಿದೆ ಎಂದು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ಪ್ರಕಟಣೆ ತಿಳಿಸಿದೆ.

10ನೇ ಪುಟ ನೋಡಿ





‘ವಾರದೊಳಗೆ ಸಿಇಟಿ ಫಲಿತಾಂಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಇನ್ನೊಂದು ವಾರದಲ್ಲಿ ಪ್ರಕಟವಾಗುವ ನಿರೀಕ್ಷೆ ಇದೆ.

ಈ ಬಗ್ಗೆ ಮಾಹಿತಿ ನೀಡಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ, ‘ಕೇಂದ್ರೀಯ ಪಠ್ಯದ ಸಿಬಿಎಸ್‌ಇ ಮತ್ತು ಐಸಿಎಸ್‌ಇ 12ನೇ ತರಗತಿ ಫಲಿತಾಂಶ ಬರಬೇಕಿದೆ. ಐಸಿಎಸ್‌ಇ 10ನೇ ತರಗತಿಯ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ಇನ್ನೆರಡು ದಿನಗಳಲ್ಲಿ 12ನೇ ತರಗತಿಯ ಫಲಿತಾಂಶವೂ ಪ್ರಕಟವಾಗುವ ನಿರೀಕ್ಷೆ ಇದೆ’ ಎಂದರು.

‘ಸಿಇಟಿ ಫಲಿತಾಂಶ ಪ್ರಕಟಿಸಲು ಸಿಬಿಎಸ್‌ಇ ಮತ್ತು ಐಸಿಎಸ್‌ಇ 12ನೇ ತರಗತಿ ಫಲಿತಾಂಶದ ಅಂಕಗಳು ಬೇಕಾಗಿದೆ. ಈ ಫಲಿತಾಂಶ ಪ್ರಕಟವಾದ ನಂತರ ಅಂಕಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ವಿದ್ಯಾರ್ಥಿಗಳಿಗೆ ಮೂರು ದಿನ ಅವಕಾಶ ನೀಡಲಾಗುವುದು. ನಂತರವಷ್ಟೆ ಫಲಿತಾಂಶ ಪ್ರಕಟಿಸಲು ಸಾಧ್ಯವಾಗಲಿದೆ’ ಎಂದರು.

ಜೂನ್ 16 ಮತ್ತು 17 ಸಿಇಟಿ, 18 ರಂದು ಹೊರನಾಡು ಹಾಗೂ ಗಡಿಭಾಗದ ವಿದ್ಯಾರ್ಥಿಗಳಿಗೆ ಕನ್ನಡ ಪರೀಕ್ಷೆಯನ್ನು ನಡೆದಿತ್ತು.

3M ಇಂಡಿಯಾ ಲಿಮಿಟೆಡ್

(CIN: L31300KA1987PLC013543)

ನೋಂದಾಯಿತ ಕಛೇರಿ: ಪ್ಲಾಟ್ ನಂ. 48–51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100, **ಕಾರ್ಪೊರೇಟ್ ಕಛೇರಿ:** ವಿವರ್ಕ್ ಪ್ರೆಸ್ಟೀಜ್ ಸೆಂಟ್ರಲ್, 3ನೇ ಮಹಡಿ, 36 ಇನ್‌ಫೆಂಟ್ರಿ ರಸ್ತೆ, ಟಸ್ಕರ್ ಟೌನ್, ಬೆಂಗಳೂರು–560 001. ದೂರವಾಣಿ: 080–22231414, ಫ್ಯಾಕ್ಸ್: 080–2223 1450, ಇಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com/in

35ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ.

ಆತ್ಮೀಯ ಸದಸ್ಯರೇ,

1. ಎಜಿಎಂ ನೋಟಿಸಿನಲ್ಲಿ ತಿಳಿಸಲಾಗಿರುವಂತಹ ವ್ಯವಹಾರಗಳನ್ನು ನಡೆಸುವ ಸಲುವಾಗಿ **‘ಕಂಪನಿ’ಯು ತನ್ನ 35ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಗುರುವಾರ, ಆಗಸ್ಟ್ 25, 2022ರಂದು ಬೆಳಿಗ್ಗೆ 10.30 ಗಂಟೆಗೆ (ಭಾ.ಕಾ.) ವಿಡಿಯೊ ಕಾನ್ಫರೆನ್ಸ್ (VC)/ಇತರ ಶ್ರವಣ ದೃಶ್ಯ ಮಾಧ್ಯಮಗಳ (OAVM) ಮೂಲಕ,** ಸದಸ್ಯರ ಭೌತಿಕ ಹಾಜರಾತಿ ಇಲ್ಲದೆಯೇ ಒಂದು ಸಾಮಾನ್ಯ ಸ್ಥಳದಲ್ಲಿ, ಕಾರ್ಪೊರೇಟ್ ಸಚಿವಾಲಯವು ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂ.02/2022 ಅನ್ನು ಸಂ. 14/2020, 17/2020, 20/2020, 02/2021 ಮತ್ತು 19/2021 ಸಾಮಾನ್ಯ ಸುತ್ತೋಲೆಗಳ ಮತ್ತು ಅನ್ವಯವಾಗುವ ಇತರ ಎಲ್ಲ ಕಾನೂನುಗಳು ಮತ್ತು ಸುತ್ತೋಲೆಗಳ ಜೊತೆ ಓದಿಕೊಂಡ ಪ್ರಕಾರ, ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿರುವ ಮೇ 13, 2022 ಸುತ್ತೋಲೆಯನ್ನು ಜನವರಿ 15, 2021 ಹಾಗೂ ಮೇ 12, 2020 ದಿನಾಂಕಗಳಂದು ಅನುಕ್ರಮವಾಗಿ ಹೊರಡಿಸಿರುವ ಸುತ್ತೋಲೆಗಳ (ಒಟ್ಟಾಗಿ ‘ಸುತ್ತೋಲೆಗಳು’ ಎಂದು ಉಲ್ಲೇಖಿಸಲಾಗುವುದು) ಜೊತೆ ಓದಿಕೊಂಡ ಪ್ರಕಾರ ನಡೆಸಲಾಗುವುದು ಎಂದು ಈ ಸೂಚನೆಯನ್ನು ನೀಡಲಾಗಿದೆ. ಎಜಿಎಂ ವ್ಯವಹರಣೆಗಳನ್ನು ಕಂಪನಿಯ ನೋಂದಾಯಿತ ಕಛೇರಿಯಲ್ಲಿಯೇ ನಡೆಸಲಾಗಿದೆ ಎಂದು ಪರಿಗಣಿಸಲಾಗುವುದು ಮತ್ತು ಇದನ್ನೇ ಎಜಿಎಂ ಸ್ಥಳವೆಂದು ಭಾವಿಸಲಾಗುವುದು;
2. ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಷೇರುದಾರರಿಗೆ ಮೇಲಿನ ಸುತ್ತೋಲೆಗಳ ಅನುಸಾರ ‘ಎಜಿಎಂ’ನ ಸೂಚನೆಯ ಮತ್ತು 2021–22ನೇ ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಸಕಾಲದಲ್ಲಿ ಇಮೇಲ್ ಮೂಲಕ ಮಾತ್ರವೇ ಕಳುಹಿಸಲಾಗುವುದು. investorhelpdesk.in@mmm.com ಮತ್ತು Rajeev.kr@kfintech.com ನಲ್ಲಿ ತಮ್ಮ ಪುಟ ಸಂಖ್ಯೆ/ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ ಗಳ ಸಹಿತವಾಗಿ ವಿನಂತಿ ಸಲ್ಲಿಸಿದ ಸದಸ್ಯರಿಗೆ 2021–22 ವಿತ್ತೀಯ ವರ್ಷದ ವಾರ್ಷಿಕ ವರದಿಯ ಕಾಗದ ಪ್ರತಿಯನ್ನು ಕಳುಹಿಸುತ್ತದೆ;
3. ‘ಎಜಿಎಂ’ನಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಮತಚಲಾವಣೆ ಹಾಗೂ VC/OAVM ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕಂಪನಿಯು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL) ಸಂಸ್ಥೆಯನ್ನು ನೇಮಕಮಾಡಿಕೊಂಡಿದೆ;
4. 2021–22ನೇ ವಿತ್ತೀಯ ವರ್ಷದ ವಾರ್ಷಿಕ ವರದಿಯ ಜೊತೆಗೆ ಎಜಿಎಂ ಸೂಚನೆಯನ್ನು ಕೂಡ ಕಂಪನಿಯ https://www.3mindia.in/3M/en_IN/company-in/about-3m/financial-facts-local/, ಹಾಗೂ ಸ್ಟಾಕ್ ಎಕ್ಸ್‌ಚೇಂಜುಗಳಾದ ಬಿಎಸ್‌ಇ ಲಿಮಿಟೆಡ್‌ನ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com/ ವೆಬ್‌ಸೈಟುಗಳಲ್ಲಿ ಮತ್ತು ಇ-ಮತದಾನದ ಏಜೆನ್ಸಿಯಾದ ಎನ್‌ಎಸ್‌ಡಿಎಲ್‌ನ https://www.evoting.nsdl.com ವೆಬ್‌ಸೈಟಿನಲ್ಲಿ ಕೂಡ ಹಾಕಲಾಗುವುದು;
5. ತಮ್ಮ ಇಮೇಲ್‌ಗಳನ್ನು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಂಡಿರದ ಸದಸ್ಯರು ಈ ಮಾಹಿತಿಯನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜಿಸ್ ಲಿಮಿಟೆಡ್‌ನ einward.ris@kfintech.com ವಿಳಾಸಕ್ಕೆ ಕಳುಹಿಸಿ ತಮ್ಮ ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ವಿದ್ಯುನ್ಮಾನ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಕ್ಷಣವೇ ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ.
6. ಕಂಪನಿಯು, ಎಜಿಎಂ ಸಂದರ್ಭದಲ್ಲಿ ರಿಮೋಟ್ ಇ-ಮತದಾನ ಹಾಗೂ ಇ-ಮತದಾನ ಎರಡೂ ವಿಧಾನಗಳಲ್ಲಿ ಮತ ಚಲಾಯಿಸಲು ಸದಸ್ಯರಿಗೆ ವಿದ್ಯುನ್ಮಾನ ಸೌಲಭ್ಯಗಳನ್ನು ಒದಗಿಸುತ್ತದೆ. ಎಜಿಎಂ ನೋಟಿಸಿನಲ್ಲಿ ಉಳಿದ ವಿಷಯಗಳ ಜೊತೆಗೆ, ಡೀಮ್ಯಾಟ್ ರೂಪದಲ್ಲಿ ಅಥವಾ ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರದ ಸದಸ್ಯರು ಯಾವ ರೀತಿಯಲ್ಲಿ ಮತ ಚಲಾಯಿಸಬಹುದು ಎಂಬುದರ ಬಗ್ಗೆ ತಿಳಿಸಲಾಗುವುದು. ಭೌತಿಕ ಹಾಜರಾತಿ ಇಲ್ಲದೆಯೇ VC/OAVM ನಲ್ಲಿ ಭಾಗವಹಿಸಿ ಮತ ಚಲಾಯಿಸುವ ಬಗ್ಗೆ ಎಜಿಎಂ ನೋಟಿಸಿನಲ್ಲಿ ನೀಡಿರುವ ಸೂಚನೆಗಳನ್ನು ಓದಿಕೊಳ್ಳಬೇಕಾಗಿ ಸದಸ್ಯರನ್ನು ವಿನಂತಿಸಿಕೊಳ್ಳುತ್ತೇವೆ. VC/OAVM ನಲ್ಲಿ ಭಾಗವಹಿಸುವ ಸದಸ್ಯರನ್ನು ಕಂಪನಿಗಳ ಅಧಿನಿಯಮ, 2013ರ ಕಲಮು 103ರ ಅಡಿಯಲ್ಲಿ ಹೇಳಿರುವಂತೆ ಹಾಜರಿರಬೇಕಾದ ಕನಿಷ್ಠ ಸದಸ್ಯರ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಕಂಪನಿಯ ಸದಸ್ಯರ ಮಾಹಿತಿ ಮತ್ತು ಅನುಕೂಲಕ್ಕಾಗಿ ಈ ಮೇಲಿನ ಮಾಹಿತಿಯನ್ನು ನೀಡಲಾಗುತ್ತಿದ್ದು ಇದು ಎಂಸಿಎ ಸುತ್ತೋಲೆಗಳು ಹಾಗೂ ಸೆಬಿ ಸುತ್ತೋಲೆಗಳ ಅನ್ವಯ ಇರುತ್ತದೆ.

3M ಇಂಡಿಯಾ ಲಿಮಿಟೆಡ್‌ಗಾಗಿ
ರಮೇಶ್ ರಾಮದೊರೈ
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 18, 2022

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ರಸ್ತೆಯ ಮಧ್ಯದಲ್ಲಿರುವ ಮಣ್ಣು ತೆರವುಗೊಳಿಸಿ

ಆರ್.ಟಿ. ನಗರದ ತುಳಸಮ್ಮ ಬಡಾವಣೆಯ ಮನೋರಾಯನ ಪಾಳ್ಯ 3ನೇ ಅಡ್ಡರಸ್ತೆಯಲ್ಲಿ ಅವಶ್ಯಕತೆ ಇಲ್ಲದಿದ್ದರೂ ಮ್ಯಾನ್‌ಹೋಲ್ ನಿರ್ಮಿಸಲಾಗಿದೆ. ಮೋರಿಗಳಿಂದ ತೆಗೆದ ಮಣ್ಣನ್ನು ರಸ್ತೆಯ ಮಧ್ಯ ಹಾಕಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ಸಾಧ್ಯವಾಗುತ್ತಿಲ್ಲ. ಮಳೆ ಬಂದರೆ ರಸ್ತೆಯಲ್ಲ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಟಿ.ವಿ ಸುರೇಂದ್ರ, ಸ್ಥಳೀಯ ನಿವಾಸಿ

ತುಳಸಮ್ಮ ಬಡಾವಣೆಯ ಮೋರಿಯ ಮಣ್ಣು ತೆಗೆದು ರಸ್ತೆಯ ಮಧ್ಯ ಹಾಕಲಾಗಿದೆ.

‘ರಸ್ತೆ ದುರಸ್ತಿಪಡಿಸಿ’

ಚಂದ್ರಾ ಲೇಔಟ್‌ನ ಬಾಪೂಜಿ ನಗರದ ಮುಖ್ಯ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಬೇಸಿಗೆಯಲ್ಲಿ ವಾಹನಗಳ ಸಂಚಾರದಿಂದ ಎಲ್ಲೆಡೆ ದೂಳು ಆವರಿಸಿಕೊಳ್ಳುತ್ತದೆ. ದ್ವಿಚಕ್ರ ವಾಹನ ಸವಾರರಿಗೆ ಇದರಿಂದ ಕಿರಿಕಿರಿ. ಆಳವಾದ ತಗ್ಗು ಗುಂಡಿಗಳು ಕೂಡ ಸೃಷ್ಟಿಯಾಗಿವೆ. ಮಳೆಗಾಲ ಬಂದರೆ ಬೇಸಿಗೆಗಿಂತ ಪರಿಸ್ಥಿತಿ ಭಯಾನಕವಾಗಿರುತ್ತದೆ. ತಗ್ಗು ಗುಂಡಿಗಳಲ್ಲಿ ನೀರು ನಿಂತು ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಹಲವರು ಗುಂಡಿಯಲ್ಲಿ ಬಿದ್ದು ಗಾಯಗೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಈ ಕಡೆಗೆ ಗಮನ ಹರಿಸುವ ಗೋಜಿಗೆ ಹೋಗಿಲ್ಲ. ಈಗಲಾದರೂ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಯೋಗೇಶ್, ಬಾಪೂಜಿನಗರ



ಚಂದ್ರಾ ಲೇಔಟ್‌ನ ಬಾಪೂಜಿನಗರದ ಮುಖ್ಯರಸ್ತೆ ಕಿತ್ತು ಹೋಗಿದೆ

ಪಾದಚಾರಿ ಮಾರ್ಗ ನಾಪತ್ತೆ!

ಎಚ್‌ಎಸ್‌ಆರ್ ಬಡಾವಣೆಯ 19ನೇ ಮುಖ್ಯರಸ್ತೆ 7ನೇ ಕ್ರಾಸ್‌ನಿಂದ 17ನೇ ಕ್ರಾಸ್‌ವರೆಗೂ ಎರಡು ಬದಿಯ ಪಾದಚಾರಿ ಮಾರ್ಗವೂ ನಾಪತ್ತೆಯಾಗಿದೆ. ಪಾದಚಾರಿ ಮಾರ್ಗದಲ್ಲಿ ಕಸ, ಕಟ್ಟಡ ಕಟ್ಟುವ ಸಾಮಗ್ರಿಗಳ ರಾಶಿ, ವಾಹನಗಳ ನಿಲುಗಡೆ ಮಾಡಲಾಗಿದೆ. ಜೊತೆಗೆ ನಿರಂತರವಾಗಿ ವಾಹನಗಳು ಇಲ್ಲಿ ಸಂಚರಿಸುತ್ತಿವೆ. ಈ ಎಲ್ಲದರ ಮಧ್ಯೆ ಪಾದಚಾರಿಗಳು ಜೀವ ಭಯದಿಂದ ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಪಾದಚಾರಿ ಮಾರ್ಗದಲ್ಲಿ ಹಾಕಿರುವ ಕಸ ತೆರವುಗೊಳಿಸಬೇಕು.

ಶಾಂತಗೌಡ, ಸ್ಥಳೀಯ ನಿವಾಸಿ

ಎಚ್‌ಎಸ್‌ಆರ್ ಬಡಾವಣೆಯ 19ನೇ ಮುಖ್ಯ ರಸ್ತೆ 7ನೇ ಕ್ರಾಸ್ ನಿಂದ 17ನೇ ಕ್ರಾಸ್ ವರೆಗು ಎರಡು ಬದಿಯ ಪಾದಚಾರಿಮಾರ್ಗ ಕಾಣೆಯಾಗಿದೆ

ರಸ್ತೆಯ ಮೇಲೆ ಚರಂಡಿ ನೀರು

ಬೆಳ್ಳಂದೂರು ವ್ಯಾಪ್ತಿಯ ಕರಿಯಮ್ಮನ ಅಗ್ರಹಾರ ವಾರ್ಡ್ ನಂ.150ರಲ್ಲಿ ನೂತನವಾಗಿ ನಿರ್ಮಿಸಿರುವ ಚರಂಡಿ ಕಳಪೆ ಕಾಮಗಾರಿಯಿಂದ ಕೂಡಿದೆ. ಮಳೆ ಬಂದರೆ ನೀರು ಸರಾಗವಾಗಿ ಹರಿಯದೇ ರಸ್ತೆ ಮೇಲೆ ಹರಿಯುತ್ತಿದ್ದು, ಇದರಿಂದ ಮನೆಗಳಿಗೆ ನೀರು ನುಗ್ಗುತ್ತಿದ್ದು, ನಾಗರಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕೂಡಲೇ ಈ ಸಮಸ್ಯೆ ಪರಿಹರಿಸಲು ಕ್ರಮಕೈಗೊಳ್ಳಬೇಕು.

ಭರತ, ಸ್ಥಳೀಯ ನಿವಾಸಿ

ಕರಿಯಮ್ಮನ ಅಗ್ರಹಾರದಲ್ಲಿರುವ ಚರಂಡಿ ತುಂಬಿ ರಸ್ತೆ ಮೇಲೆ ಹರಿಯುತ್ತಿದೆ

ಅಪಾಯ ಸೃಷ್ಟಿಸಿದ ವಿದ್ಯುತ್ ಕಂಬ

ಕೆ.ಆರ್.ಪುರ ಟ್ರಾಫಿಕ್ ಪೊಲೀಸ್ ಠಾಣೆಯ ಹತ್ತಿರ ಇರುವ ವಿದ್ಯುತ್ ಕಂಬವೊಂದು ವಾಲಿದೆ

ಕೃಷ್ಣರಾಜಪುರ ವಿಧಾನಸಭಾ ವ್ಯಾಪ್ತಿಯ ಕೃಷ್ಣರಾಜಪುರದ ವೆಂಗಯ್ಯನ ಕೆರೆ ಮುಂದೆ ಹೊಂದಿಕೊಂಡು ಇರುವ ರಾಷ್ಟ್ರೀಯ ಹೆದ್ದಾರಿ- 75ರಲ್ಲಿ ವಿದ್ಯುತ್ ಕಂಬ ವಾಲಿದೆ. ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ವಾಹನ ಸವಾರರು ದಿನನಿತ್ಯ ಜೀವವನ್ನು ಕೈಯಲ್ಲಿ ಹಿಡಿದು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ವಾಲಿದ ವಿದ್ಯುತ್ ಕಂಬವನ್ನು ತೆಗೆದು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದು ವಾಹನ ಸವಾರರ ಆಗ್ರಹ.

ಕಿರಣ್ ಕುಮಾರ್. ಜೆ, ಮೇಡಹಳ್ಳಿ (ಕೆ.ಆರ್. ಪುರ)

ಖಾಸಗಿ ಬಸ್‌ಗೆ ಪೊಲೀಸರ ರಕ್ಷಣೆ

ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಮುಂದೆ ಸಾಕಷ್ಟು ವಾಹನ ದಟ್ಟಣೆ ಉಂಟಾಗುತ್ತಿದೆ. ಅದರಲ್ಲಿ ಸಂಜೆಯ ನಂತರ ಖಾಸಗಿ ಬಸ್‌ಗಳು ರಸ್ತೆಯಲ್ಲೇ ನಿಂತಿರುತ್ತವೆ. ಕೆಎಸ್‌ಆರ್‌ಟಿಸಿ ಬಸ್‌ಗಳು ನಿಲ್ದಾಣದಿಂದ ಹೊರಗೆ ಬಂದು ನಿಲ್ಲದಂತೆ ಪೊಲೀಸರು ತಾಕೀತು ಮಾಡಿದ್ದಾರೆ. ಆದರೆ, ಖಾಸಗಿ ಬಸ್‌ಗಳಿಗೆ ಅವರೇ ಅವಕಾಶ ಮಾಡಿಕೊಟ್ಟು ಸಂಚಾರ ದಟ್ಟಣೆಗೆ ಕಾರಣರಾಗಿದ್ದಾರೆ. ಇಲ್ಲಿ ಹೋಟೆಲ್‌ಗಳೂ ಹೆಚ್ಚಿದ್ದು, ದ್ವಿಚಕ್ರ, ಕಾರುಗಳು ಹೆಚ್ಚಾಗಿ ನಿಂತಿರುತ್ತವೆ. ಖಾಸಗಿ ಬಸ್‌ಗಳು ಅರ್ಧ ರಸ್ತೆಯವರೆಗೆ ನಿಲ್ಲುವುದರಿಂದ ಸಂಚಾರ ದಟ್ಟಣೆಗೆ ಕಾರಣ.

ಶ್ರೀನಿವಾಸ್, ಜಗದೀಶ್, ನಾಯಂಡಹಳ್ಳಿ



ಬಸವನಗರ ಮುಖ್ಯರಸ್ತೆಯಲ್ಲಿರುವ ಉದ್ಯಾನದಲ್ಲಿರುವ ಶೌಚಾಲಯದ ದುಃಸ್ಥಿತಿ

ಮೂಲಸೌಕರ್ಯ ಕಲ್ಪಿಸಲು ಆಗ್ರಹ

ವಿಭೂತಿಪುರ ಕೆರೆಯ ಉದ್ಯಾನಕ್ಕೆ ಪ್ರತಿನಿತ್ಯ ಸಾವಿರಾರು ಜನ ವಾಯುವಿಹಾರಕ್ಕೆ ಬರುತ್ತಾರೆ. ಆದರೆ, ಉದ್ಯಾನದಲ್ಲಿ ಮೂಲ ಸೌಕರ್ಯಗಳಿಲ್ಲದಿರುವುದು ವಾಯುವಿಹಾರಿಗಳ ಅಸಮಾಧಾನಕ್ಕೆ ಕಾರಣವಾಗಿದೆ. ಇಲ್ಲಿರುವ ಶೌಚಾಲಯಗಳು ವರ್ಷಗಳಿಂದ ಬಾಗಿಲು ತೆರೆದಿಲ್ಲ. ಮಹಿಳೆಯರು ವೃದ್ಧರು ಮತ್ತು ಸಕ್ಕರೆ ಕಾಯಿಲೆ ಇರುವವರಿಗೆ ಶೌಚಕ್ಕೆ ಹೋಗಲು ಸಮಸ್ಯೆಯಾಗಿದೆ. ಇಲ್ಲಿ ನೀರು ಗಬ್ಬೆದ್ದು ನಾರುತ್ತಿದೆ. ಈ ಉದ್ಯಾನದಲ್ಲಿ ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸಬೇಕು.

ವೀರೇಶ್, ವಾಯು ವಿಹಾರಿ

ಕ್ಲಾಸಿಫೈಡ್ಸ್
ADMISSION CORNER

A CAREER AFTER 10th
HEA POLYTECHNIC Bangalore (Approved by DTE & AICTE)
Placement Assistance provided
DIPLOMA: Aeronautical Engineering • Computer Science Engg. • Mechanical Engineering • Automobile Engineering
Courses that prepare you for a successful career.
Eligibility: 10th Std. Pass
Classes will begin on 1st of August
12th/PUC in Science or ITI completed students have direct entry into 2nd year Diploma
OTHER COURSES
AME • B.Sc. (Hons) Aircraft Maintenance • MBA Aviation
BBA Aviation • M.Com • B.Com • BBA • BCA
Contact
PB No. 3776, Ashwathanagar, Marathahalli, Bangalore-37
Email: admissions@hindustanacademy.edu.in
Ph: 080-25238650, 25232217 Toll free: 18004258650
9740037853 / 8971404357
www.hindustanacademy.edu.in

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

EDUCATIONAL
Admission
DIRECT FINAL YEAR: LLB (Can Practice), B.Tech/ M.Tech/MBA/MCA/BCA/ BBA/BSc/BCom/D.Pharm (BAMS,BYNS,GNM) PU/SSLC. All Courses Recognised by UGC/NAAC Govt. Asha Academy, Bangalore. Ph: 9448460103/ 7093438248

RENTAL PROPERTIES
Accommodation Available
Commercial
FOR RENT 2390 Sqft 3CarPark Raheja Plaza GF, Suitable Office/ Showrm Commissonarate Road: 9845221555/ 9341213693

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ASTRO YATRA
ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಮನೆ: ಗುರುಕೃಪಾ ನಿಲಯ, ನಂ. 24, 1ನೇ ಕ್ರಾಸ್, ಕೆ.ಇ.ಬಿ ಕಛೇರಿ ರಸ್ತೆ, ಸಿಟಿ ಸೂಪರ್ ಮಾರ್ಕೆಟ್ ಎದುರು, ಕುಳ್ಳಪ್ಪ ವೃತ್ತ, ಕಮ್ಮನಹಳ್ಳಿ, ಬೆಂಗಳೂರು - 560 084. ದೂ: 080-2542 0833.
ಮೊಬೈಲ್: 98441 65272 / 99727 41083
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಮತ್ತು 3 ರಿಂದ ರಾತ್ರಿ 8ರವರೆಗೆ

JOB OPPORTUNITIES
Graphic Designers
WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General
WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL
Change of Name
I, RUKMANI BAI (DOB 01.06.1954)W/o Kadiri Raja Rao have Changed my name to K.RUKMINI BAI(Correct DOB 01.06.1953) Vide Affidavit Dated:16-07-2022 Before Notary M.Prabhakar, Bengaluru-.

ವಿಧಾನಸೌಧದ ಮೊದಲನೇ ಮಹಡಿಯ ಕೊಠಡಿ ಸಂಖ್ಯೆ 106ರಲ್ಲಿ ಮತಗಟ್ಟೆ ಸ್ಥಾಪನೆ

ರಾಷ್ಟ್ರಪತಿ ಚುನಾವಣೆ: ಮತದಾನಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಪತಿ ಚುನಾವಣೆಯ ಮತದಾನಕ್ಕೆ ರಾಜ್ಯದಲ್ಲಿ ಸಕಲ ಸಿದ್ಧತೆ ನಡೆದಿದ್ದು, ವಿಧಾನಸೌಧದ ಮೊದಲನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 106ರಲ್ಲಿ ಸ್ಥಾಪಿಸಿರುವ ಮತಗಟ್ಟೆಯಲ್ಲಿ ಸೋಮವಾರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಮತದಾನ ನಡೆಯಲಿದೆ.

ಚುನಾಯಿತ ಶಾಸಕರು, ಲೋಕಸಭಾ ಸದಸ್ಯರು ಮತ್ತು ವಿಧಾನಸಭೆಯಿಂದ ರಾಜ್ಯಸಭೆಗೆ ಚುನಾಯಿತರಾದ ಸದಸ್ಯರಿಗೆ ರಾಷ್ಟ್ರಪತಿ ಚುನಾವಣೆಯಲ್ಲಿ ಮತದಾನದ ಹಕ್ಕು ಇದೆ. ವಿಧಾನಸಭೆಯ ಸದಸ್ಯರು ಆಯಾ ರಾಜ್ಯದ ಮತಗಟ್ಟೆಯಲ್ಲೇ ಮತ ಚಲಾಯಿಸಬೇಕು. ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರು ಸಂಸತ್ತಿನಲ್ಲೇ ಮತ ಚಲಾಯಿಸಬೇಕು. ತೀರಾ ಅನಿವಾರ್ಯ ಕಾರಣಗಳಿದ್ದರೆ ಕೇಂದ್ರ ಚುನಾವಣಾ ಆಯೋಗದ ಅನುಮತಿ ಪಡೆದು ರಾಜ್ಯದ ಮತಗಟ್ಟೆಯಲ್ಲಿ ಮತ ಚಲಾವಣೆ ಮಾಡಬಹುದು.

ರಾಜ್ಯ ವಿಧಾನಸಭೆಯ 224 ಸದಸ್ಯರು ಇಲ್ಲಿಯೇ ಮತ ಚಲಾವಣೆ ಮಾಡುವರು. ಮೈಸೂರು– ಚಾಮರಾಜನಗರ ಕ್ಷೇತ್ರದ ಸಂಸದ ವಿ. ಶ್ರೀನಿವಾಸ ಪ್ರಸಾದ್ ಕೂಡ ರಾಜ್ಯದಲ್ಲೇ ಮತ ಚಲಾಯಿಸಲು ವಾರದ ಹಿಂದೆಯೇ ಅನುಮತಿ ಪಡೆದಿದ್ದರು. ರಾಜ್ಯಸಭಾ ಸದಸ್ಯರಾಗಿರುವ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರು ವೈದ್ಯಕೀಯ ಕಾರಣಗಳಿಂದ ರಾಜ್ಯದಿಂದಲೇ ಮತ ಚಲಾವಣೆ ಮಾಡಲು ಭಾನುವಾರ ಅನುಮತಿ ಪಡೆದುಕೊಂಡಿದ್ದಾರೆ.

'ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ಸಂಸತ್ತಿನ ಆವರಣದಲ್ಲಿರುವ ಮತಗಟ್ಟೆಯಲ್ಲೇ ಮತದಾನ ಮಾಡಬೇಕು. ರಾಜ್ಯದ ಮತಗಟ್ಟೆಯಲ್ಲಿ ಮತ ಚಲಾಯಿಸಬೇಕಾದರೆ ಕೇಂದ್ರ ಚುನಾವಣಾ ಆಯೋಗದ ಅನುಮತಿ ಬೇಕು. ಶ್ರೀನಿವಾಸ್ ಪ್ರಸಾದ್ ಅವರಿಗೆ ಇಲ್ಲಿಯೇ ಮತ ಚಲಾಯಿಸಲು ಆಯೋಗ ಅನುಮತಿ ನೀಡಿತ್ತು. ದೇವೇಗೌಡರಿಗೂ ಇಲ್ಲಿ ಮತದಾನಕ್ಕೆ ಅವಕಾಶ ನೀಡಲು ಭಾನುವಾರ ಸಂಜೆ ಆಯೋಗ ಒಪ್ಪಿಗೆ ನೀಡಿದೆ' ಎಂದು ರಾಷ್ಟ್ರಪತಿ ಚುನಾವಣೆಯ ಸಹಾಯಕ ಚುನಾವಣಾಧಿಕಾರಿಯಾಗಿರುವ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದರು.

ಚುನಾವಣಾ ವೀಕ್ಷಕರಾಗಿ ಆಯೋಗ ನೇಮಿಸಿರುವ ಅಮಿತ್ ಕುಮಾರ್ ಘೋಷ್ ಅವರು ವಿಧಾನ ಸೌಧದಲ್ಲಿ ಸ್ಥಾಪಿರುವ ಮತಗಟ್ಟೆಗೆ ಭಾನುವಾರ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು. ಸೋಮವಾರ ಮತದಾನ ಮುಗಿದ ತಕ್ಷಣ ಮತಪೆಟ್ಟಿಗೆಗೆ ಮೊಹರು ಮಾಡಲಾಗುತ್ತಿದೆ. ರಾತ್ರಿ 9.20ಕ್ಕೆ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೊರಡುವ ವಿಮಾನದಲ್ಲಿ ಮತಪೆಟ್ಟಿಗೆಯನ್ನು ದೆಹಲಿಗೆ ಕೊಂಡೊಯ್ಯಲಾಗುತ್ತದೆ.

ಮುಖ್ಯಾಂಶಗಳು

- ರಾಜ್ಯ ವಿಧಾನಸಭೆಯ 224 ಸದಸ್ಯರು ಇಲ್ಲಿಯೇ ಮತ ಚಲಾವಣೆ ಮಾಡುವರು
- ರಾಜ್ಯದಿಂದಲೇ ಮತ ಚಲಾಯಿಸಲು ಅನುಮತಿ ಪಡೆದಿರುವ ದೇವೇಗೌಡ
- ಸಿದ್ಧತೆ ಪರಿಶೀಲಿಸಿದ ಚುನಾವಣಾ ವೀಕ್ಷಕ ಅಮಿತ್ ಕುಮಾರ್ ಘೋಷ್

ಬಿಜೆಪಿ ಶಾಸಕರಿಗೆ ತರಬೇತಿ

ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸುವ ಕುರಿತು ಬಿಜೆಪಿ ಶಾಸಕರಿಗೆ ಅಣಕು ಮತದಾನದ ಮೂಲಕ ಭಾನುವಾರ ತರಬೇತಿ ನೀಡಲಾಯಿತು.

ಶಾಂಗ್ರಿಲಾ ಹೋಟೆಲ್‌ನಲ್ಲಿ ಶಾಸಕರಿಗೆ ತರಬೇತಿ ಆಯೋಜಿಸಲಾಗಿತ್ತು. ದೆಹಲಿಗೆ ತೆರಳಿ ತರಬೇತಿ ಪಡೆದು ಬಂದಿದ್ದ ಸಚಿವ ವಿ. ಸುನಿಲ್ ಕುಮಾರ್, ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕ ಎಂ. ಸತೀಶ್ ರೆಡ್ಡಿ ಮತ್ತು ಶಾಸಕ ಅಭಯ ಪಾಟೀಲ, ಉಳಿದ ಶಾಸಕರಿಗೆ ತರಬೇತಿ ನೀಡಿದರು.

ವೈರಾಣು ಪತ್ತೆ ಪರೀಕ್ಷೆಗೆ ಉತ್ತೇಜನ

ಕೋವಿಡ್: ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಾಹಿತಿ

ಪ್ರಜಾವಾಣಿ ವಾರ್ತೆ

ವೈರಾಣು ಅನುಕ್ರಮಣಿಕೆ ಪರೀಕ್ಷೆಯ ವರದಿಯನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಬಿಡುಗಡೆ ಮಾಡಿದರು. ಡಾ. ರಮೇಶ್ ಹರಿಹರನ್, ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ರಾಜೇಶ್ ಸುಂದರೇಶನ್ ಹಾಗೂ ಡಾ. ವಿಶಾಲ್ ರಾವ್ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕೊರೊನಾ ವೈರಾಣುವಿನ ಹೊಸ ರೂಪಾಂತರಿ ಪತ್ತೆ ಹಚ್ಚಲು ವೈರಾಣು ಅನುಕ್ರಮಣಿಕೆ ಪರೀಕ್ಷೆಗೆ (ಜೀನೋಮ್ ಸೀಕ್ವೆನ್ಸಿಂಗ್) ಉತ್ತೇಜನ ನೀಡಲಾಗುತ್ತಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸ್ಟ್ರಾಂಡ್ ಲೈಫ್ ಸೈನ್ಸ್ ಸಂಸ್ಥೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವೈರಾಣು ಅನುಕ್ರಮಣಿಕೆ ಪರೀಕ್ಷೆಯ ವರದಿ ಬಿಡುಗಡೆ ಮಾಡಲಾಯಿತು. ಸಂಸ್ಥೆಯು 2021ರಿಂದ ಜೂನ್ 2022ರವರೆಗೆ 12,800 ಮಾದರಿಗಳ ವೈರಾಣು ಅನುಕ್ರಮಣಿಕೆ ಪರೀಕ್ಷೆ ನಡೆಸಿದೆ. 100ಕ್ಕೂ ಅಧಿಕ ಪ್ರಕರಣಗಳಲ್ಲಿ ರೂಪಾಂತರಿಗಳು ಪತ್ತೆಯಾಗಿವೆ.

'ವೈರಾಣುವಿನ ಹೊಸ ರೂಪಾಂತರಿ ಗುರುತಿಸಿದಲ್ಲಿ ರೋಗ ನಿಯಂತ್ರಣ ಸಾಧ್ಯವಾಗಲಿದೆ. ಆದ್ದರಿಂದ ವೈರಾಣು ಅನುಕ್ರಮಣಿಕೆ ಪರೀಕ್ಷೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ' ಎಂದು ಡಾ.ಕೆ. ಸುಧಾಕರ್ ಹೇಳಿದರು.

ವೈರಾಣು ಅನುಕ್ರಮಣಿಕೆ ಪರೀಕ್ಷೆ ಸಮಿತಿಯ ಸದಸ್ಯ ಹಾಗೂ ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯ ವೈದ್ಯ ಡಾ. ವಿಶಾಲ್ ರಾವ್, 'ಈ ಹಿಂದೆ ಕೋವಿಡ್ ನಿಯಂತ್ರಣಕ್ಕೆ ವೈರಾಣು ಅನುಕ್ರಮಣಿಕೆ ಪರೀಕ್ಷೆ ನೆರವಾಯಿತು. ಈ ಪರೀಕ್ಷೆಗಳನ್ನು ಮುಂದುವರಿಸಿ, ರೋಗದ ತೀವ್ರತೆ ನಿರ್ಧರಿಸಲಾಗುವುದು' ಎಂದು ತಿಳಿಸಿದರು.

ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ರಮೇಶ್ ಹರಿಹರನ್, 'ಕೋವಿಡ್ ಕಾಣಿಸಿಕೊಂಡಾಗ ವೈರಾಣು ಅನುಕ್ರಮಣಿಕೆ ಪರೀಕ್ಷೆಗಳನ್ನು ನಡೆಸಿ, ಡೆಲ್ಟಾ ರೂಪಾಂತರಿ ಪತ್ತೆ ಮಾಡಲಾಯಿತು. ಪರೀಕ್ಷೆಯ ವರದಿಗಳನ್ನು ಬಿಬಿಎಂಪಿಗೆ ಸಲ್ಲಿಸುವ ಮೂಲಕ ವೈರಾಣು ಹರಡುವಿಕೆ ತಡೆಗೆ ಶ್ರಮಿಸಲಾಯಿತು. ನಗರದಲ್ಲಿ ಓಮೈಕ್ರಾನ್ ಹರಡುವಿಕೆಯನ್ನೂ ಗುರುತಿಸಿ, ತೀವ್ರತೆಯ ಬಗ್ಗೆ ವಿಶ್ಲೇಷಿಸಲಾಗಿತ್ತು' ಎಂದು ಹೇಳಿದರು.

ಮುಖ್ಯಾಂಶಗಳು

- ಸ್ಟ್ರಾಂಡ್ ಲೈಫ್ ಸೈನ್ಸ್ ಸಂಸ್ಥೆ ಹಮ್ಮಿಕೊಂಡಿದ್ದ ಕಾರ್ಯಕ್ರಮ
- ಸಂಸ್ಥೆಯಿಂದ 12,800 ಮಾದರಿಗಳ ವೈರಾಣು ಅನುಕ್ರಮಣಿಕೆ ಪರೀಕ್ಷೆ

ಎನ್‌ಎಫ್‌ಟಿಯಲ್ಲಿ 'ವಿಕ್ರಾಂತ್ ರೋಣ' ಪ್ರೀಮಿಯರ್ ಟಿಕೆಟ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಕ್ರಾಂತ್ ರೋಣ' ಚಿತ್ರದ ಪ್ರೀಮಿಯರ್ ಷೋ ಟಿಕೆಟ್ ಅನ್ನು ಎನ್‌ಎಫ್‌ಟಿ ವ್ಯವಸ್ಥೆಯ ಮೂಲಕ ವಿತರಿಸಲಾಗುತ್ತಿದೆ.

ಕಿಚ್ಚ ಸುದೀಪ್ ಅವರ ಕಿಚ್ಚ ಕ್ರಿಯೇಷನ್ಸ್, ಸುದೀಪ್ ಪತ್ನಿ ಪ್ರಿಯಾ ಸುದೀಪ್ ಅವರ ಕಾಫಿ ಆ್ಯಂಡ್ ಬನ್ ಮತ್ತು ಬ್ಲಾಕ್ ಟಿಕೆಟ್ಸ್ ಕಂಪನಿಗಳ ಸಹಯೋಗದಲ್ಲಿ ಹೊಸ ಯೋಜನೆಯನ್ನು ನಟ ಸುದೀಪ್ ಭಾನುವಾರ ಬಿಡುಗಡೆಗೊಳಿಸಿದರು.

ಸುದೀಪ್

ಏನಿದು ಎನ್‌ಎಫ್‌ಟಿ?: 'ಎನ್‌ಎಫ್‌ಟಿ ಎಂದರೆ ನಾನ್ ಫಂಜಿಬಲ್ ಟೋಕನ್. ಇದು ಬ್ಲಾಕ್ ಚೈನ್ ತಂತ್ರಜ್ಞಾನ ಆಧಾರಿತ ವ್ಯವಸ್ಥೆ. ಟಿಕೆಟ್ ಅನ್ನು ನಕಲು ಮಾಡಲಾಗದಂತೆ, ದುರ್ಬಳಕೆ ಆಗದಂತೆ ವೀಕ್ಷಕರಿಗೆ ವಿಶೇಷ ಅನುಭವ ನೀಡುವ ಡಿಜಿಟಲ್ ವ್ಯವಸ್ಥೆ ಇದು. ದೇಶದಲ್ಲಿ ಮೊದಲ ಬಾರಿಗೆ ನಾವು ಈ ವ್ಯವಸ್ಥೆಯನ್ನು ಪರಿಚಯಿಸುತ್ತಿದ್ದೇವೆ' ಎಂದು ಸುದೀಪ್ ಮತ್ತು ಬ್ಲಾಕ್ ಟಿಕೆಟ್ಸ್‌ನ ಸಂಸ್ಥಾಪಕ ಅಭಿನವ್ ಗಾರ್ಗ್ ಹೇಳಿದರು. ಟಿಕೆಟ್ ಮಾರಾಟವನ್ನು ಬ್ಲಾಕ್ ಟಿಕೆಟ್ಸ್ ಕಂಪನಿಯೇ ನಿರ್ವಹಿಸಲಿದೆ.

'ಸಿಲ್ವರ್, ಗೋಲ್ಡ್, ಪ್ಲಾಟಿನಂ ಮತ್ತು ಡೈಮಂಡ್ ಹೆಸರಿನ ಟಿಕೆಟಿಂಗ್ ಯೋಜನೆಗಳಿವೆ. ದರ ಕನಿಷ್ಠ ₹15 ಸಾವಿರದಿಂದ, ₹5 ಲಕ್ಷದವರೆಗೆ ಇರಲಿದೆ. ಆಯಾ ಯೋಜನೆಯಲ್ಲಿರುವ ಪ್ರಕಾರ ಪ್ರೀಮಿಯರ್ ವೀಕ್ಷಣೆಗೆ ಅವಕಾಶ, ಸುದೀಪ್ ಅವರ ಜೊತೆ ಫೋಟೋ ತೆಗೆಸಿಕೊಳ್ಳುವುದು, ಉಡುಗೊರೆಗಳನ್ನು ಪಡೆಯುವುದು, ಮಾತುಕತೆ ಹಾಗೂ ಔತಣ ಕೂಟದ ಅವಕಾಶಗಳು ಇಲ್ಲಿವೆ' ಎಂದು ಗಾರ್ಗ್ ವಿವರಿಸಿದರು. ಜುಲೈ 26ರಂದು ದುಬೈನಲ್ಲಿ 'ವಿಕ್ರಾಂತ್ ರೋಣ'ದ ಪ್ರೀಮಿಯರ್ ನಡೆಯಲಿದೆ.

'ಕಿಚ್ಚವರ್ಸ್' ಡಿಜಿಟಲ್ ವ್ಯವಸ್ಥೆ...

ಮೆಟಾವರ್ಸ್ ತಂತ್ರಜ್ಞಾನದ ಮಾದರಿಯಲ್ಲೇ 'ಕಿಚ್ಚವರ್ಸ್' ಎಂಬ ಡಿಜಿಟಲ್ ವ್ಯವಸ್ಥೆಯನ್ನೂ ಸುದೀಪ್ ಬಿಡುಗಡೆಗೊಳಿಸಿದರು.

ಕಿಚ್ಚ ಅವರ ಸಿನಿಮಾ ಬದುಕಿನ ಎಲ್ಲ ನೆನಪುಗಳು, ಬಳಸಿದ ಪರಿಕರಗಳು ಡಿಜಿಟಲ್ ವೇದಿಕೆಯಲ್ಲಿ ಕಾಣಸಿಗಲಿವೆ. ಅಭಿಮಾನಿಗಳು ನಿಗದಿತ ದರ ಪಾವತಿಸಿ ವರ್ಚುವಲ್ ರೂಪದಲ್ಲೇ ಅವುಗಳನ್ನು ಕೊಳ್ಳಬಹುದು ಅಥವಾ ಕೊಂಡು ಬೇರೆಯವರಿಗೂ ಮಾರಾಟ ಮಾಡಬಹುದು. ಆಗಾಗ ನಡೆಸುವ ವಿಶೇಷ ಕಾರ್ಯಕ್ರಮಗಳು, ಸಂವಾದದ ಅವಕಾಶ ಈ ವೇದಿಕೆಯಲ್ಲಿ ಇರಲಿದೆ. ಯಾರು ಬೇಕಾದರೂ ಸದಸ್ಯತ್ವ ಹೊಂದಿ ಈ ಸೌಲಭ್ಯಗಳನ್ನು ಪಡೆಯಬಹುದು ಎಂದು ಕಾಫಿ ಆ್ಯಂಡ್ ಬನ್ ಇನ್ನೋವೇಷನ್ಸ್‌ನ ಸಿಇಒ ಝಾಕೀರ್ ಹುಸೇನ್ ಕರೀಂ ಖಾನ್ ವಿವರಿಸಿದರು.

'ಈ ಹೊಸ ವ್ಯವಸ್ಥೆ ಚಲನಚಿತ್ರ ಪ್ರದರ್ಶನ ಮಾರುಕಟ್ಟೆಯ ಮೇಲೆ ದೀರ್ಘಾವಧಿಯ ಸಕಾರಾತ್ಮಕ ಪರಿಣಾಮ ಬೀರಲಿದೆ ಮತ್ತು ವೀಕ್ಷಕರಿಗೆ ಒಳ್ಳೆಯ ಅನುಭವ ನೀಡಲಿದೆ' ಎಂದು ಝಾಕೀರ್ ಹೇಳಿದರು.

'ಕಾಫಿ ಆ್ಯಂಡ್ ಬನ್ ಮೂಲಕ ನಮ್ಮ ನಾಡಿನ ತಿನಿಸುಗಳ ಸೊಗಡನ್ನು ವಿಶ್ವಕ್ಕೆ ಪರಿಚಯಿಸುವ ಪ್ರಯತ್ನ. ಇದರೊಂದಿಗೆ ಇನ್ನೂ ನಾಲ್ಕು ಹೊಸ ಯೋಜನೆಗಳೂ ಇವೆ' ಎಂದು ಪ್ರಿಯಾ ಸುದೀಪ್ ಹೇಳಿದರು.

ಸಿನಿಡಬ್ ಆ್ಯಪ್: 'ಬಹುಭಾಷೆಗಳಲ್ಲಿ ಡಬ್ ಆದ ಚಿತ್ರವನ್ನು ನಮಗೆ ಬೇಕಾದ ಭಾಷೆಯಲ್ಲಿ ನೋಡಬೇಕಾದರೆ 'ಸಿನಿ ಡಬ್' ಎಂಬ ಆ್ಯಪ್ ಇದೆ. ಚಿತ್ರಮಂದಿರದ ಒಳಗೆ ಆ್ಯಪ್ ಚಾಲನೆ ಮಾಡಿ ಲೊಕೇಷನ್, ನೀವು ನೋಡುತ್ತಿರುವ ಚಿತ್ರ, ಪ್ರದರ್ಶನದ ಸಮಯ ಮತ್ತು ನಿಮಗೆ ಬೇಕಾದ ಭಾಷೆಯನ್ನು ಆಯ್ಕೆ ಮಾಡಬೇಕು. ಮುಂದೆ ತೆರೆಯ ದೃಶ್ಯಗಳಿಗೆ ಹೊಂದಿಕೊಂಡು ಸಂಭಾಷಣೆ, ಸಂಗೀತ ನಿಮಗೆ ಬೇಕಾದ ಭಾಷೆಯಲ್ಲಿ ಇಯರ್ ಫೋನ್ ಬಳಸಿ ಕೇಳಲು ಸಾಧ್ಯವಿದೆ' ಎಂದು ಸುದೀಪ್ ಹೇಳಿದರು.

ಹುಟ್ಟುಹಬ್ಬದ ದಿನವೇ ಯುವಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಹೇಮಂತ್‌ಕುಮಾರ್ ಅಲಿಯಾಸ್ ದಿಲೀಪ್ (26) ಎಂಬುವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

'ಹೆಮ್ಮಿಗೆಪುರದ ಎಚ್. ಗೊಲ್ಲಹಳ್ಳಿ ನಿವಾಸಿ ಹೇಮಂತ್, ಶನಿವಾರ ರಾತ್ರಿ ಸ್ನೇಹಿತನ ಜತೆ ಮನೆಯಿಂದ ತೆರಳಿದ್ದರು. ಭಾನುವಾರ ಬೆಳಿಗ್ಗೆ ಅವರ ಮೃತದೇಹ ಪತ್ತೆಯಾಗಿದ್ದು, ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಶನಿವಾರ ಹೇಮಂತ್ ಅವರ ಹುಟ್ಟುಹಬ್ಬವಿತ್ತು. ಅದರ ಆಚರಣೆಗೆಂದು ಹೇಮಂತ್ ಅವರನ್ನು ಸ್ನೇಹಿತ ಕರೆದೊಯ್ದಿದ್ದ ಎನ್ನುವುದು ಗೊತ್ತಾಗಿದೆ. ಸದ್ಯ ಸ್ನೇಹಿತ ತಲೆಮರೆಸಿಕೊಂಡಿದ್ದಾನೆ' ಎಂದೂ ತಿಳಿಸಿದರು.

'ಮನೆಯಿಂದ 1 ಕಿ.ಮೀ ದೂರದಲ್ಲಿರುವ ಕೋನಸಂದ್ರ ಬಳಿಯ ನೈಸ್ ರಸ್ತೆ ಕೆಳಸೇತುವೆಯಲ್ಲಿ ಮೃತದೇಹವಿತ್ತು. ಅದನ್ನು ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಹೇಮಂತ್ ಅವರ ಮೈ ಮೇಲೆ 30ಕ್ಕೂ ಹೆಚ್ಚು ಬಾರಿ ಚಾಕುವಿನಿಂದ ಇರಿಯಲಾಗಿದ್ದು, ಹಳೇ ವೈಷಮ್ಯದಿಂದ ಕೊಲೆ ನಡೆದಿರುವ ಅನುಮಾನವಿದೆ' ಎಂದೂ ಹೇಳಿದರು.

ಬೈಕ್‌ಗಳ ನಡುವೆ ಡಿಕ್ಕಿ: ಲ್ಯಾಬ್ ಟೆಕ್ನಿಷಿಯನ್ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಜೆ.ಪಿ. ನಗರ 3ನೇ ಹಂತದಲ್ಲಿ ಬೈಕ್‌ಗಳ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಕಾರ್ತಿಕ್ ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಆಂಧ್ರಪ್ರದೇಶದ ಕಾರ್ತಿಕ್, ಹೆಬ್ಬಾಳದಲ್ಲಿ ವಾಸವಿದ್ದರು. ರಾಜೀವ್ ಗಾಂಧಿ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದರೆಂದು ಗೊತ್ತಾಗಿದೆ. ಇವರಿಗೆ 20 ದಿನಗಳ ಹಿಂದೆಯಷ್ಟೇ ಮದುವೆಯಾಗಿತ್ತು' ಎಂದು ಜಯನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಶನಿವಾರ ರಾತ್ರಿ ಪಾಳಿ ಕೆಲಸಕ್ಕೆ ಹೋಗಿದ್ದ ಕಾರ್ತಿಕ್, ಭಾನುವಾರ ಬೆಳಿಗ್ಗೆ 5 ಗಂಟೆ ಸುಮಾರಿಗೆ ಕೆಲಸ ಮುಗಿಸಿ ದ್ವಿಚಕ್ರ ವಾಹನದಲ್ಲಿ ಜೆ.ಪಿ.ನಗರದ 3ನೇ ಹಂತದ ಮುಖ್ಯರಸ್ತೆ ಮೂಲಕ ಮನೆಯತ್ತ ಹೊರಟಿದ್ದರು. ಇದೇ ಸಂದರ್ಭದಲ್ಲೇ ಎದುರಿಗೆ ಬಂದಿದ್ದ ಬೈಕ್ ಹಾಗೂ ಕಾರ್ತಿಕ್ ವಾಹನದ ನಡುವೆ ಡಿಕ್ಕಿ ಆಗಿತ್ತು.'

'ರಸ್ತೆಯಲ್ಲಿ ಉರುಳಿಬಿದ್ದು ತಲೆಗೆ ತೀವ್ರ ಪೆಟ್ಟಾಗಿದ್ದರಿಂದ ಕಾರ್ತಿಕ್ ಪ್ರಜ್ಞೆ ಕಳೆದುಕೊಂಡಿದ್ದರು. ಅವರನ್ನು ನಿಮ್ಹಾನ್ಸ್‌ಗೆ ಕರೆದೊಯ್ಯಲಾಗಿತ್ತು. ಆದರೆ, ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದು ಪೊಲೀಸರು ತಿಳಿಸಿದರು.

'ಅಪಘಾತದಲ್ಲಿ ಬೈಕ್ ಸವಾರ ಸಂತೋಷ್ ಗಾಯಗೊಂಡಿದ್ದಾರೆ. ಎರಡೂ ವಾಹನಗಳು ಅತೀ ವೇಗದಲ್ಲಿ ಹೊರಟಿದ್ದರಿಂದ ಮುಖಾಮುಖಿ ಡಿಕ್ಕಿ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದೂ ಹೇಳಿದರು.

'ಅಪಘಾತದ ಸ್ಥಳದಲ್ಲಿ ಸವಾರರ ಹೆಲ್ಮೆಟ್‌ಗಳು ಬಿದ್ದಿದ್ದವು. ಅವರಿಬ್ಬರು ಹೆಲ್ಮೆಟ್ ಧರಿಸಿದ್ದರೆ ಅಥವಾ ಕೈಯಲ್ಲಿ ಹಿಡಿದುಕೊಂಡು ಹೊರಟಿದ್ದರೆ ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದೂ ತಿಳಿಸಿದರು.

ನಗರದಲ್ಲಿ ಇಂದು

ಜಯಚಾಮರಾಜ ಒಡೆಯರ ಅವರ ಪುತ್ಥಳಿಗೆ ಮಾಲಾರ್ಪಣೆ: ಆಯೋಜನೆ: ಅರಸು ಅಸೋಸಿಯೇಷನ್, ಸ್ಥಳ: ಕಲಾಸಿಪಾಳ್ಯ, ಬೆಳಿಗ್ಗೆ: 9

ಸ್ವ-ನಿಧಿ ಮಹೋತ್ಸವ: ಬೀದಿ ವ್ಯಾಪಾರಿಗಳ ಸಂಭ್ರಮಾಚರಣೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಬೀದಿ ವ್ಯಾಪಾರಿಗಳಿಗೆ ಪುರಸ್ಕಾರ, ಆಹಾರ ಮೇಳ, ಸಾಲ ಮೇಳ, ಡಿಜಿಟಲ್ ವಹಿವಾಟು ಕುರಿತು ತರಬೇತಿ, ಆಯೋಜನೆ: ಬಿಬಿಎಂಪಿ, ಸ್ಥಳ: ರಾಜ್‌ಕುಮಾರ್ ಗಾಜಿನ ಮನೆ, ಬಿಬಿಎಂಪಿ ಕೇಂದ್ರ ಕಚೇರಿ ಆವರಣ, ಬೆಳಿಗ್ಗೆ 10

ಹೊ. ಶ್ರೀನಿವಾಸಯ್ಯ ಅವರ ದತ್ತಿ ಉಪನ್ಯಾಸ: ವಿಷಯ: 'ನಿಸರ್ಗ ಮತ್ತು ಆರೋಗ್ಯ', ಉದ್ಘಾಟನೆ: ಡಾ.ವೈ. ರುದ್ರಪ್ಪ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ವಿಷಯ ಮಂಡನೆ: ಗೀತಾ ಸಂದೀಪ್, ಬಿ.ಎನ್. ಬ್ರಹ್ಮಚಾರ್ಯ, ಶ್ವೇತಾಂಬರಿ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಇಲಾಖೆ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಕನಕ ಸಾಹಿತ್ಯ ಸಮ್ಮೇಳನ' 22ರಿಂದ

ಮಂಗಳೂರು: ಕೊಣಾಜೆಯ ಮಂಗಳೂರು ವಿಶ್ವವಿದ್ಯಾಲಯದ ಕನಕದಾಸ ಸಂಶೋಧನ ಕೇಂದ್ರವು ಬೆಂಗಳೂರಿನ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿರುವ ಕನಕ ಸಾಹಿತ್ಯ ಸಮ್ಮೇಳನ ಇದೇ 22 ಮತ್ತು 23ರಂದು ನಡೆಯಲಿದೆ.

ಬೇಕಾಗಿದ್ದಾರೆ

ದಿ ಮೈಸೂರು ಡಯೋಸಿಸನ್ ಎಜ್ಯುಕೇಷನಲ್ ಸೊಸೈಟಿ (ರಿ) ಮೈಸೂರು, ಈ ವಿದ್ಯಾಸಂಸ್ಥೆಗೆ ಸೇರಿದ ಅನುದಾನಿತ ಶಾಲೆಯಾದ ಸೇಂಟ್ ಮೇರಿಸ್ ಪ್ರೌಢಶಾಲೆ, ಮಾರ್ಟಳ್ಳಿ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ. ಈ ಶಾಲೆಗೆ ಒಂದು **ಸಮಾಜ ವಿಜ್ಞಾನ** ಸಹ ಶಿಕ್ಷಕರ ಹುದ್ದೆ ಖಾಲಿ ಇದ್ದು, ಈ ಹುದ್ದೆಯನ್ನು ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಈ ಕೆಳಗಿನ ವಿಳಾಸಕ್ಕೆ ಇಂದಿನಿಂದ 21 ದಿನಗಳೊಳಗೆ ಅರ್ಜಿ ಸಲ್ಲಿಸಲು ತಿಳಿಸಿದೆ.

ಅರ್ಜಿ ಸಲ್ಲಿಸುವ ವಿಳಾಸ:
The Secretary, The Mysore Diocesan Educational Society
St. Joseph's Educational Complex
Jayalakshmipuram, Mysuru - 570012

ತಂತಿ ಬಿದ್ದು ಬಾಲಕ ಸಾವು: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಶವಂತಪುರ ಬಳಿಯ ಷರೀಫ್‌ನಗರದಲ್ಲಿ ವಿದ್ಯುತ್ ತಂತಿ ಮೈ ಮೇಲೆ ಬಿದ್ದು ಬಾಲಕ ರುಕ್ಮಾನ್ (12) ಮೃತಪಡಲು ಬೆಸ್ಕಾಂ ನಿರ್ಲಕ್ಷ್ಯ ಕಾರಣ' ಎಂದು ಆರೋಪಿಸಿ ಸ್ಥಳೀಯರು ಭಾನುವಾರ ಮೌನ ಪ್ರತಿಭಟನೆ ನಡೆಸಿದರು.

ಘಟನಾ ಸ್ಥಳದಲ್ಲೇ ಸೇರಿದ್ದ ಸ್ಥಳೀಯರು, ಬೆಸ್ಕಾಂ ವಿರುದ್ಧ ಘೋಷಣಾ ಫಲಕ ಪ್ರದರ್ಶಿಸಿದರು. ಮಕ್ಕಳು ಸಹ ಪ್ರತಿಭಟನೆಯಲ್ಲಿ ಪಾಲ್ಗೊಂಡು, ಸ್ನೇಹಿತನ ಸಾವಿಗೆ ನ್ಯಾಯ ದೊರಕಿಸುವಂತೆ ಒತ್ತಾಯಿಸಿದರು.

'ಬಾಲಕನ ಮನೆ ಮೇಲೆ ವಿದ್ಯುತ್ ತಂತಿ ಹಾದು ಹೋಗಿದೆ. ಶನಿವಾರ ಸಂಜೆ ಮಳೆ– ಗಾಳಿಯಿಂದಾಗಿ ವಿದ್ಯುತ್ ತಂತಿ ತುಂಡಾಗಿತ್ತು. ಮನೆ ಮುಂದೆ ಆಟವಾಡುತ್ತಿದ್ದ ಬಾಲಕನ ಮೈ ಮೇಲೆಯೇ ತಂತಿ ಬಿದ್ದಿತ್ತು. ಇದರಿಂದಾಗಿ, ವಿದ್ಯುತ್ ಪ್ರವಹಿಸಿ ಬಾಲಕ ಮೃತಪಟ್ಟಿದ್ದಾನೆ' ಎಂದು ಪ್ರತಿಭಟನಕಾರರು ಹೇಳಿದರು.

'ಯಶವಂತಪುರ ಹಾಗೂ ಸುತ್ತಮುತ್ತ ಪ್ರದೇಶದಲ್ಲಿ ಮೂಲ ಸೌಕರ್ಯವೇ ಇಲ್ಲದಂತಾಗಿದೆ. ಗುಂಡಿಯಲ್ಲಿ ಬೀಳಬೇಕು ಅಥವಾ ವಿದ್ಯುತ್ ತಾಗಿ ಜನ ಸಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಷರೀಫ್ ನಗರದಲ್ಲಿ ಒಂದೇ ವಿದ್ಯುತ್ ಕಂಬವಿದ್ದು, ಅದರ ಮೂಲಕವೇ ಎಲ್ಲ ಮನೆಗಳಿಗೆ ಸಂಪರ್ಕ ನೀಡಲಾಗಿದೆ. ಹೊಸ ಕಂಬ ನಿಲ್ಲಿಸಲು ಹಾಗೂ ಅಪಾಯಕಾರಿ ತಂತಿಗಳನ್ನು ಸ್ಥಳಾಂತರಿಸಲು ಬೆಸ್ಕಾಂಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯವೇ ಬಾಲಕ ರುಕ್ಮಾನ್ ಸಾವಿಗೆ ಕಾರಣ. ಬಾಲಕನ ಕುಟುಂಬಕ್ಕೆ ಪರಿಹಾರ ನೀಡಬೇಕು. ತಪ್ಪಿತಸ್ಥ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದೂ ದೂರಿದರು.

ಯುಡಿಆರ್ ದಾಖಲು: 'ರುಕ್ಮಾನ್ ಸಾವು ಸಂಬಂಧ ಕುಟುಂಬದವರಿಂದ ಹೇಳಿಕೆ ಪಡೆಯಲಾಗಿದೆ. ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಉತ್ತರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ದೂರಿನಲ್ಲಿ ಉಲ್ಲೇಖಿಸಿಲ್ಲ. ಆದರೂ ಈ ಬಗ್ಗೆ ಪರಿಶೀಲಿಸಲಾಗುವುದು' ಎಂದೂ ತಿಳಿಸಿದರು.

'ಬಾಲಕ ರುಕ್ಮಾನ್ ಸಾವಿಗೆ ಬೆಸ್ಕಾಂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯವೇ ಕಾರಣ' ಎಂದು ಆರೋಪಿಸಿ ಯಶವಂತಪುರದ ಷರೀಫ್‌ನಗರದಲ್ಲಿ ನಿವಾಸಿಗಳು ಪ್ರತಿಭಟನೆ ನಡೆಸಿದರು

'ಸಾಸ್ ಸ್ಕೈ' ಮೇಲೆ ದಾಳಿ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ 'ಸಾಸ್ ಸ್ಕೈ' ಹುಕ್ಕಾ ಬಾರ್ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ₹ 60 ಸಾವಿರ ಮೌಲ್ಯದ ಪರಿಕರ ಹಾಗೂ ₹11 ಸಾವಿರ ನಗದು ಜಪ್ತಿ ಮಾಡಿದ್ದಾರೆ.

'ಅನಧಿಕೃತವಾಗಿ ಹುಕ್ಕಾ ಬಾರ್ ತೆರೆಯಲಾಗಿತ್ತು. ಯುವಕರಿಗೆ ಅಕ್ರಮವಾಗಿ ಹುಕ್ಕಾ ಸರಬರಾಜು ಮಾಡಿ, ವ್ಯಸನಿಗಳಾಗಿ ಮಾಡಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ಬಂದಿತ್ತು. ಶನಿವಾರ ಬಾರ್ ಮೇಲೆ ದಾಳಿ ಮಾಡಲಾಯಿತು. ಮಾಲೀಕ ಹಾಗೂ ಕ್ಯಾಷಿಯರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಮಹಿಳಾ ಉದ್ಯೋಗ ಮೇಳದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ ಮಾತನಾಡಿದರು

ದುಡಿಮೆಗೆ ಅವಕಾಶ ಕಲ್ಪಿಸುವುದು ಮಹತ್ವದ ಕಾರ್ಯ: ಸೌಮ್ಯನಾಥಶ್ರೀ

ಬೆಂಗಳೂರು: ವಿಶ್ವ ಒಕ್ಕಲಿಗರ ಮಹಾ ವೇದಿಕೆಯ ಮಹಿಳಾ ವಿಭಾಗದಿಂದ ಮಹಾಲಕ್ಷ್ಮಿಪುರದ ಬಿಜಿಎಸ್ ವರ್ಲ್ಡ್ ಸ್ಕೂಲ್‌ನಲ್ಲಿ ಭಾನುವಾರ 'ಮಹಿಳಾ ಉದ್ಯೋಗ ಮೇಳ' ನಡೆಯಿತು.

ವಿಜಯನಗರ ಆದಿಚುಂಚನಗಿರಿ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ ಮೇಳಕ್ಕೆ ಚಾಲನೆ ನೀಡಿ ಮಾತನಾಡಿ, '5 ಸಾವಿರ ಮಹಿಳೆಯರಿಗೆ ಉದ್ಯೋಗ ನೀಡುವ ಉದ್ದೇಶದಿಂದ ಆಯೋಜಿಸಿರುವ ಮೇಳವು ಮಹತ್ವದ ಕೆಲಸವಾಗಿದೆ. ಒಳ್ಳೆಯ ಕೆಲಸಕ್ಕೆ ಮಠದಿಂದ ಎಲ್ಲ ಸಹಕಾರ ಸಿಗಲಿದೆ' ಎಂದರು.

ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಮಾತನಾಡಿ, 'ಮಹಾವೇದಿಕೆಯಿಂದ ಉತ್ತಮ ಕಾರ್ಯ ನಡೆಯುತ್ತಿದೆ. ಹಿಂದಕ್ಕೆ ಹೆಜ್ಜೆಯಿಡುವುದು ಬೇಡ' ಎಂದು ಸಲಹೆ ನೀಡಿದರು.

ಕರ್ನಾಟಕ ಪ್ರೆಸ್ ಕೌನ್ಸಿಲ್ ಅಧ್ಯಕ್ಷ ಡಾ.ಶಿವಕುಮಾರ ನಾಗರವಿಲೆ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ, ಅಧ್ಯಕ್ಷೆ ಭಾರತಿ ಶಂಕರ್, ಬಿಬಿಎಂಪಿ ಮಾಜಿ ಮೇಯರ್ ಹೇಮಲತಾ ಗೋಪಾಲಯ್ಯ, ಖಜಾಂಚಿ ಇಂದಿರಾ ರಮೇಶ್ ಹಾಜರಿದ್ದರು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ~~₹599~~ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ನೆನಪಿನ ನಂಟಿಗೆ ನಾನಾ ದಾರಿ

ಸದಾಶಿವ ಸೊರಟೂರು

ಕಲವೊಮ್ಮೆ ವಿದ್ಯಾರ್ಥಿಗಳ ಕಲಿಕೆ ಮಸುಕು ಮಸುಕಾಗುವುದು ಮಕ್ಕಳು ಕಲಿಯುವ ಮತ್ತು ಶಿಕ್ಷಕರು ಕಲಿಸುವ ಕೆಲವು ವಿಧಾನಗಳಿಂದ. ಅದರಲ್ಲಿ ಮುಂದಿರುವುದೇ ಕಂಠಪಾಠ ವಿಧಾನ. ಉರು ಹೊಡೆಯುವುದು, ಬಾಯಿಪಾಠ ಮಾಡುವುದು ಅಂತಾನು ಕರೆಸಿಕೊಂಡಿದೆ ಇದು. ಎಷ್ಟೋ ವಿದ್ಯಾರ್ಥಿಗಳಿಗೆ ಓದು ಅಂದ್ರೆ ಅದು ಕಂಠಪಾಠವೇ ಅನ್ನುವಂತಾಗಿ ಬಿಟ್ಟಿದೆ. ಆದರೆ, ಕಂಠಪಾಠ ನಮ್ಮ ನಂಬಿಕೆಗೆ ಅರ್ಹ ದೋಸ್ತ್ ಅಲ್ಲ, ಅದು ಕೈ ಕೊಡುತ್ತದೆ. ಅದೊಂದು ಸಮರ್ಪಕ ಕಲಿಕಾ ವಿಧಾನವೂ ಅಲ್ಲ.

ಹಿಂದೆ ಕಂಠಪಾಠಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಆದರೆ ಇಷ್ಟೆಲ್ಲಾ ಬದಲಾವಣೆಯ ನಡುವೆಯೂ ಅದೇ ವಿಧಾನಕ್ಕೆ ಹೆಚ್ಚು ಒತ್ತುಕೊಡುತ್ತಿದ್ದೇವೆ. ಕೆಲವು ಶಿಕ್ಷಕರು ಮತ್ತು ಪೋಷಕರು ಕೂಡ ಇದನ್ನು ಪ್ರೋತ್ಸಾಹಿಸುತ್ತಾರೆ. ಆದರೆ ಇದು ತಪ್ಪು. ನೆನಪಿಡಿ ಇದು ಮಗು ಹೊರ ಜಗತ್ತಿನಲ್ಲಿ ಜೀವಿಸಲು ಸಿದ್ಧತೆಯನ್ನು ಮಾಡಿಕೊಡುವುದಿಲ್ಲ. ಕಲ್ಪನೆಗಳನ್ನು ಮತ್ತು ಭಾವನೆಗಳನ್ನು ಹುಟ್ಟು ಹಾಕುವುದಿಲ್ಲ. ಆಲೋಚನೆಯಂತೂ ದೂರ ದೂರ! ಆದ್ದರಿಂದಲೇ ಶಿಕ್ಷಣದ ಹೊಸ ಬದಲಾವಣೆಗಳು ಈ ಕಂಠಪಾಠ ಕಲಿಕೆಯನ್ನು ವಿರೋಧಿಸುತ್ತವೆ. ಅಮೆರಿಕದಲ್ಲಿ ವಿಜ್ಞಾನ ಮತ್ತು ಗಣಿತ ಮಾನದಂಡಗಳು ವಾಸ್ತವಾಂಶಗಳ ಬರಿಯ ನೆನಪಿನ ಅಳದ ತಿಳಿವಳಿಕೆಯ ಪ್ರಾಮುಖ್ಯತೆಯನ್ನು ಸ್ಪಷ್ಟವಾಗಿ ಒತ್ತಿ ಹೇಳುತ್ತವೆ.

ಕಲಿಕೆಗೆ ಸಹಾಯ ಮಾಡುವುದಿಲ್ಲ!

ಶಿಕ್ಷಣಕ್ಕೆ 'ಕಲಿಕೆ' 'ನೆನಪು' ಎಂಬುದೇ ಮೂಲಾಧಾರ. ಆದರೆ ವಿಷಯ ನೆನಪಿನೊಳಗೆ ಹೇಗೆ ಬಂದು ಸೇರಬೇಕು ಎಂಬುದು ಮುಖ್ಯ. ಈಗೀಗ ಪರೀಕ್ಷೆಗಳಿಗಾಗಿ ಉರು ಹೊಡೆಯುವುದು ಕಲಿಕೆಯಂತಾಗಿದೆ. ಹಾಗಂತ ಅವರು ಪರೀಕ್ಷೆ ಗೆಲ್ಲುತ್ತಾರಾ? ಸಾಧ್ಯವಿಲ್ಲ! ಈ ಉರು ಹಚ್ಚುವಿಕೆಯ ತಂಟೆಗೆ ಹೋಗದವ ಕೇವಲ ಅರ್ಥೈಸುವಿಕೆಯಿಂದಲೇ ಕಲಿಕೆಯನ್ನು ಯಶಸ್ವಿಗೊಳಿಸಿಕೊಳ್ಳುತ್ತಾನೆ. ಕಂಠ ಪಾಠ ಮಾಡಲೇ ಬೇಕು ಅಂತ ನೀವು ನಿರ್ಧರಿಸಿದರೆ ಕೆಳಗಿನ ನಾಲ್ಕು ಕಾರಣಗಳಿಂದ ನಿಮ್ಮ ಕಲಿಕೆ ಸೋಲುತ್ತದೆ.

ಕಂಠಪಾಠ ನೆನಪುಳಿಯುವುದಿಲ್ಲ

ನಿಮ್ಮ ತರಗತಿಗಳು ಆರೇಳು ಕಲಿಕಾ ವಿಷಯಗಳನ್ನು ಹೊಂದಿರುತ್ತವೆ. ನೀವು ಅದೆಲ್ಲವನ್ನು ಕಂಠಪಾಠ ಮಾಡಲು ಸಾಧ್ಯವಿಲ್ಲ. ಕಷ್ಟಪಟ್ಟು ಅಷ್ಟೊ ಇಷ್ಟೊ ಮಾಡಿದರೆ ಒತ್ತಡಕ್ಕೆ ಒಳಗಾಗಿ ಮರೆತು ಹೋಗುತ್ತೀರಿ. ಕಲಿಕೆ ಯಾಂತ್ರಿಕವಾದದ್ದಲ್ಲ ಅದು ಸೃಜನಾತ್ಮಕವಾದದ್ದು. ಕಂಠಪಾಠ ಸೃಜನಾತ್ಮಕತೆಗೆ ಅವಕಾಶ ಕೊಡುವುದಿಲ್ಲ. ಕಲಿಕೆ ಅರ್ಥವಾಗದ ಹೊರತು ಅದು ಸಿದ್ಧಿಸುವುದಿಲ್ಲ. ವಿಷಯ ಅರ್ಥವಾದರೆ ಕಂಠಪಾಠದ ಅವಶ್ಯಕತೆಯೇ ಬೀಳುವುದಿಲ್ಲ.

ಕಂಠಪಾಠ ಮಾಡದೆ ನೆನಪಿಡುವುದು ಹೇಗೆ?

ಕಲಿಕೆ ಎಂದರೆ ಬರಿ ಹೊಸದನ್ನು ತಿಳಿದುಕೊಳ್ಳುವುದಲ್ಲ. ಹಳೆಯ ಮಾಹಿತಿಯೊಂದಿಗೆ ಹೊಸದನ್ನು ಸಂಬಂಧೀಕರಿಸಿಕೊಳ್ಳುವುದು ಎಂಬ ಮಾತಿದೆ. ಹಾಗೆ ಕಲಿತ ಕಲಿಕೆ ಹೆಚ್ಚು ನೆನಪಿನಲ್ಲಿ ಉಳಿಯುತ್ತದೆ. ಕಂಠಪಾಠದ ಸಹಾಯವಿಲ್ಲದೆ ವಿಷಯವನ್ನು ನೆನಪಿಡುವುದಕ್ಕೆ ಅನೇಕ ದಾರಿಗಳಿವೆ. ಅದರಲ್ಲಿ ಕೆಲವೊಂದು ಇಲ್ಲಿವೆ ನೋಡಿ..

1 **ಪದೇ ಪದೇ ಓದುವುದು:** ಇದನ್ನು ಪುನರಾವರ್ತನೆ ಅಂತ ಬೇಕಾದರೂ ಅಂದುಕೊಳ್ಳಿ. ಮಿದುಳಿಗೆ ಒಂದೇ ವಿಚಾರ ಪದೇಪದೇ ಹೋಗಿ ಮುಟ್ಟಿದಾಗ ಅದು ಶಾಶ್ವತ ಮೆಮೊರಿಗೆ ಹೋಗಿ ತಲುಪುತ್ತದೆ ಎನ್ನುತ್ತದೆ ಮನೋವಿಜ್ಞಾನ. ಮತ್ತೆ-ಮತ್ತೆ ಓದುವುದರಿಂದ ಓದಿದ ವಿಚಾರ ನೆನಪಿನಲ್ಲಿ ಉಳಿಯುತ್ತದೆ. ಮತ್ತು ಯಾವುದೇ ಸಮಯದಲ್ಲಿ ಕೈ ಕೊಡದೆ ಬೇಕೆಂದಾಗಲೆಲ್ಲಾ ಸಹಾಯಕ್ಕೆ ಬರುತ್ತದೆ.

2 **ಓದಿದನ್ನು ಬರೆಯುವುದು:** ಹತ್ತು ಬಾರಿ ಓದುವುದು ಒಂದು ಬಾರಿ ಬರೆಯುವುದು ಸಮ ಎನ್ನುವ ಮಾತಿದೆ. ಓದಿದ್ದೆಲ್ಲವನ್ನು ಬರೆಯಲಾಗದಿದ್ದರೂ ಸಂಕ್ಷಿಪ್ತವಾಗಿ ಸಾರಾಂಶ ರೂಪದಲ್ಲಿ ಬರೆಯುವುದನ್ನು ರೂಢಿಸಿಕೊಳ್ಳಬೇಕು. ಇದರಿಂದ ವಿಷಯದ ಮೇಲೆ ಹಿಡಿತ ಸಾಧ್ಯವಾಗುತ್ತದೆ. ಆಗುವ ತಪ್ಪುಗಳನ್ನೆಲ್ಲಾ ತಿದ್ದಿಕೊಳ್ಳಲು ಅವಕಾಶವಿರುವುದರಿಂದ ಸ್ಪಷ್ಟ ಕಲಿಕೆ ಸಾಧ್ಯ.

3 **ಚಿತ್ರಗಳ ಸಹಾಯ:** ಒಂದೊಂದು ವಿಷಯಕ್ಕೆ ಒಂದೊಂದು ಚಿತ್ರವನ್ನು ಸಂಬಂಧೀಕರಿಸಿಕೊಳ್ಳಬೇಕು. ಅದಕ್ಕೆ ಹತ್ತಿರದ ಚಿತ್ರವಾದರೆ ಇನ್ನೂ ಸುಲಭ. ನೀವು ಭಟ್ಟಿ ಇಳಿಸುವಿಕೆಯ ಚಿತ್ರವನ್ನು ಚೆನ್ನಾಗಿ ನೆನಪಿಟ್ಟುಕೊಂಡರೆ ಸಾಕು ಅದಕ್ಕೆ ಸಂಬಂಧಿಸಿದ ಪೂರ್ಣ ವಿವರಣೆ ಅದರೊಂದಿಗೆ ಬರುವಂತೆ ಕಲಿತಿರಬೇಕು.

4 **ಮೈಂಡ್ ಮ್ಯಾಪಿಂಗ್:** ಇದೊಂದು ವಂಶವೃಕ್ಷ ತರಹದ ಕಲ್ಪನೆ. ಆದರೆ ಇದು ವಿಷಯ ವೃಕ್ಷ. ಒಂದು ವಿಷಯದಿಂದ ಇನ್ನೊಂದಕ್ಕೆ ಮತ್ತು ಅದರಿಂದ ಮತ್ತೊಂದಕ್ಕೆ ಸಂಬಂಧ ಕೂಡಿಸಿಕೊಂಡು ನೆನಪಿಟ್ಟುಕೊಳ್ಳುವುದು. ಇತಿಹಾಸದ ಪಾಠಗಳು, ಕವಿ ಪರಿಚಯ, ವ್ಯಾಕರಣಾಂಶಕ್ಕೆ ಸಂಬಂಧಿಸಿದಂತೆ ಬಳಸಿಕೊಳ್ಳಬಹುದು.

5 **ಮೊದಲ ಅಕ್ಷರ ಶ್ರೇಣಿ:** ಮುಖ್ಯವಾದ ವಿಚಾರಗಳನ್ನು ನೆನಪಿಟ್ಟುಕೊಳ್ಳಲು ಅದರ ಮೊದಲ ಅಕ್ಷರಗಳನ್ನು ಆಯ್ದು ಒಂದು ಪದವನ್ನೋ, ವಾಕ್ಯವನ್ನೊ ಮಾಡಿಕೊಂಡು ನೆನಪಿಡುವುದು. ಉದಾಹರಣೆಗೆ, ದಿಕ್ಕುಗಳನ್ನು (ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಆಗ್ನೇಯ, ಈಶಾನ್ಯ, ನೈರುತ್ಯ, ವಾಯವ್ಯ) ನೆನಪಿಡಲು 'ಉಈಪೂಆದನೈಪವಾ' ಎಂಬ ಪದ ನೆನಪಿಟ್ಟುಕೊಂಡರೆ ಸಾಕು ಎಲ್ಲ ದಿಕ್ಕುಗಳು ಕ್ರಮವಾಗಿ ನೆನಪಾಗುತ್ತವೆ.

6 **ಕಥಾರೂಪ:** ಓದಿದ ವಿಷಯಗಳನ್ನು ಮನಸ್ಸಿನಲ್ಲಿ ಒಂದು ಕಥೆಯ ರೂಪದಲ್ಲಿ ಹೆಣೆದುಕೊಳ್ಳಬಹುದು. ಇತಿಹಾಸದ ಘಟನೆಗಳು, ಜೀವನ ಚರಿತ್ರೆ, ಜಲಚಕ್ರ ಹೀಗೆ ಅನೇಕ ವಿಷಯಗಳು ಇದಕ್ಕೆ ಸೂಕ್ತವಾಗಿವೆ. ಸಾಮಾನ್ಯವಾಗಿ ಕಥೆಯು ಮಗುವಿಗೆ ಆಸಕ್ತಿ ಕ್ಷೇತ್ರವಾಗಿರುವುದರಿಂದ ಮರೆಯುವ ಸಾಧ್ಯತೆ ಕಡಿಮೆ.

ಇವುಗಳನ್ನು ಕಂಠಪಾಠ ಮಾಡಬಹುದು

ಓದುವಿಕೆಯಲ್ಲಿನ ಶಬ್ದ ಶಿಕ್ಷಾ ವಿಧಾನ, ರಸಾಯನ ಶಾಸ್ತ್ರದಲ್ಲಿ ಆವರ್ತಕ ಕೋಷ್ಟಕಗಳು, ಭಾಷೆಯಲ್ಲಿ ಪದ್ಯಗಳು, ಗಣಿತದಲ್ಲಿ ಮಗ್ಗಿ, ಸೂತ್ರಗಳು, ಕಾನೂನಿನ ಮೊಕದ್ದಮೆಗಳು, ಕಾಯ್ದೆಗಳು, ವಿಜ್ಞಾನದ ಮೂಲ ಸೂತ್ರಗಳು, ವೈದ್ಯಶಾಸ್ತ್ರದಲ್ಲಿ ಅಂಗ ರಚನೆ ಸಂಬಂಧಿತ ವಿಷಯ, ಇಸ್ವಿಗಳು ಮುಂತಾದವು..



ಯಾವುದೇ ವಿಷಯವನ್ನು ನೆನಪಿಟ್ಟುಕೊಳ್ಳುವುದಕ್ಕಾಗಿ ಕಂಠಪಾಠ ಮಾಡಿದ್ದರೆ, ಅದು ಅಗತ್ಯವಾದ ಸಮಯದಲ್ಲಿ ಕೈಕೊಡಬಹುದು. ಹಾಗೆಯೇ, ಕಂಠಪಾಠದ ಸಹಾಯವಿಲ್ಲದೆ ವಿಷಯವನ್ನು ನೆನಪಿಡುವುದಕ್ಕೆ ಅನೇಕ ದಾರಿಗಳಿವೆ. ಅದರಲ್ಲಿ ಕೆಲವೊಂದು ಇಲ್ಲಿವೆ ನೋಡಿ..



ವಿದ್ಯಾರ್ಥಿ ವೇತನ ಕೈಪಿಡಿ

ಅತುಲ್ ಮಹೇಶ್ವರಿ ಛಾತ್ರವೃತ್ತಿ 2022

- **ವಿವರ:** ಉತ್ತಮ ಭವಿಷ್ಯವನ್ನು ಸೃಷ್ಟಿಸುವ ಉದ್ದೇಶದೊಂದಿಗೆ 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಅಮರ್ ಉಜಾಲಾ ಫೌಂಡೇಶನ್‌ನಿಂದ ಒಂದು ಅವಕಾಶವಾಗಿದೆ. ಸರ್ಕಾರಿ ಸಂಸ್ಥೆಗಳಿಂದ ತಮ್ಮ ಶಿಕ್ಷಣವನ್ನು ಮುಂದುವರಿಸುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ.
- **ಅರ್ಹತೆ:** ತಮ್ಮ ಕೊನೆಯ ವಾರ್ಷಿಕ ಪರೀಕ್ಷೆಗಳಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಮತ್ತು 9 ರಿಂದ 12ನೇ ತರಗತಿಯಲ್ಲಿ ಓದುತ್ತಿರುವ, ವಾರ್ಷಿಕ ₹ 1.5 ಲಕ್ಷಕ್ಕಿಂತ ಕಡಿಮೆ ಕುಟುಂಬದ ಆದಾಯ ಇರುವ ಅಭ್ಯರ್ಥಿಗಳಿಗೆ ಮುಕ್ತವಾಗಿದೆ.
- **ಆರ್ಥಿಕ ನೆರವು:** ₹ 50,000
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** 31-08-2022
- **ಹೆಚ್ಚಿನ ಮಾಹಿತಿಗೆ:** www.b4s.in/praja/AMC9

ರೋಲ್ಸ್-ರಾಯ್ಸ್ ಉನ್ನತಿ ಸ್ಕಾಲರ್‌ಶಿಪ್ಸ್ ಫಾರ್ ವಿಮೆನ್ ಎಂಜಿನಿಯರಿಂಗ್ ಸ್ಟೂಡೆಂಟ್ಸ್ 2022

- **ವಿವರ:** ಪದವಿಪೂರ್ವ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಅನುಸರಿಸುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿವೇತನವು, ತಮ್ಮ ಎಂಜಿನಿಯರಿಂಗ್ ಕಾರ್ಯಕ್ರಮವನ್ನು ಪೂರ್ಣಗೊಳಿಸುವಲ್ಲಿ ಪ್ರತಿಭಾನ್ವಿತ ಹುಡುಗಿಯರನ್ನು ಆರ್ಥಿಕವಾಗಿ ಬೆಂಬಲಿಸುವ ಉದ್ದೇಶವನ್ನು ಹೊಂದಿದೆ.
- **ಅರ್ಹತೆ:** ಎಐಸಿಟಿಇ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಏರೋಸ್ಪೇಸ್, ಮೆರೈನ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ಸ್ ಇತ್ಯಾದಿ ಕ್ಷೇತ್ರಗಳಲ್ಲಿ ಪ್ರಸ್ತುತ 1ನೇ/2ನೇ/3ನೇ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಅನುಸರಿಸುತ್ತಿರುವ ಭಾರತೀಯ ಹುಡುಗಿಯರಿಗೆ ಮುಕ್ತವಾಗಿದೆ. ಅರ್ಜಿದಾರರು ತಮ್ಮ 10 ಮತ್ತು 12ನೇ ಬೋರ್ಡ್ ಪರೀಕ್ಷೆಗಳಲ್ಲಿ ಶೇ60ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು.
- **ಆರ್ಥಿಕ ನೆರವು:** ₹ 35,000
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** 1-08-2022
- **ಮಾಹಿತಿಗೆ:** www.b4s.in/praja/UNS

ದ ಟಾಟಾ ಕ್ಯಾಪಿಟಲ್ ಪಂಖ್ ಸ್ಕಾಲರ್‌ಶಿಪ್ ಪ್ರೋಗ್ರಾಂ

- **ವಿವರ:** ಟಾಟಾ ಕ್ಯಾಪಿಟಲ್ ಲಿಮಿಟೆಡ್ 6 ರಿಂದ 12ನೇ ತರಗತಿ ಮತ್ತು ಪದವಿಪೂರ್ವ (ಸಾಮಾನ್ಯ ಮತ್ತು ವೃತ್ತಿಪರ) ಕೋರ್ಸ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ವಿದ್ಯಾರ್ಥಿವೇತನವು, ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಬೆಂಬಲಿಸುವ ಉದ್ದೇಶವನ್ನು ಹೊಂದಿದೆ.
- **ಅರ್ಹತೆ:** ಭಾರತೀಯ ಪ್ರಜೆಗಳಿಗೆ ಮಾತ್ರ ಮುಕ್ತವಾಗಿದೆ. ಅರ್ಜಿದಾರರು 6ರಿಂದ 12ನೇ ತರಗತಿ ಮತ್ತು ಪದವಿಪೂರ್ವ (ಸಾಮಾನ್ಯ ಮತ್ತು ವೃತ್ತಿಪರ) ಕೋರ್ಸ್‌ಗಳಲ್ಲಿ ಓದುತ್ತಿರಬೇಕು. ಅವರು ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 4,00,000 ಮೀರಬಾರದು.
- **ಆರ್ಥಿಕ ನೆರವು:** ಶೇ 80ರಷ್ಟು ಬೋಧನಾ ಶುಲ್ಕದವರೆಗೆ
- **ಅರ್ಜಿ ಸಲ್ಲಿಕೆಗೆ ಕೊನೆದಿನ:** 31-08-2022
- **ಅರ್ಜಿಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಮಾಹಿತಿಗೆ:** www.b4s.in/praja/TCPS14

ಕೃಪೆ:buddy4study.com

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

ಬಿ.ಎಸ್ಸಿ (ಸಿಬಿಝೆಡ್) ನಂತರ ಯಾವ ಕೋರ್ಸ್ ಸೂಕ್ತ ?

1. ನಾನು ಬಿಎಸ್ಸಿ (ಸಿಬಿಝೆಡ್) ಪೂರ್ಣಗೊಳಿಸಿದ್ದೇನೆ. ಆಹಾರ ವಿಜ್ಞಾನ ಅಥವಾ ನ್ಯೂಟ್ರಿಷನ್ ಸಂಬಂಧಪಟ್ಟಂತೆ ಎಂಎಸ್ಸಿ ಮಾಡಬೇಕೆಂದಿದ್ದೇನೆ. ಆದರೆ, ನನ್ನ ಗೆಳೆಯರು ಎಂಎಸ್ಸಿ (ಆಹಾರ ವಿಜ್ಞಾನ) ಬದಲಾಗಿ ಎಂಎಸ್ಸಿ (ಪ್ರಾಣಿವಿಜ್ಞಾನ) ಮಾಡುವಂತೆ ಹೇಳುತ್ತಿದ್ದಾರೆ. ಯಾವುದನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ?

ಸಿಂಧೂ, ತುಮಕೂರು.

ಜೀವನ ಶೈಲಿ ಮತ್ತು ಅಗತ್ಯಗಳು ಬದಲಾಗಿರುವ ಈ ಕಾಲಘಟ್ಟದಲ್ಲಿ ಸಿದ್ಧಪಡಿಸಿದ ಆಹಾರ ಪದಾರ್ಥಗಳಿಗೆ ಹೆಚ್ಚಿನ ಬೇಡಿಕೆಯಿದ್ದು , ಆಹಾರ ವಿಜ್ಞಾನ ಮತ್ತು ಪುಷ್ಟಿ ವಿಜ್ಞಾನ (ನ್ಯೂಟ್ರಿಷನ್) ಮುಂಚೂಣಿಯಲ್ಲಿದೆ. ಕಚ್ಚಾ ಧಾನ್ಯಗಳು ಮತ್ತು ಇನ್ನಿತರ ಆಹಾರ ಪದಾರ್ಥಗಳ ಶುದ್ಧೀಕರಣ, ಸಂಸ್ಕರಣೆ, ಸುರಕ್ಷತೆ ಮತ್ತು ಸೂಕ್ತ ಪ್ಯಾಕಿಂಗ್ ನಂತರ ಬಳಕೆಗೆ ಯೋಗ್ಯ ರೀತಿಯಲ್ಲಿ ಸಿದ್ಧಪಡಿಸುವ ಕಾರ್ಯಗಳಲ್ಲಿ ಆಹಾರ ವಿಜ್ಞಾನ, ಪ್ರಮುಖ ಪಾತ್ರವಹಿಸುತ್ತದೆ. ಹಾಗಾಗಿ, ಈ ಕ್ಷೇತ್ರದಲ್ಲಿ ಆಸಕ್ತಿಯಿದ್ದಲ್ಲಿ, ಎಂಎಸ್ಸಿ ಕೋರ್ಸ್ ಮಾಡಬಹುದು.

ಈ ಕೋರ್ಸ್ ನಂತರ, ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಆಹಾರ ಪದಾರ್ಥ ಮತ್ತು ಪಾನೀಯ ತಯಾರಿಕಾ ಉದ್ದಿಮೆಗಳು, ಆಹಾರ ಸಂಬಂಧಿತ (ಸಂರಕ್ಷಕಗಳು, ಬಣ್ಣಗಳು ಮತ್ತು ಸ್ವಾದಗಳು ಇತ್ಯಾದಿ) ಉದ್ದಿಮೆಗಳು, ಕೃಷಿ ಉದ್ದಿಮೆಗಳು, ಸಾವಯವ ಉದ್ದಿಮೆಗಳು, ಹೋಟೆಲ್ ಮತ್ತು ರೆಸ್ಟೋರೆಂಟ್ಸ್, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಆಹಾರ ಪರೀಕ್ಷಾ ಪ್ರಯೋಗಾಲಯಗಳು ಸೇರಿ ವಿಪುಲವಾದ ಉದ್ಯೋಗಾವಕಾಶಗಳಿವೆ.

2. ನಾನು ದೂರಶಿಕ್ಷಣದಲ್ಲಿ ಬಿಎ ಪದವಿ ಪಡೆದಿದ್ದೇನೆ. ಮುಂದೆ, ಎಲ್‌ಎಲ್‌ಬಿ ಮಾಡುವ ಆಸೆ ಇದೆ. ಇದಕ್ಕೆ ಬೇರೆ ಯಾವುದಾದರೂ ಕೋರ್ಸ್ ಮಾಡಬೇಕೆ ಅಥವಾ ನೇರವಾಗಿ ಎಲ್‌ಎಲ್‌ಬಿ ಮಾಡಬಹುದೇ ತಿಳಿಸಿ?

ದೀಪಿಕಾ, ದಾವಣಗೆರೆ.

ದೂರ ಶಿಕ್ಷಣ ಬ್ಯೂರೊ, ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ), ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಪದವೀಧರರಿಗೆ, ಎಲ್‌ಎಲ್‌ಬಿ ಕೋರ್ಸ್ ಮಾಡಲು ಅರ್ಹತೆ ಇರುತ್ತದೆ.

3. ನಾನು ಪದವಿ ಮುಗಿಸಿದ್ದು, ಆಧಾರ್ ಎನ್‌ರೋಲ್‌ಮೆಂಟ್ ಪರೀಕ್ಷೆ ಪಾಸ್ ಆಗಿದ್ದೇನೆ ಮತ್ತು ಏಜೆನ್ಸಿಯ ಅವಧಿ 1 ವರ್ಷವಿದೆ. ನಂತರದಲ್ಲಿ ನಾವು ಕೆಲಸ ಇಲ್ಲದೆ ಇರಬೇಕಾಗುತ್ತದೆ. ಆದ್ದರಿಂದ, ನಾನು ಯುಐಡಿಎಐ (UIDAI) ಸಂಸ್ಥೆಯಲ್ಲಿ ಮುಂದುವರಿಯುವುದು ಹೇಗೆ? ಇದಕ್ಕೆ ಸರ್ಕಾರಿ ನೇಮಕಾತಿ ಇದೆಯೇ?

ದುರ್ಗೇಶ್ ಪಾಟೀಲ, ಊರು ತಿಳಿಸಿಲ್ಲ.

ಯುಐಡಿಎಐ (UIDAI), ಭಾರತ ಸರ್ಕಾರದ ವಿದ್ಯುನ್ಮಾನಗಳು ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಸ್ಥಾಪಿಸಲಾದ ಒಂದು ಶಾಸನಬದ್ಧ ಪ್ರಾಧಿಕಾರವಾಗಿರುತ್ತದೆ. ಈ ಸಂಸ್ಥೆಯಲ್ಲಿನ ಹಲವಾರು ಹುದ್ದೆಗಳಿಗೆ ನೇರವಾಗಿ ನೇಮಕಾತಿಯಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://uidai.gov.in/about-uidai/work-with-uidai.html

4. ನಾನು ಪಿಯುಸಿ ಕಲಾ ವಿಭಾಗದಲ್ಲಿ ಶೇ 93 ಅಂಕದೊಂದಿಗೆ ಪಾಸಾಗಿದ್ದೇನೆ. ಕಲಾ ವಿಭಾಗ ಯಾವುದಕ್ಕೂ ಪ್ರಯೋಜನವಿಲ್ಲ ಎಂದು ಬಹಳ ಜನ ಹೇಳುತ್ತಾರೆ. ಏನು ಮಾಡಬೇಕು ಎಂಬುದೇ ತೋಚದಾಗಿದೆ. ಸಲಹೆ ಕೊಡಿ

ಹೆಸರು, ಊರು ತಿಳಿಸಿಲ್ಲ.

ಕಲಾ ವಿಭಾಗದಲ್ಲಿ ಅವಕಾಶಗಳು ಕಡಿಮೆ ಎನ್ನುವ ತಪ್ಪು ಅಭಿಪ್ರಾಯ ಹಲವರಲ್ಲಿದೆ. ಪಿಯುಸಿ ನಂತರ ಅನೇಕ ವಿಷಯಗಳಲ್ಲಿ ಬಿಎ ಪದವಿಯನ್ನು ಮಾಡಬಹುದು. ಉದಾಹರಣೆಗೆ, ಕನ್ನಡ, ಇಂಗ್ಲಿಷ್, ಅರ್ಥಶಾಸ್ತ್ರ ಸಮಾಜಶಾಸ್ತ್ರ, ಚರಿತ್ರೆ, ರಾಜ್ಯಶಾಸ್ತ್ರ, ತತ್ವಶಾಸ್ತ್ರ, ಮನೋವಿಜ್ಞಾನ, ಮಾನವಶಾಸ್ತ್ರ, ಪುರಾತತ್ವ ಶಾಸ್ತ್ರ ಪರಿಸರ ವಿಜ್ಞಾನ, ಪತ್ರಿಕೋದ್ಯಮ, ಲಲಿತಕಲೆ, ಹೋಟೆಲ್ ಮ್ಯಾನೇಜ್‌ಮೆಂಟ್, ಟೂರಿಸಮ್ ಇತ್ಯಾದಿ. ಜೊತೆಗೆ, ಯಾವುದಾದರೂ ವಿಷಯದಲ್ಲಿ ವಿಶೇಷವಾದ ಆಸಕ್ತಿಯಿದ್ದಲ್ಲಿ, ಬಿಎ (ಆನರ್ಸ್) ಮಾಡಬಹುದು.

ಕಲಾ ವಿಭಾಗದಲ್ಲಿ ಮಾಡಬಹುದಾದ ಇನ್ನಿತರ ಪ್ರಮುಖ ಕೋರ್ಸ್‌ಗಳೆಂದರೆ ಬಿಬಿಎ, ಬಿಕಾಂ/ಬಿಸಿಎ (ಕೆಲವು ವಿಶ್ವವಿದ್ಯಾಲಯಗಳಲ್ಲಿ), ಬಿಎಸ್‌ಡಬ್ಲು, ಬಿ.ಡಿಸೈನ್, ಎಲ್‌ಎಲ್‌ಬಿ (ಇಂಟಿಗ್ರೇಟೆಡ್), ಸಿಎ, ಸಿಎಸ್, ಐಎಎಸ್ (ಪದವಿಯ ನಂತರ) ಇತ್ಯಾದಿ. ಹಾಗಾಗಿ, ಕಲಾ ವಿಭಾಗ ವಿಸ್ತಾರವಾದ ಕ್ಷೇತ್ರ. ನಿಮ್ಮ ಆಸಕ್ತಿ, ಅಭಿರುಚಿಯಂತೆ ಕೋರ್ಸ್ ಆಯ್ಕೆ ಮಾಡಿ, ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಗೆದ್ದಲು ಹುಳು ಹೊಟ್ಟೆಯ ಸೂಕ್ಷ್ಮಜೀವಿಗಳು

ಡಾ ಎಸ್. ಶಿಶುಪಾಲ

ತೋಟದಲ್ಲೊಂದು ಮರ ಬಿದ್ದಿದೆಯೇ? ತೆಗೆಯಬೇಕೆನ್ನುವಷ್ಟರಲ್ಲಿ ಗೆದ್ದಲು ಹತ್ತಿದೆ. ಹಳೆ ಮನೆಯ ಮರದ ತೊಲೆಗಳಲ್ಲಿ ಗೆದ್ದಲು ಹಿಡಿದಿದೆ. ಕಿಟಕಿ, ಬಾಗಿಲುಗಳನ್ನೂ ಬಿಟ್ಟಿಲ್ಲ. ಜೀವಂತವಿರುವ ಮರದ ತೊಗಟೆಯ ಮೇಲೆ ಮಣ್ಣಿನ ಕಣಗಳನ್ನು ಅಂಟಿಸಿದೆಯಲ್ಲಾ ಗೆದ್ದಲು. ಅಲ್ಲಲ್ಲಿ ಸಣ್ಣ, ದೊಡ್ಡ ಗುಡ್ಡಗಳಂತೆ ಕಾಣುವ ನೆಲದಿಂದ ಮೇಲೆದ್ದಿರುವ ಗೆದ್ದಲು ಗೂಡುಗಳು. ಇದೆಲ್ಲಾ ಸಾಮಾನ್ಯ ದೃಶ್ಯಗಳು. ಎಲ್ಲರೂ ನೋಡಿರುತ್ತೀರಿ. ಆದರೆ , ಅದರ ವಿಶೇಷಗಳು ಗೊತ್ತೇ?

ಅಮೆರಿಕದಲ್ಲಿ ಮರಮುಟ್ಟುಗಳನ್ನು ತಿನ್ನುವ ಗೆದ್ದಲು ಹುಳುಗಳಿಂದಾಗುವ ಅನಾಹುತ ಅಲ್ಲಿ ಸಂಭವಿಸುವ ಪ್ರವಾಹ, ಬೆಂಕಿ ಮತ್ತು ಭೂಕಂಪನಗಳಿಂದಾಗುವ ಅನಾಹುತಕ್ಕಿಂತ ಹೆಚ್ಚು ಎಂದು ಕಂಡುಹಿಡಿಯಲಾಗಿದೆ. ಅಲ್ಲಿ ವರ್ಷಕ್ಕೆ ಗೆದ್ದಲು ಹುಳುಗಳಿಂದಾಗುವ ನಷ್ಟ 500 ಕೋಟಿ ಡಾಲರ್‌ಗಳು!

ಅಬ್ಬಬ್ಬಾ ಇಷ್ಟೊಂದು ಶಕ್ತಿಶಾಲಿಯೇ ಈ ತುಚ್ಛಕೀಟ. ಪ್ರಪಂಚದಲ್ಲಿ ಸುಮಾರು 1,200 ಪ್ರಭೇದಗಳ ಗೆದ್ದಲು ಹುಳುಗಳಿವೆ. ಇವು ಮಣ್ಣಿನಲ್ಲಿರುವ ಜೈವಿಕ ಅಂಶಗಳು, ಸತ್ತು ಬಿದ್ದ ಮರ ಮತ್ತು ಮರಗಳ ಭಾಗಗಳನ್ನು ತಿಂದು ಜೀರ್ಣಿಸುತ್ತವೆ. ಪರಿಸರದಲ್ಲಿ ಪೋಷಕಾಂಶಗಳ ಮರುಪೂರಣಕ್ಕೆ ಮರಗಳ ಕೊಳೆಯುವಿಕೆ ಮತ್ತು ಜೀರ್ಣವಾಗುವಿಕೆ ಅತೀ ಮುಖ್ಯ. ಈ ಪ್ರಕ್ರಿಯೆ ಜೈವಿಕ ಭೂರಸಾಯನ ಚಕ್ರದ ಅವಿಭಾಜ್ಯ ಅಂಗ. ಮರದಲ್ಲಿ ಹೇರಳವಾಗಿರುವ ಸೆಲ್ಯುಲೊಸ್ ಮತ್ತು ಲಿಗ್ನಿನ್ಸ್ ಎಂಬ ಬಹುಶರ್ಕರ (ಸಕ್ಕರೆ) ಅಂಶಗಳನ್ನು ಗೆದ್ದಲು ಹುಳುಗಳು ಬಳಸಿ ಕೊಳ್ಳುತ್ತವೆ.

ಸಾಮೂಹಿಕ ಜೀವನಶೈಲಿ ಅಳವಡಿಸಿಕೊಂಡಿರುವ ಗೆದ್ದಲು ಹುಳುಗಳು ಸಹಸ್ರ ಸಂಖ್ಯೆಯಲ್ಲಿ ಕೂಡು ಜೀವನ ನಡೆಸುತ್ತವೆ. ತನ್ನ ಬಲಿಷ್ಠ ಕೊಂಡಿಗಳಿಂದ ಮರವನ್ನು ಕತ್ತರಿಸುವ ಕೆಲಸವನ್ನು ಕೆಲಸಗಾರ ಗೆದ್ದಲು ಹುಳುಗಳು ಮಾಡುತ್ತವೆ.

ಗೆದ್ದಲು ಹುಳುಗಳ ಹೊಟ್ಟೆಯಲ್ಲೊಂದು ಬ್ರಹ್ಮಾಂಡವೇ ಅಡಗಿದೆ. ಎಂತಹ ದೊಡ್ಡ ಮರವೇ ಆಗಿದ್ದರೂ ಈ ಹುಳುಗಳು ಅದನ್ನು ಚೂರುಚೂರಾಗಿ ಕತ್ತರಿಸಿ ತಮ್ಮ ಹೊಟ್ಟೆಗೆ ಸೇರಿಸುತ್ತವೆ. ಇಷ್ಟು ಸಣ್ಣ ಹೊಟ್ಟೆ ಜಗತ್ತಿನ ಅತಿ ಉನ್ನತ ಜೈವಿಕ ಕ್ರಿಯಾಕಾರಿ (Bioreactor) ಆಗಿದೆ.

ಗೆದ್ದಲು ಹುಳುಗಳು ತಿಂದ ಮರದ ಪುಡಿಗಳಲ್ಲಿನ ಸೆಲ್ಯುಲೋಸನ್ನು ಜೀರ್ಣಿಸುವ ಕ್ಷಮತೆ ಈ ಹುಳುಗಳಲ್ಲಿಲ್ಲ. ಆದರೆ ಅವುಗಳು ಹೊಟ್ಟೆಯಲ್ಲಿ ಕೋಟಿಗಳ ಲೆಕ್ಕದಲ್ಲಿರುವ ವಿಶೇಷ ಸೂಕ್ಷ್ಮಜೀವಿ ಸಮೂಹ ಮರದ ಪುಡಿಗಳಲ್ಲಿ ಅಡಗಿರುವ ಸೆಲ್ಯುಲೊಸ್ ಅನ್ನು ಜೀರ್ಣಿಸಲು ಅಗತ್ತವಿರುವ ಕಿಣ್ವಗಳನ್ನು ಸ್ರವಿಸಿ ಮರವನ್ನು ಸಂಪೂರ್ಣವಾಗಿ ಕರಗಿಸುತ್ತವೆ. ಈ ಸೂಕ್ಷ್ಮಜೀವಿಗಳು ಗೆದ್ದಲಿನ ಹೊಟ್ಟೆಯಲ್ಲಿರುವ ಶೇ 95ರಷ್ಟು ಸೆಲ್ಯುಲೋಸನ್ನು ಕೇವಲ 24 ಗಂಟೆಗಳ ಒಳಗೆ ಸರಳವಾಗಿ ಬಳಸುವಂತಹ ಸಕ್ಕರೆಯನ್ನಾಗಿ ಪರಿವರ್ತಿಸುವ ಕ್ಷಮತೆ ಹೊಂದಿವೆ. ಈ ಸೂಕ್ಷ್ಮಜೀವಿ ಸಮೂಹದಲ್ಲಿ ದಂಡಾಣುಗಳು (ಬ್ಯಾಕ್ಟೀರಿಯಾ) ಮತ್ತು ಪ್ರೊಟೊಜೊವಾ (ಏಕಕೋಶವಿರುವ ಅಕಶೇರುಕ ಜೀವಿಗಳು) ಎಂಬ ಸೂಕ್ಷ್ಮ ಪ್ರಾಣಿಗಳಿದ್ದು ಇದ್ದು, ಸುಮಾರು 200ಕ್ಕೂ ಹೆಚ್ಚು ಪ್ರಭೇದಗಳನ್ನು ಗುರುತಿಸಲಾಗಿದೆ.

ಮರದಲ್ಲಿರುವ ಗೆದ್ದಲು ಗೂಡು ಮತ್ತು (ಒಳಚಿತ್ರ) ಗೆದ್ದಲು ಹುಳುಗಳು
ಚಿತ್ರಗಳು: ಲೇಖಕರವು

ಗೆದ್ದಲು ಹುಳುಗಳ ಕರುಳಿನಲ್ಲಿ ಕಂಡುಬಂದ ಸೂಕ್ಷ್ಮಜೀವಿಗಳು ಮತ್ತೆಲ್ಲೂ ಕಾಣಸಿಗದಂತಹ ವಿಶೇಷ ಜೀವಿಗಳು. ಇಲ್ಲಿರುವ ಸೂಕ್ಷ್ಮಜೀವಿಗಳನ್ನು ಫರ್ಮಿಕ್ಯೂಟ್ಸ್, ಪ್ರೋಟಿಯೊಬ್ಯಾಕ್ಟೀರಿಯಾ, ಸ್ಪಿರೊಕೀಟ್ಸ್, ಕ್ಯಾಂಡಿಡ್ಯಾಟಸ್ ಮತ್ತು ಬ್ಯಾಕ್ಟಿರೊಡೈಟಿಸ್ ಗುಂಪುಗಳಿಗೆ ಸೇರಿಸಲಾಗಿದೆ.

ಇವು ಮರದಲ್ಲಿರುವ ಸೆಲ್ಯುಲೋಸನ್ನು ಜೀರ್ಣಿಸಲು ಅವಶ್ಯವಿರುವ ಸೆಲ್ಯುಲೇಸ್ ಎಂಬ ಕಿಣ್ವಗಳನ್ನು ಉತ್ಪಾದಿಸಿ, ತಮ್ಮ ಜೀವಕೋಶದಿಂದ ಹೊರಗೆ ಸೂಸಿ ಮತ್ತು ಅಲ್ಲಿರುವ ಮರದ ಕಣಗಳನ್ನು ಸಂಪೂರ್ಣವಾಗಿ ಕರಗಿಸುತ್ತವೆ. ಆಗ ಬಿಡುಗಡೆಯಾಗುವ ಪೋಷಕಾಂಶಗಳನ್ನು ಗೆದ್ದಲು ಹುಳುಗಳು ಬಳಸಿಕೊಂಡು ತಮ್ಮ ಜೀವನಕ್ಕೆ ಬೇಕಾದ ಶಕ್ತಿಯನ್ನು ಪಡೆಯುತ್ತವೆ. ಇಂತಹ ಸೂಕ್ಷ್ಮಜೀವಿಗಳಲ್ಲಿಲ್ಲದಿದ್ದರೆ ಗೆದ್ದಲು ಹುಳುಗಳು ತಿಂದ ಮರದ ಚಕ್ಕೆಗಳಲ್ಲಿ ಅಡಗಿರುವ ಸಂಕೀರ್ಣ ಪೋಷಕಾಂಶಗಳನ್ನು ಉಪಯೋಗಿಸಲು ಆಗುವುದಿಲ್ಲ. ಮೊದಲು ಮರವನ್ನು ಪುಡಿ ಮಾಡಿ ಚೆನ್ನಾಗಿ ಅರೆಯುವ ಕೆಲಸ ಗೆದ್ದಲು ಹುಳುಗಳದ್ದಾಗಿದ್ದರೆ ಅದನ್ನು ಜೀರ್ಣಿಸಿ ಅದರಲ್ಲಡಗಿರುವ ಪೋಷಕಾಂಶಗಳನ್ನು ತಾವು ಉಂಡು ಗೆದ್ದಲು ಹುಳುಗಳಿಗೂ ಉಣ ಬಡಿಸುವ ಕೆಲಸ ಸೂಕ್ಷ್ಮಜೀವಿಗಳದ್ದು. ಇದಲ್ಲವೇ 'ಸಹಬಾಳ್ವೆ'?.

ಒಂದು ಪ್ರಾಣಿಪ್ರಭೇದ ಮತ್ತು ನೂರಾರು ಬಗೆಯ ಸೂಕ್ಷ್ಮಜೀವಿಗಳು ಸಹಜೀವನ ನಡೆಸುವುದರಿಂದ ಮಾತ್ರ ಪರಿಸರದಲ್ಲಿ ಎಲ್ಲಾ ಕೆಲಸಗಳು ನಿರ್ದಿಷ್ಟ ಮತ್ತು ಸೂಕ್ತ ರೀತಿಯಲ್ಲಿ ನಡೆಯುತ್ತಿದೆ. ಒಗ್ಗಟ್ಟಿನಲ್ಲಿ ಬಲವಿದೆ ಎಂದು ಇವರಿಗೆ ಹೇಳಿಕೊಟ್ಟವರಾರು? ನಮಗಂತೂ ಇವುಗಳಿಂದ ಒಂದು ಪಾಠ ಕಲಿತಂತಲ್ಲವೇ? ಬೇರೆ ಬೇರೆ ಜೀವಿಗಳ ಗುಂಪಿಗೆ ಮತ್ತು ತುಚ್ಛವೆಂದು ಕಾಣುವ ಜೀವಿಗಳಲ್ಲಿ ಇರುವ ಸಹಜೀವನ ತತ್ವ, ವಿಕಾಸದ ಉನ್ನತ ಶ್ರೇಣಿಯಲ್ಲಿರುವ ಮಾನವನಿಗೇಕಿಲ್ಲಾ?

ಭೂಮಿಯಲ್ಲಿ ಪ್ರತಿವರ್ಷ 20 ಸಾವಿರ ಕೋಟಿ ಟನ್‌ಗಳಷ್ಟು ಆಹಾರಕ್ಕೆ ಬಳಸಲಾಗದ ಸೆಲ್ಯುಲೋಸ್ ಇರುವ ಜೀವರಾಶಿಯ ಉತ್ಪನ್ನವಾಗುತ್ತದೆ ಎಂದು ಅಂದಾಜಿಸಲಾಗಿದೆ. ಇದನ್ನು ಇಂಧನ ಮೂಲವಾಗಿ ಬಳಸಲು ಸೆಲ್ಯುಲೋಸನ್ನು ಜೀರ್ಣಿಸುವುದು ಅತಿ ಅವಶ್ಯಕ. ಹಾಗಾಗಿ ಗೆದ್ದಲು ಹುಳುಗಳ ಹೊಟ್ಟೆಯಿಂದ ಸೂಕ್ಷ್ಮ ಜೀವಿಗಳನ್ನು ಹೊರತೆಗೆದು ಪ್ರಯೋಗಶಾಲೆಯಲ್ಲಿ ಸೂಕ್ತವಾದ ಪೋಷಕಾಂಶಗಳನ್ನು ನೀಡಿ ಬೆಳೆಸಲಾಗಿದೆ. ನಂತರ ದೊಡ್ಡ ಕಾರ್ಖಾನೆಗಳಲ್ಲಿ ಅವುಗಳು ಸ್ರವಿಸುವ ಕಿಣ್ವಗಳ ಉತ್ಪಾದಿಸುವ ಸಂಶೋಧನೆ ಜೈವಿಕ ತಂತ್ರಜ್ಞಾನದ ಪ್ರಯೋಗಶಾಲೆಗಳಲ್ಲಿ ನಡೆಯುತ್ತಿದೆ. ಪ್ರಕೃತಿಯ ಅರಿವು ಅವಕಾಶದ ದ್ವಾರಗಳನ್ನು ತೆಗೆದಿಡುವುದು ತಾನೇ?

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು)

ಬಸ್ ಮೇಲೆ ಬಿದ್ದ ಮರ: ಕೊಡಗು ಜಿಲ್ಲಾಧಿಕಾರಿ ಕಚೇರಿ ತಡೆಗೋಡೆ ಕುಸಿಯುವ ಆತಂಕ

ತಗ್ಗಿದ ಮಳೆ: ಇಳಿಯದ ಪ್ರವಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭಾನುವಾರ ಮಳೆ ತುಸು ಬಿಡುವು ನೀಡಿದೆ. ವಿವಿಧ ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆದಿದ್ದವರೂ ತಮ್ಮ ಮನೆಗಳಿಗೆ ವಾಪಸಾಗಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ಮಳೆ ಬಿಡುವು ನೀಡಿದೆ. ಆದರೆ, ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಧಾರಾಕಾರ ಮಳೆ ಮುಂದುವರಿದ ಪರಿಣಾಮ, ಜಿಲ್ಲೆಯಲ್ಲಿ ಹರಿಯುವ ನದಿಗಳ ನೀರಿನ ಮಟ್ಟ ಹೆಚ್ಚುತ್ತ ಸಾಗಿದೆ.

ಮಾರ್ಕಂಡೇಯ ನದಿ ಉಕ್ಕಿ ಹರಿಯುತ್ತಿದ್ದು, ತಾಲ್ಲೂಕಿನ ರಕ್ಕಸಕೊಪ್ಪ ಜಲಾಶಯ ಬಹುತೇಕ ಭರ್ತಿಯಾಗಿದೆ. 2,475 ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಈಗ 2,473.50 ಅಡಿ ನೀರಿದೆ. ಮುಂಜಾಗ್ರತಾ ಕ್ರಮವಾಗಿ ನದಿಗೆ ನೀರು ಹರಿಸಲಾಗುತ್ತಿದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಸೇತುವೆ ಬಳಿ ಕೃಷ್ಣಾ ನದಿಗೆ 1,29,370 ಕ್ಯುಸೆಕ್ ನೀರು ಹರಿದು ಬರುತ್ತಿದೆ.

ಉತ್ತರ ಕನ್ನಡದಲ್ಲಿ ಮಳೆಯ ಅಬ್ಬರ ಕ್ಷೀಣಿಸಿತ್ತು. ಹೊನ್ನಾವರ ತಾಲ್ಲೂಕಿನ ಗುಂಡಬಾಳ, ಸಾಲ್ಕೋಡು ಹಳ್ಳಗಳು, ಕುಮಟಾ ತಾಲ್ಲೂಕಿನ ಅಘನಾಶಿನಿ ಹಾಗೂ ಅಂಕೋಲಾ ತಾಲ್ಲೂಕಿನ ಗಂಗಾವಳಿ ನದಿಗಳಲ್ಲಿ ಪ್ರವಾಹದ ಸ್ಥಿತಿ ದೂರವಾಗಿದೆ. ಸುತ್ತಮುತ್ತಲಿನ ಜಮೀನು, ಮನೆಗಳಿಂದಲೂ ನೀರು ಇಳಿದಿದೆ. ವಿವಿಧ ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆದಿದ್ದವರೂ ತಮ್ಮ ಮನೆಗಳಿಗೆ ವಾಪಸಾಗಿದ್ದಾರೆ.

ಹೊನ್ನಾವರ ತಾಲ್ಲೂಕಿನ ವಂದೂರಿನಲ್ಲಿ ಶನಿವಾರ ರೈಲ್ವೆ ಹಳಿ ಸಮೀಪದ ಹಳ್ಳದ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದ ಕೂಲಿ ಕಾರ್ಮಿಕ ಹಳದಿಪುರದ ಕೃಷ್ಣ ಮಾಸ್ತಿಗೌಡ (48) ಅವರ ಮೃತದೇಹ ಪತ್ತೆಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಮಳೆಯ ಆರ್ಭಟ ಮುಂದುವರಿದಿದೆ. ಹೊಸನಗರದಿಂದ ನಿಟ್ಟೂರು–ಕೊಲ್ಲೂರು ಸಂಪರ್ಕ ರಸ್ತೆಯಾದ ನಾಗೋಡಿ ಘಾಟಿಯಲ್ಲಿ ಖಾಸಗಿ ಬಸ್ ಮೇಲೆ ಮರ ಉರುಳಿಬಿದ್ದಿದ್ದು, ಯಾವುದೇ ಹಾನಿಯಾಗಿಲ್ಲ. ಶಿವಮೊಗ್ಗದಿಂದ ಕುಂದಾಪುರಕ್ಕೆ ಹೊರಟಿದ್ದ ಖಾಸಗಿ ಬಸ್ ಮೇಲೆ ಅಕೇಶಿಯಾ ಮರ ಬಿದ್ದಿತ್ತು.

ಸ್ಥಳೀಯರ ಸಹಕಾರದಿಂದ ತೆರವುಗೊಳಿಸಲಾಯಿತು. ಇದರಿಂದ ಕೆಲ ಹೊತ್ತು ರಸ್ತೆಯಲ್ಲಿ ಸಂಚಾರ ಬಂದ್ ಆಗಿತ್ತು.

ಕೊಡಗು ಜಿಲ್ಲೆಯಲ್ಲಿ ಮಳೆಯ ಅಬ್ಬರ ತಗ್ಗಿದೆ. ಅಪಾಯದಲ್ಲಿದ್ದವರ ಮನವೊಲಿಸಿದ ಜಿಲ್ಲಾಡಳಿತ, 127 ಕುಟುಂಬಗಳ 452 ಮಂದಿಯನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಿದೆ. ಇದರಿಂದ ಕಾಳಜಿ ಕೇಂದ್ರದಲ್ಲಿರುವವರ ಸಂಖ್ಯೆ 602ಕ್ಕೆ ಏರಿದೆ.

ಭಾಗಮಂಡಲ ಸೇರಿದಂತೆ ಅನೇಕ ಕಡೆ ನದಿ ನೀರಿನ ಮಟ್ಟದಲ್ಲಿ ಇಳಿಕೆಯಾಗುತ್ತಿದೆ. ಆದಾಗ್ಯೂ, ನಾಪೋಕ್ಲು– ಮೂರ್ನಾಡು ಸಂಪರ್ಕ ರಸ್ತೆಯ ಬೊಳಿಬಾಣೆಯಲ್ಲಿ ರಸ್ತೆ ಮೇಲೆ ನೀರು ಹರಿಯುತ್ತಿದೆ. 2 ಮನೆಗಳಿಗೆ ಹಾನಿಯಾಗಿದೆ. ದೊಡ್ಡಪುಲಿಕೋಟು ಗ್ರಾಮದ ಮಣವಟ್ಟೀರ ದಯಕುಟ್ಟಪ್ಪ ಅವರ ಮನೆಯ ಹಿಂಭಾಗ ಮಣ್ಣು ಕುಸಿದು ಕಾಫಿ ಗಿಡಗಳು ನಾಶವಾಗಿವೆ.

ಕೊಡಗು ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆಯ ಸ್ಲ್ಯಾಬ್‌ಗಳು ಮಳೆಗೆ ಹೊರಚಾಚಿದ್ದು, ಕುಸಿಯುವ ಆತಂಕ ಎದುರಾಗಿದೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್*	124.80	123.24	77,154	82,899
ಹಾರಂಗಿ	2,859	2,854.40	9,080	10,000
ಕಬಿನಿ	2,284	2,282.61	33,700	33,500
ಹೇಮಾವತಿ	2,922	2920.30	34,867	34,816
ಲಿಂಗನಮಕ್ಕಿ	1,819	1,794.20	65,028	1034.91
ಸೂಪಾ (ಮೀ)	564	539	43,268	-
ಮಾಣಿ	595	582.54	8,607	-
ತುಂಗಭದ್ರಾ	1,633	1,630.56	1,65,940	1,53,896
ಮಲಪ್ರಭಾ	2,079.50	2,065.30	17,150	194
ಘಟಪ್ರಭಾ	2,175	2,141	28,791	132
ಭದ್ರಾ	186	182.3	45,080	52,730
ಆಲಮಟ್ಟಿ (ಮೀ)	519.60	517.18	1,33,611	1,48,367
ನಾರಾಯಣಪುರ (ಮೀ)	492.25	491.07	1,60,000	1,66,586

* ನೆಲಮಟ್ಟದಿಂದ

ರಸ್ತೆ ಬಿರುಕು; ಹೆಚ್ಚಿದ ಭೀತಿ

ಹೆಬ್ರಿ: ಉಡುಪಿ–ಹೆಬ್ರಿ–ತೀರ್ಥಹಳ್ಳಿ ರಾಷ್ಟ್ರೀಯ ಹೆದ್ದಾರಿಯ ಆಗುಂಬೆ ಘಾಟಿಯ 4ನೇ ತಿರುವಿನಲ್ಲಿ ರಸ್ತೆಯು ಬಿರುಕು ಬಿಟ್ಟಿದ್ದು ಮತ್ತೆ ಕುಸಿಯುವ ಭೀತಿ ಎದುರಾಗಿದೆ. ಕೆಲ ದಿನಗಳಿಂದ ಆಗುಂಬೆ ಘಾಟಿಯಲ್ಲಿ ನಿರಂತರ ಮಳೆಯಾಗುತ್ತಿದ್ದು, ಮರಗಳು ಧರೆಗುರುಳಿವೆ. ಕೆಲವೆಡೆ ಮತ್ತಷ್ಟು ಕುಸಿಯುವ ಭೀತಿ ಎದುರಾಗಿದೆ. ಪ್ರಯಾಣಿಕರು ಆತಂಕದಿಂದ ಸಂಚರಿಸುವಂತಾಗಿದೆ.

ಹೆಬ್ರಿ ಪರಿಸರದ ವಿವಿಧೆಡೆ ಮುಂಜಾನೆಯಿಂದ ಮಳೆಯಾಗುತ್ತಿದೆ. ಶನಿವಾರ ರಾತ್ರಿ ಸಿಡಿಲು ಸಹಿತ ಮಳೆಯಾಗಿದೆ. ಶಿವಪುರದಲ್ಲಿ ವಿದ್ಯುತ್ ಕಂಬ ಬಿದ್ದು ವಿದ್ಯುತ್ ಸರಬರಾಜು ವ್ಯತ್ಯಯಗೊಂಡಿದೆ.

ಉಡುಪಿ ಹೆಬ್ರಿ ತೀರ್ಥಹಳ್ಳಿ ರಾಷ್ಟ್ರೀಯ ಹೆದ್ದಾರಿಯ ಆಗುಂಬೆಘಾಟಿಯ ನಾಲ್ಕನೇ ತಿರುವಿನಲ್ಲಿ ರಸ್ತೆಯು ಬಿರುಕು ಬಿಟ್ಟಿರುವುದು.

ಶಿರಾಡಿ: ಲಘು ವಾಹನಗಳಿಗೆ ಬದಲಿ ರಸ್ತೆ

ಹಾಸನ: ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಬಳಿ ಭೂಕುಸಿತ ಸಂಭವಿಸಿದ್ದರಿಂದ ಎಲ್ಲ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಕೆಲ ಷರತ್ತಿನೊಂದಿಗೆ ಕಾರು, ಜೀಪು, ಸೇರಿದಂತೆ ಸಣ್ಣ ವಾಹನಗಳಿಗೆ ಬದಲಿ ಮಾರ್ಗದಲ್ಲಿ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಕಾರು, ಜೀಪು, ಟೆಂಪೊ, ಎಲ್‌ಸಿವಿ (ಮಿನಿ ವ್ಯಾನ್), ಪ್ರಯಾಣಿಕ ವಾಹನಗಳು, ದ್ವಿಚಕ್ರ ವಾಹನಗಳು ಮತ್ತು ಆಂಬುಲೆನ್ಸ್‌ಗಳು ಮಾತ್ರ ಸಕಲೇಶಪುರದಿಂದ ಆನೆಮಹಲ್–ಕ್ಯಾನಹಳ್ಳ–ಚಿನ್ನಳ್ಳಿ–ಕಡಗರವಳ್ಳಿ–ಮಾರನಹಳ್ಳಿ ಮಾರ್ಗದ ಮೂಲಕ ಮಂಗಳೂರು ತಲುಪಲು ಅವಕಾಶ ಕಲ್ಪಿಸಲಾಗಿದೆ.

ಮಂಗಳೂರಿನಿಂದ ಬೆಂಗಳೂರಿಗೆ ತೆರಳುವವರು ಮಾರನಹಳ್ಳಿಯಿಂದ ಕ್ಯಾಮನಹಳ್ಳಿ–ಹಾರ್ಲೆ–ಕೂಡಿಗೆ–ಅನೆಮಹಲ್–ಸಕಲೇಶಪುರ ಮಾರ್ಗದ ಮೂಲಕ ಬೆಂಗಳೂರು ತಲುಪಬಹುದು. ಈ ಮಾರ್ಗದಲ್ಲಿ ಏಕಮುಖ ಸಂಚಾರಕ್ಕೆ ಮಾತ್ರ ಅವಕಾಶ ನೀಡಲಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಡಿಕೇರಿ-ಮಂಗಳೂರು ರಸ್ತೆಯಲ್ಲಿರುವ ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆಯ ಸ್ಲ್ಯಾಬ್‌ಗಳು ಹೊರಚಾಚಿದ್ದು, ಕಳಚಿ ಬೀಳುವ ಆತಂಕ ಮೂಡಿದೆ. ಹೀಗಾಗಿ, ವಾಹನ ಸಂಚಾರಕ್ಕೆ ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಗಿದೆ.

ಮಡಿಕೇರಿಯಿಂದ ಮಂಗಳೂರಿಗೆ ಹೋಗುವವರು ಹಾಗೂ ಬರುವವರು ಮೇಕೇರಿ-ಅಪ್ಪಂಗಳ-ತಾಳತ್ತಮನೆ ಜಂಕ್ಷನ್ ಮಾರ್ಗದಲ್ಲಿ ಸಂಚರಿಸಬೇಕಿದೆ. ನಿರಂತರ ಮಳೆಯಿಂದಾಗಿ ವಾರದಿಂದಲೂ ಸ್ಲ್ಯಾಬ್‌ಗಳು ಹೊರಚಾಚಿವೆ. 'ತಡೆಗೋಡೆ ಕುಸಿದು ಬೀಳುವುದಿಲ್ಲ, ಒಳಗೆ ಮಳೆ ನೀರು ಸೇರಿರುವುದರಿಂದ ತೊಂದರೆಯಾಗಿದೆಯಷ್ಟೆ' ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಪ್ರತಿಪಾದಿಸಿದ್ದರು.

ತಡೆಗೋಡೆ ಕುಸಿತದ ಭೀತಿಯಿಂದ ಮಂಗಳೂರು ರಸ್ತೆಯಲ್ಲಿ ಸಂಚಾರ ನಿಷೇಧಿಸಿ ಮೇಕೇರಿ-ಅಪ್ಪಂಗಲ-ತಾಳತ್ತಮನೆ ಮಾರ್ಗದಲ್ಲಿ ಸಂಚರಿಸಲು ಅವಕಾಶ ನೀಡಲಾಗಿದೆ. ಆದರೆ, ಇಲ್ಲಿ ರಸ್ತೆ ಚಿಕ್ಕದಾಗಿರುವುದರಿಂದ ವಾಹನ ದಟ್ಟಣೆ ಉಂಟಾಗಿದೆ. ಕಿ.ಮೀ ದೂರದವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಕಲಬುರಗಿ, ಬೀದರ್, ಯಾದಗಿರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಮಳೆ ಸುರಿಯಿತು. ಕಲಬುರಗಿ ನಗರ ಸೇರಿದಂತೆ ಅಫಜಲಪುರ, ಚಿತ್ತಾಪುರ, ಕಮಲಾಪುರ, ಕಾಳಗಿ, ಯಡ್ರಾಮಿ ತಾಲ್ಲೂಕಿನ ಹಲವೆಡೆ ಮಳೆಯಾಗಿದೆ. ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ 20 ನಿಮಿಷ ಮಳೆ ಸುರಿದಿದೆ. ಕೊಪ್ಪಳ ನಗರ ಮತ್ತು ಯಲಬುರ್ಗಾದಲ್ಲಿ ಜಿಟಿಜಿಟಿ ಮಳೆಯಾಗಿದೆ. ಯಾದಗಿರಿ, ಶಹಾಪುರದಲ್ಲಿಯೂ ಮಳೆಯಾಯಿತು.

ಮಳೆ: ಎಲ್ಲಿ, ಎಷ್ಟು?

ಸ್ಥಳ	ಸೆಂ ಮೀ.
ಗೇರುಸೊಪ್ಪ	17.7
ಕದ್ರಾ	12.3
ಕೊಡಸಳ್ಳಿ	12
ಅಂಕೋಲಾ	11.8
ಕಾರವಾರ	11.6
ಭಟ್ಕಳ	11.3
ಯಲ್ಲಾಪುರ	11.4
ಚಕ್ರಾ	15.7
ಮಾಣಿ	15.5

ಉತ್ತರ ಕನ್ನಡ, ಬೆಳಗಾವಿಯಲ್ಲಿ 'ಆರೆಂಜ್ ಅಲರ್ಟ್'

ಬೆಂಗಳೂರು: ರಾಜ್ಯದ ಉತ್ತರ ಕನ್ನಡ, ಕೊಡಗು ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಸೋಮವಾರ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಕರಾವಳಿ ಭಾಗದ ಜಿಲ್ಲೆಗಳು ಹಾಗೂ ಒಳನಾಡಿನ ಅಲ್ಲಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

'ಎನ್‌ಎಚ್' ನಿರ್ಮಾಣಕ್ಕೆ ಕೆರೆ ಹೂಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು (ಎನ್‌ಎಚ್) ನಿರ್ಮಾಣವಾಗುವ ಸಂದರ್ಭದಲ್ಲೇ 1,038 ಕೆರೆಗಳ ಹೂಳೆತ್ತಿ, ಏರಿ ಭದ್ರ ಮಾಡುವ ಯೋಜನೆಗೆ ಲೋಕೋಪಯೋಗಿ ಇಲಾಖೆ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ರಾಷ್ಟ್ರೀಯ ಹೆದ್ದಾರಿ ಯೋಜನೆಗೆ ಕೆರೆಗಳ ಹೂಳನ್ನು ಬಳಸಿಕೊಳ್ಳಬೇಕು. ವೈಜ್ಞಾನಿಕ ರೀತಿಯಲ್ಲಿ ಹೂಳನ್ನು ತೆಗೆದುಕೊಳ್ಳಬಹುದು. ಹೆದ್ದಾರಿ ನಿರ್ಮಾಣವಾಗುವ 5 ಕಿ.ಮೀ ಸುತ್ತಳತೆಯಲ್ಲಿರುವ ಕೆರೆಗಳ ಅಭಿವೃದ್ಧಿ ಮಾಡಲಾಗುತ್ತಿದೆ. ಇದಕ್ಕೆ ಸರ್ಕಾರದಿಂದ ವೆಚ್ಚ ಇರುವುದಿಲ್ಲ. ಗುತ್ತಿಗೆದಾರರೇ ಕಾಮಗಾರಿ ಮಾಡಲಿದ್ದಾರೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸಿ.ಸಿ.ಪಾಟೀಲ ತಿಳಿಸಿದ್ದಾರೆ.

'ಕೇಂದ್ರದ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಸಹಯೋಗದಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಜಾರಿಗೊಳ್ಳುತ್ತಿರುವ ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ರಾಜ್ಯಕ್ಕೆ ಭೇಟಿ ಕೊಟ್ಟಾಗ ಘೋಷಿಸಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್‌ನಲ್ಲಿ ಈ ಯೋಜನೆ ಅನುಷ್ಠಾನದ ಬಗ್ಗೆ ಪ್ರಕಟಿಸಿದ್ದರು. ಅದರಂತೆ ಸಣ್ಣ ನೀರಾವರಿ ಇಲಾಖೆಯಿಂದ ಯೋಜನೆಗೆ ಸಹಮತಿ ಪಡೆಯಲಾಗಿದೆ. ಲೋಕೋಪಯೋಗಿ ಇಲಾಖೆ ಉಸ್ತುವಾರಿಯಲ್ಲಿ ಈ ಯೋಜನೆ ಜಾರಿಯಾಗುತ್ತಿದೆ' ಎಂದರು.

'ಹೆದ್ದಾರಿ ಗುತ್ತಿಗೆದಾರರು ಅವಶ್ಯವಿರುವ ಮಣ್ಣನ್ನು ಸ್ಥಳೀಯವಾಗಿ ಖರೀದಿಸುತ್ತಿದ್ದರು. ಈಗ ಅವರು ಮಣ್ಣನ್ನು ಹೆದ್ದಾರಿ ಪಕ್ಕದಲ್ಲಿರುವ ಕೆರೆಗಳಿಂದಲೇ ತೆಗೆಸಿ ಬಳಸಿಕೊಳ್ಳಬಹುದು. ಇದರಿಂದ ಕೆರೆಯ ಜೀರ್ಣೋದ್ಧಾರವಾಗುತ್ತದೆ. ಕೆರೆಗಳಲ್ಲಿ ನೀರು ನಿಂತು, ಅಂತರ್ಜಲ ವೃದ್ಧಿಸಿದಂತಾಗುತ್ತದೆ. 'ಅಮೃತ ಸರೋವರ ನಿರ್ಮಾಣ' ಅಂಗವಾಗಿ ಈ ಯೋಜನೆ ರಾಜ್ಯದಲ್ಲಿಯೂ ಜಾರಿಯಾಗುತ್ತಿದೆ' ಎಂದು ತಿಳಿಸಿದ್ದಾರೆ.

ಗುತ್ತಿಗೆದಾರರು ಅಥವಾ ರಸ್ತೆ ನಿರ್ಮಾಣ ಪ್ರಾಧಿಕಾರವು ಕೆರೆಗಳಿಂದ ಹೂಳು ತೆಗೆಯಲು ಸರ್ಕಾರಕ್ಕೆ ಶುಲ್ಕ ನೀಡಬೇಕಾಗಿಲ್ಲ ಮತ್ತು ಈ ಹೂಳನ್ನು ರಸ್ತೆ ನಿರ್ಮಾಣಕ್ಕಲ್ಲದೇ ಬೇರೆ ಉದ್ದೇಶಕ್ಕೆ ಬಳಸುವಂತಿಲ್ಲ. ಕೆರೆಯ ಸಂರಕ್ಷಣೆಗೆ ಅಪಾಯವಾಗದಂತೆ ಏನೆಲ್ಲ ಮುಂಜಾಗ್ರತೆ ಕೈಗೊಳ್ಳಬೇಕು ಎಂಬ ಬಗ್ಗೆ ನಮ್ಮ ಲೋಕೋಪಯೋಗಿ ಇಲಾಖೆಯಿಂದ ವಿವರವಾದ ಮಾರ್ಗಸೂಚಿಯನ್ನು ಈಗಾಗಲೇ ಹೊರಡಿಸಲಾಗಿದೆ ಎಂದಿದ್ದಾರೆ.

ಯಾವ ಜಿಲ್ಲೆಯಲ್ಲಿ ಎಷ್ಟು?

'ಅಮೃತ ಸರೋವರ ನಿರ್ಮಾಣ' ಯೋಜನೆಯಲ್ಲಿ ತುಮಕೂರು ಜಿಲ್ಲೆಯಲ್ಲಿ 115 ಕೆರೆಗಳು ಅಭಿವೃದ್ಧಿಯಾಗಲಿವೆ. ಚಿಕ್ಕಬಳ್ಳಾಪುರ– 90, ಬೆಂಗಳೂರು ಗ್ರಾಮಾಂತರ– 64, ಶಿವಮೊಗ್ಗ– 59, ಹಾಸನ– 59, ಬೆಳಗಾವಿ– 58, ಧಾರವಾಡ– 56, ಚಿಕ್ಕಮಗಳೂರು– 56, ಕೋಲಾರ– 51, ಚಿತ್ರದುರ್ಗ– 47, ರಾಮನಗರ– 42, ಹಾವೇರಿ– 40, ಕೊಪ್ಪಳ– 35, ವಿಜಯಪುರ– 35, ಕಲಬುರ್ಗಿ– 31, ಬೆಂಗಳೂರು ನಗರ– 28, ಬೀದರ್– 25, ಚಾಮರಾಜನಗರ– 22, ಯಾದಗಿರಿ– 20, ಬಳ್ಳಾರಿ– 18, ಮಂಡ್ಯ– 18, ಬಾಗಲಕೋಟೆ– 15, ದಾವಣಗೆರೆ– 15, ರಾಯಚೂರು– 14, ಗದಗ– 10, ಮೈಸೂರು– 9, ಉಡುಪಿ– 3, ದಕ್ಷಿಣ ಕನ್ನಡ–2, ಉತ್ತರ ಕನ್ನಡ–1.

ರಾಷ್ಟ್ರೀಯ ಹೆದ್ದಾರಿ 44, 48, 69, 75, 275, 648, 948 ನಿರ್ಮಾಣದ ಸಂದರ್ಭದಲ್ಲಿ 1,038 ಕೆರೆಗಳಲ್ಲಿ ಹೂಳೆತ್ತಲಾಗುತ್ತದೆ.

'ಸೋನಿಯಾ, ರಾಹುಲ್ ಅಮಾಯಕರಲ್ಲ'

ಬೆಂಗಳೂರು: ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಮತ್ತು ರಾಹುಲ್ ಗಾಂಧಿ ಪ್ರಾಮಾಣಿಕರಾಗಿದ್ದರೆ ಇ.ಡಿ ತನಿಖೆಗೆ ಯಾಕೆ ಹೆದರಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರಶ್ನಿಸಿದ್ದಾರೆ.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ ಎಂಬಂತೆ ನಡೆದುಕೊಂಡ ಕಾರಣ ಇ.ಡಿ ನೋಟಿಸ್ ಕೊಟ್ಟಿದೆ. ಭ್ರಷ್ಟಾಚಾರ ಮಾಡಿದ್ದರೆ ಅವರನ್ನು ಸುಮ್ಮನೇ ಬಿಟ್ಟುಬಿಡಬೇಕೆಂದು ಕಾಂಗ್ರೆಸ್ ಬಯಸುತ್ತದೆಯೇ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ ಪಕ್ಷಕ್ಕೆ ಸಂವಿಧಾನಬದ್ಧ ಸಂಸ್ಥೆಗಳ ಬಗ್ಗೆ ಗೌರವವೇ ಇಲ್ಲ. ಸೋನಿಯಾ ಮತ್ತು ರಾಹುಲ್ ಈ ಎಲ್ಲ ಸಂಸ್ಥೆಗಳಿಗಿಂತಲೂ ಅತೀತರು ಎಂಬಂತೆ ಕಾಂಗ್ರೆಸ್ ವರ್ತಿಸುತ್ತಿರುವುದರಿಂದಲೇ ಅವರು ರಾಷ್ಟ್ರವ್ಯಾಪಿ ಹೋರಾಟ ಹಮ್ಮಿಕೊಂಡಿದ್ದಾರೆ. ಸಂವಿಧಾನ ರಚನೆಯ ಸಂದರ್ಭದಲ್ಲಿ ಕಾಂಗ್ರೆಸ್ಸಿಗರಿಗೆ ಪ್ರಭಾವ ಇತ್ತು. ಕಾಂಗ್ರೆಸ್‌ನವರು ಭ್ರಷ್ಟಾಚಾರ ಮಾಡಿದರೆ ಪ್ರಶ್ನಿಸುವಂತಿಲ್ಲ ಎಂಬ ವಿಧಿಯನ್ನು ಸಂವಿಧಾನದಲ್ಲಿ ಆಗಲೇ ಸೇರಿಸಬಹುದಿತ್ತು' ಎಂದರು.

ಎರಡೂ ಸೇತುವೆ ಅವೈಜ್ಞಾನಿಕವಾಗಿ ನಿರ್ಮಾಣ; ತಾಂತ್ರಿಕ ವರದಿಯಿಂದ ಬಹಿರಂಗ

ಹಂಪಿ ಸ್ಮಾರಕಗಳಿಗೆ ಧಕ್ಕೆ ಆತಂಕ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಇಲ್ಲಿನ ತುಂಗಭದ್ರಾ ಜಲಾಶಯಕ್ಕೆ ಅಡ್ಡಲಾಗಿ ನಿರ್ಮಿಸಿರುವ ಎರಡೂ ಸೇತುವೆಗಳು ಅವೈಜ್ಞಾನಿಕವಾಗಿದ್ದು, ಮುಂಬರುವ ವರ್ಷಗಳಲ್ಲಿ ಪ್ರವಾಹ ಬಂದು ಹಂಪಿಯ ಸ್ಮಾರಕಗಳಿಗೆ ಧಕ್ಕೆಯಾಗಬಹುದು' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಗೆ (ಎಎಸ್‌ಐ) ಸಲ್ಲಿಕೆಯಾಗಿರುವ ತಾಂತ್ರಿಕ ವರದಿಯಿಂದ ಗೊತ್ತಾಗಿದೆ.

ಕೃಷ್ಣ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರ ತಾಂತ್ರಿಕ ಸಹಾಯಕ ಸುಧೀರ್ ಸಜ್ಜನ್ ಅವರು ಎರಡೂ ಸೇತುವೆಗಳಿಂದ ಹಂಪಿಯಲ್ಲಾಗುವ ಸಮಸ್ಯೆ ಬಗ್ಗೆ ವರದಿ ಸಲ್ಲಿಸಿದ್ದು, ಅದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ.

1960ರಲ್ಲಿ ನಿರ್ಮಿಸಿದ್ದ ಕಂಪ್ಲಿ–ಗಂಗಾವತಿ ಹಳೆಯ ಸೇತುವೆ ಮತ್ತು 2017ರಲ್ಲಿ ಉದ್ಘಾಟನೆಗೊಂಡಿರುವ ತಾಲ್ಲೂಕಿನ ಬುಕ್ಕಸಾಗರ–ಕಡೇಬಾಗಿಲು ಸೇತುವೆಗಳನ್ನು ನದಿ ಹರಿಯುವ ವಿರುದ್ಧ ದಿಕ್ಕಿಗೆ ನಿರ್ಮಿಸಲಾಗಿದೆ. ಜಲಾಶಯದಿಂದ ನದಿಗೆ ನೀರು ಹರಿಸಿದಾಗ ಈ ಸೇತುವೆಗಳಿಂದ ಸುಗಮವಾಗಿ ಹರಿದು ಹೋಗುತ್ತಿಲ್ಲ. ಸೇತುವೆಗೆ ನೀರು ಬಂದು ವಿರುದ್ಧ ದಿಕ್ಕಿಗೆ ಹರಿಯುತ್ತಿದೆ. ಹೂಳು ಕೂಡಾ ಹಿಮ್ಮುಖವಾಗಿ ಹರಿದು ಹೋಗುತ್ತಿದೆ. ಇದರಿಂದಾಗಿ ಬರುವ ವರ್ಷಗಳಲ್ಲಿ ಸ್ಮಾರಕಗಳು ಮುಳುಗಿ ಧಕ್ಕೆಯಾಗುವ ಅಪಾಯವಿದೆ. ಅಣೆಕಟ್ಟೆಯಿಂದ ಒಂದು ಲಕ್ಷ ಕ್ಯುಸೆಕ್ ನೀರು ಹರಿಸಿದಾಗಲೆಲ್ಲಾ ಪುರಂದರ ಮಂಟಪ ಸೇರಿದಂತೆ ಕೆಲ ಸ್ಮಾರಕಗಳು ಮುಳುಗುತ್ತಿವೆ. ಅದಕ್ಕಿಂತ ಹೆಚ್ಚಿನ ನೀರು ಹರಿಸಿದರೆ ಹೆಚ್ಚಿನ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ ಎಂದು ವರದಿಯಲ್ಲಿ ತಿಳಿಸಿದ್ದಾರೆ.

13ರಿಂದ 16ನೇ ಶತಮಾನದ ಮಧ್ಯೆ ಹಂಪಿಯಲ್ಲಿ ನಿರ್ಮಾಣಗೊಂಡಿರುವ ಸ್ಮಾರಕಗಳು ತುಂಗಭದ್ರಾ ನದಿ ಪಾತ್ರಕ್ಕಿಂತ 15 ಮೀಟರ್ ಎತ್ತರದಲ್ಲಿವೆ. ಹೀಗಾಗಿಯೇ ಅವು ಸುರಕ್ಷಿತವಾಗಿವೆ. ಆದರೆ, ಈ ಸೇತುವೆಗಳಿಂದ ವಿರುದ್ಧ ದಿಕ್ಕಿನಲ್ಲಿ ನೀರು ಬಂದು, ಹೂಳಿನ ಪ್ರಮಾಣ ಹೆಚ್ಚಾಗುತ್ತಿದೆ. ಹಂಪಿಯ ತಳವಾರಘಟ್ಟವೇ ಇದಕ್ಕೆ ಸಾಕ್ಷಿ. ಅಲ್ಲಿ ನದಿ ನೆಲಕ್ಕೆ ಸಮನಾಗಿ ಹರಿಯುತ್ತಿದೆ.

ಕಂಪ್ಲಿ–ಗಂಗಾವತಿ ಸೇತುವೆ 1960ರಲ್ಲಿ ನಿರ್ಮಾಣಗೊಂಡಿದೆ. ಆದರೆ, ಆರಂಭಿಕ ವರ್ಷಗಳಲ್ಲಿ ಅದರಿಂದ ಸಮಸ್ಯೆಯಾಗಿರಲಿಲ್ಲ. ಆದರೆ, 1992ರಲ್ಲಿ 3.69 ಲಕ್ಷ ಕ್ಯುಸೆಕ್ ನೀರು ನದಿಗೆ ಹರಿಸಿದಾಗ ಪರಿಣಾಮ ಉಂಟಾಗಿತ್ತು. ಸೇತುವೆ 12 ಮೀಟರ್ ಎತ್ತರ ಹಾಗೂ ಅವೈಜ್ಞಾನಿಕವಾಗಿ ನಿರ್ಮಿಸಿದ್ದರಿಂದ ಸಹಜ ಹರಿವಿಗೆ ತಡೆಯೊಡ್ಡಿತ್ತು. 2017ರಲ್ಲಿ ಬುಕ್ಕಸಾಗರ–ಕಡೇಬಾಗಿಲು ನಡುವೆ 487.5 ಮೀಟರ್ ಉದ್ದದ ಹೊಸ ಸೇತುವೆ ನಿರ್ಮಿಸಲಾಗಿದೆ. ಇದರ ಎತ್ತರ 500 ಮೀಟರ್ ಇದೆ. ಇದು ಕೂಡ ಅವೈಜ್ಞಾನಿಕವಾಗಿ ನಿರ್ಮಿಸಿದ್ದು, ನೀರು ಸಹಜವಾಗಿ ಹರಿದು ಹೋಗಲು ಸಮಸ್ಯೆಯಾಗುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಕಂಪ್ಲಿ–ಗಂಗಾವತಿ ಸೇತುವೆಗೆ ಪರ್ಯಾಯವಾಗಿ 2009ರಲ್ಲಿ ಹಂಪಿಯಲ್ಲಿ ತೂಗು ಸೇತುವೆ ನಿರ್ಮಿಸುವಾಗ ಅದು ಅರ್ಧದಲ್ಲೇ ಕುಸಿದು ಬಿದ್ದು, ಏಳು ಜನರ ಸಾವು ಸಂಭವಿಸಿತ್ತು. ಇದರ ಬಗ್ಗೆ ಯುನೆಸ್ಕೊ ಆಕ್ಷೇಪಿಸಿದ್ದರಿಂದ ಸರ್ಕಾರ ಬಳಿಕ ನಿರ್ಮಾಣ ಕೈಬಿಟ್ಟಿತ್ತು.

ತುಂಗಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಹೊಸಪೇಟೆ ತಾಲ್ಲೂಕಿನ ಬುಕ್ಕಸಾಗರ–ಕಡೇಬಾಗಿಲು ನಡುವೆ ಸಂಪರ್ಕ ಕಲ್ಪಿಸುವ ಸೇತುವೆ

ತಾಂತ್ರಿಕ ವರದಿಯಲ್ಲಿ ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಆದರೆ, ಇದು ಹಂಪಿ ವಿಶ್ವ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಸಂಬಂಧಿಸಿದೆ.

ನಿಹಿಲ್ ದಾಸ್, ಸೂಪರಿಟೆಂಡೆಂಟ್, ಪುರಾತತ್ವ ಸರ್ವೇಕ್ಷಣ ಇಲಾಖೆ ಹಂಪಿ ವೃತ್ತ

ಕಂಪ್ಲಿ–ಗಂಗಾವತಿ ನಡುವೆ ಹೊಸ ಸೇತುವೆ ನಿರ್ಮಾಣಕ್ಕೆ ಯೋಜನೆ ರೂಪಿಸಿ ₹100 ಕೋಟಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಆದರೆ, ಸರ್ಕಾರ ಹಣ ಬಿಡುಗಡೆಗೊಳಿಸಿಲ್ಲ.

ಜೆ.ಎನ್.ಗಣೇಶ್, ಶಾಸಕ, ಕಂಪ್ಲಿ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪ್ರವಾಹದಿಂದಾಗುವ ಹಾನಿ, ಭೂಕುಸಿತ ತಡೆಗೆ ಪರಿಹಾರವೇನು?

ಸಂವಾದ

ಭಾಗವಹಿಸುವವರು

ಅನಂತ ಹೆಗಡೆ ಆಶೀಸರ, ಅಧ್ಯಕ್ಷ, ವೃಕ್ಷಲಕ್ಷ ಆಂದೋಲನ, ಸಾಗರ, ಶಿವಮೊಗ್ಗ ಜಿಲ್ಲೆ

ರೂಪ ಹಾಸನ, ಪರಿಸರ ಕಾರ್ಯಕರ್ತೆ, ಹಾಸನ

ಸಿದಗೌಡ ಮೋದಗಿ, ರಾಜ್ಯ ಅಧ್ಯಕ್ಷ, ಭಾರತೀಯ ಕೃಷಿಕ ಸಮಾಜ (ಸಂಯುಕ್ತ), ಬೆಳಗಾವಿ

ಸಹದೇವ ಶಿವಪುರ, ಪಶ್ಚಿಮ ಘಟ್ಟ ಜಾಗೃತಿ ವೇದಿಕೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ

ಬೆಳಿಗ್ಗೆ 11 ರಿಂದ 12

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಒಳನೋಟ

ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3Bd965Z

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ, ಇಲಾಖೆ, ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532–225778 & 234747

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಡಬ್ಲ್ಯೂ–1, 2, 3 & 4)

THESE WORKS ARE GENARAL & ST CONTRACTORS

1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: **ಲೋಇ/ರಾವಿ/ತಾಂಶಾ–4/ಟೆಂಪ್ರ/2022–23/1439 ದಿನಾಂಕ: 13–07–2022,** 2) ಕಾಮಗಾರಿ ಹೆಸರು : ರಾಯಚೂರು ಜಿಲ್ಲೆಯ ಒಟ್ಟು 40 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು & ಸಿಂಧನೂರು ತಾಲೂಕು ವಿವಿದೆಡೆ ವಿವಿಧ ರಸ್ತೆ, ಕಟ್ಟಡ ಹಾಗೂ ಇನ್ನಿತರೆ ಕಾಮಗಾರಿಗಳ ನಿರ್ಮಾಣ. ಮತ್ತು ಅಭಿವೃದ್ಧಿ ಕಾಮಗಾರಿ. 3) ಕಾಮಗಾರಿಯ ಮೊತ್ತ: ಕನಿಷ್ಠ ರೂ. 884922.89 ಗರಿಷ್ಠ ರೂ. 66068256.11, 4) ಮುಂಗಡ ಠೇವಣಿ ಮೊತ್ತ : ಕನಿಷ್ಠ ರೂ. 22100.00 ಗರಿಷ್ಠ ರೂ. 992000.00, 5) ಕಾಲಾವಧಿ (ಮಳೆಗಾಲ ಸೇರಿ): ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು, 6) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ : 25–07–2022 ಸಂಜೆ 4.00 ಗಂಟೆಯವರೆಗೆ 7) ಟೆಂಡರ್ ತೆರೆಯುವ ದಿನಾಂಕ ; 26–07–2022 ಸಂಜೆ 4.30 ಗಂಟೆಯವರೆಗೆ

ಹೆಚ್ಚಿನ ವಿವರಗಳು ವೆಬ್‌ಸೈಟ್ https://www.eproc.karnataka.gov.in ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/195/ಎಂ.ಸಿ.&ಎ/2022–23

ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ

ನಂ.1/14, ನೆಲಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಸೌತ್ ವಿಂಗ್, ಯೂನಿಟಿ ಬಿಲ್ಡಿಂಗ್, ಬಿಷಪ್ ಕಾಟನ್ ಮಹಿಳಾ ಕಾಲೇಜು ಎದುರು, ಮಿಷನ್ ರಸ್ತೆ, ಬೆಂಗಳೂರು–560027

ಇಮೇಲ್ :mdkvcdc@gmail.com ವೆಬ್‌ಸೈಟ್: https://kvcdc.karnataka.gov.in

ಸಂಖ್ಯೆ:ಕಒಅಸನಿನಿ/ಸಿಆರ್–32/2022–23/33 ದಿನಾಂಕ: 16.07.2022

ಪ್ರಕಟಣೆ

ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ (ನಿ) ದಿಂದ ಹಿಂದುಳಿದ ವರ್ಗಗಳ ಪ್ರವರ್ಗ–3ಎ ನಲ್ಲಿ ಕ್ರಮ ಸಂಖ್ಯೆ 1 (ಎ) ರಿಂದ 1 (ಟಿ) ವರೆಗೆ ನಮೂದಾಗಿರುವ ಒಕ್ಕಲಿಗ, ವಕ್ಕಲಿಗ, ಸರ್ಪ ಒಕ್ಕಲಿಗ, ಹಳ್ಳಿಕಾರ್ ಒಕ್ಕಲಿಗ, ನಾಮದಾರಿ ಒಕ್ಕಲಿಗ, ಗಂಗಡ್‌ಕಾರ್ ಒಕ್ಕಲಿಗ, ದಾಸ್ ಒಕ್ಕಲಿಗ, ರೆಡ್ಡಿ ಒಕ್ಕಲಿಗ, ಮರಸು ಒಕ್ಕಲಿಗ, ಗೌಡ, (Gouda) / ಗೌಡ (Gowda) ಹಳ್ಳಿಕಾರ್, ಕುಂಚಿಟಿಗ, ಗೌಡ, ಕಾಪು, ಹೆಗ್ಗಡೆ, ಕಮ್ಮಾ, ರೆಡ್ಡಿ, ಗೌಡರ್, ನಾಮಧಾರಿಗೌಡ, ಉಪ್ಪಿನ ಕೊಳಗ / ಉತ್ತಮ ಕೊಳಗ ಒಕ್ಕಲಿಗ ಸಮುದಾಯದ ಜನರ ಆರ್ಥಿಕ ಅಭಿವೃದ್ಧಿಗಾಗಿ 2022–23ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಕೆಳಕಂಡ ಯೋಜನೆಗಳಲ್ಲಿ ಸೌಲಭ್ಯ ಪಡೆಯ ಬಯಸುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯೋಜನೆಗಳು ಮತ್ತು ಸೌಲಭ್ಯಗಳು:

1. **ಸ್ವಯಂ ಉದ್ಯೋಗ ಸಾಲ ಯೋಜನೆ:**
ಒಕ್ಕಲಿಗ ಸಮುದಾಯದವರು ಸ್ವಯಂ ಉದ್ಯೋಗಕ್ಕೆ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಚಟುವಟಿಕೆ ಅನುಸಾರ ಈ ಕೆಳಕಂಡಂತೆ ಸೌಲಭ್ಯ.
ಅ) ಘಟಕ ವೆಚ್ಚ ರೂ.50,000/– ಗಳಿಗೆ ಶೇ.30 ಗರಿಷ್ಠ ರೂ.10,000/– ಗಳ ಸಹಾಯಧನ ಉಳಿಕೆ ರೂ.40,000/– ಗಳನ್ನು ವಾರ್ಷಿಕ ಶೇ.4 ರ ಬಡ್ಡಿದರದಲ್ಲಿ ಸಾಲ.
ಆ) ಘಟಕ ವೆಚ್ಚ ರೂ.50,001/– ರಿಂದ ಗರಿಷ್ಠ ರೂ.1,00,000/– ವರೆಗೆ ಶೇ.20 ರಷ್ಟು ರೂ.20,000/– ಗಳ ಸಹಾಯಧನ, ಉಳಿಕೆ ಮೊತ್ತ ರೂ.80,000/– ಗಳನ್ನು ವಾರ್ಷಿಕ ಶೇ.4 ರ ಬಡ್ಡಿದರದಲ್ಲಿ ಸಾಲ.
ಇ) ಘಟಕ ವೆಚ್ಚ ರೂ.1,00,001/– ರಿಂದ ಗರಿಷ್ಠ ರೂ.2,00,000/– ವರೆಗೆ ಶೇ.15 ರಷ್ಟು ರೂ.20,000/– ರಿಂದ ರೂ.30,000/– ಗಳ ಸಹಾಯಧನ, ಉಳಿಕೆ ಮೊತ್ತ ರೂ.1,70,000/– ಗಳನ್ನು ವಾರ್ಷಿಕ ಶೇ.4 ರ ಬಡ್ಡಿದರದಲ್ಲಿ ಸಾಲ.
2. **ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ / ಸರಕು ಸಾಗಾಣಿಕೆ ವಾಹನ ಕೊಳ್ಳಲು ಸಹಾಯಧನ ಯೋಜನೆ:**
ಟೂರಿಸ್ಟ್ ಟ್ಯಾಕ್ಸಿ ಕೊಳ್ಳಲು ಬ್ಯಾಂಕುಗಳು ಮಂಜೂರು ಮಾಡುವ ಸಾಲದ ಮೊತ್ತದಲ್ಲಿ ಶೇ.50 ರಷ್ಟು ಗರಿಷ್ಠ ರೂ. 3,00,000/– ಲಕ್ಷದಂತೆ ನಿಗಮದಿಂದ ಸಹಾಯಧನ ಉಳಿಕೆ ಮೊತ್ತ ಬ್ಯಾಂಕ್ ಪಾಲಿನ ಸಾಲದ ಮೊತ್ತವಾಗಿರುತ್ತದೆ. ಸಾಲದ ಅಸಲು ಮತ್ತು ಬಡ್ಡಿಯನ್ನು ಬ್ಯಾಂಕ್ ನಿಗದಿಪಡಿಸಿದ ಕಂತುಗಳನ್ವಯ ಬ್ಯಾಂಕ್‌ಗೆ ಮರುಪಾವತಿಸಬೇಕು.
3. **ಗಂಗಾ ಕಲ್ಯಾಣಯೋಜನೆ:** ಒಕ್ಕಲಿಗ ಸಮುದಾಯಕ್ಕೆ ಸೇರಿದ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನುಗಳಿಗೆ ಈ ಕೆಳಕಂಡಂತೆ ನೀರಾವರಿ ಸೌಲಭ್ಯ.
- ವೈಯಕ್ತಿಕ ಕೊಳವೆ ಬಾವಿ ಯೋಜನೆ: ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು (ಗ್ರಾ), ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.4.00 ಲಕ್ಷಗಳಲ್ಲಿ ರೂ.3.50 ಲಕ್ಷಗಳ ಸಹಾಯಧನ ಉಳಿಕೆ ಮೊತ್ತ ರೂ.50,000/– ಶೇ.4 ಬಡ್ಡಿದರದಲ್ಲಿ ಸಾಲ. ಇತರೆ ಜಿಲ್ಲೆಗಳಿಗೆ ಘಟಕ ವೆಚ್ಚ ರೂ.2.00 ಲಕ್ಷಗಳಲ್ಲಿ ರೂ.1.50 ಲಕ್ಷ ಸಹಾಯಧನ ಉಳಿಕೆ ಮೊತ್ತ ರೂ.50,000/– ಶೇ.4 ಬಡ್ಡಿದರದಲ್ಲಿ ಸಾಲ. ಪ್ರತಿ ಕೊಳವೆ ಬಾವಿಗೆ ವಿದ್ಯುದ್ದೀಕರಣಕ್ಕೆ ರೂ.50,000/– ಗಳಂತೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಭರಿಸಲಾಗುವುದು.
- ಈ ಯೋಜನೆಯಲ್ಲಿ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ ಒಂದು ಎಕರೆ ಜಮೀನು ಹೊಂದಿರಬೇಕು. ಉಳಿಕೆ ಜಿಲ್ಲೆಗಳಲ್ಲಿ ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಇರುವ ಕನಿಷ್ಠ 2 ಎಕರೆ ಜಮೀನು ಇರಬೇಕು.
- ಸಾಮೂಹಿಕ ನೀರಾವರಿ ಯೋಜನೆ: ಒಕ್ಕಲಿಗ ಸಮುದಾಯಕ್ಕೆ ಸೇರಿದ ಕನಿಷ್ಠ ಮೂರು ಜನ ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ 8–15 ಎಕರೆ ಜಮೀನಿಗೆ ರೂ.4.00 ಲಕ್ಷಗಳ ವೆಚ್ಚದಲ್ಲಿ 02 ಕೊಳವೆ ಬಾವಿ ಮತ್ತು 15 ಎಕರೆಗಿಂತ ಹೆಚ್ಚಿನ ಜಮೀನಿಗೆ ರೂ.6.00 ಲಕ್ಷಗಳ ವೆಚ್ಚದಲ್ಲಿ 03 ಕೊಳವೆಬಾವಿಗಳ ಮೂಲಕ ನೀರಾವರಿ ಸೌಲಭ್ಯ. ಪ್ರತಿ ಕೊಳವೆ ಬಾವಿಗೆ ವಿದ್ಯುದ್ದೀಕರಣಕ್ಕೆ ರೂ.50,000/– ಗಳಂತೆ ಘಟಕ ವೆಚ್ಚದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಭರಿಸಲಾಗುವುದು.
- ಮಲೆನಾಡು ಪ್ರದೇಶಗಳಲ್ಲಿ ವೈಯಕ್ತಿಕ ಕೊಳವೆ ಬಾವಿ ವೆಚ್ಚದಲ್ಲಿ ತೆರೆದ ಬಾವಿಗಳ ಮೂಲಕ ನೀರಾವರಿ ಸೌಲಭ್ಯ.
- ಭೂಮಟ್ಟದಲ್ಲಿ ದೊರೆಯುವ ನದಿ ಮತ್ತು ಜಲಾಶಯಗಳ ನೀರಾವರಿ ಸಂಪನ್ಮೂಲಗಳಿಂದ ಸಾಮೂಹಿಕ ಯೋಜನಾ ಘಟಕ ವೆಚ್ಚದ ಮಿತಿಯಲ್ಲಿ ಪೈಪ್‌ಲೈನ್ ಮೂಲಕ ಏತ ನೀರಾವರಿಯ ಸೌಲಭ್ಯ.
4. **ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆ**
ಒಕ್ಕಲಿಗ ಸಮುದಾಯದ ಯುವಜನತೆಯನ್ನು ಕೌಶಲ್ಯ ಅಭಿವೃದ್ಧಿ ಪಡಿಸಿ ಉದ್ಯೋಗಮುಖಿಯನ್ನಾಗಿಸಲು ಸರ್ಕಾರದ ಸಂಸ್ಥೆಗಳಾದ ITI's, GTTC, KGTTI ರಲ್ಲಿ ಅಲ್ಪಾವಧಿ ಕೋರ್ಸುಗಳ ಮೂಲಕ ಕೌಶಲ್ಯ ತರಬೇತಿ ನೀಡಲು ಆನ್‌ಲೈನ್ ನಲ್ಲಿ ಕೌಶಲ್ಯ ಕರ್ನಾಟಕ ತಂತ್ರಾಂಶ https://www.kaushalkar.com ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದು. ಪೂರಕ ಮಾಹಿತಿ ಹಾಗೂ ಉಚಿತ ಅರ್ಜಿ ಸಲ್ಲಿಕೆ ಸೌಲಭ್ಯ ನಿಗಮದ ಅಧಿಕೃತ ಜಾಲತಾಣದಲ್ಲೂ ಲಭ್ಯವಿದೆ.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಇಚ್ಚಿಸುವ ಒಕ್ಕಲಿಗ ಸಮುದಾಯದ ಫಲಾಪೇಕ್ಷಿಗಳು ಯೋಜನೆಗಳ ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು ನಿಗಮದ ವೆಬ್‌ಸೈಟ್ **https://kvcdc.karnataka.gov.in** ನಲ್ಲಿ ವೀಕ್ಷಿಸಬಹುದಾಗಿರುತ್ತದೆ. ಅರ್ಜಿಯನ್ನು ನಿಗಮದ ವೆಬ್‌ಸೈಟ್‌ನಿಂದ ಡೌನ್‌ಲೋಡ್ (Download) ಮಾಡಿ ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ನಿಮ್ಮ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ) ದ ಕಛೇರಿಗೆ ಅರ್ಜಿಯನ್ನು ಕೊನೆಯ **ದಿನಾಂಕ: 18.08.2022 ರೊಳಗೆ** ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತದ ವೆಬ್‌ಸೈಟ್ https://kvcdc.karnataka.gov.in ನಲ್ಲಿ ಅಥವಾ ಕೇಂದ್ರ ಕಛೇರಿಯ ದೂರವಾಣಿ ಸಂಖ್ಯೆ: 080–29904268 ನ್ನು ಸಂಪರ್ಕಿಸುವುದು ಹಾಗೂ ನಿಮ್ಮ ಜಿಲ್ಲೆಯ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ) ದ ಕಛೇರಿಯನ್ನು ಸಂಪರ್ಕಿಸುವುದು.

ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/1405/2022–23

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸುಭಾಷಿತ

ತಾಳ್ಮೆಯಿಂದ ಕಾಯುತ್ತಿದ್ದರೆ ಖಂಡಿತ ಬೆಳಗಾಗಿಯೇ ಆಗುತ್ತದೆ.

-ಖಲೀಲ್ ಗಿಬ್ರಾನ್

ಆಹಾರ ಪದಾರ್ಥಕ್ಕೆ ತೆರಿಗೆ ಹೇರಿಕೆ ಸರಿಯಾದ ಕ್ರಮವಲ್ಲ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿ ಇದುವರೆಗೆ ತೆರಿಗೆ ವಿನಾಯಿತಿ ಪಡೆದಿದ್ದ ಕೆಲವು ಆಹಾರ ಪದಾರ್ಥಗಳು ಇನ್ನು ಮುಂದೆ ತೆರಿಗೆ ವ್ಯಾಪ್ತಿಗೆ ಬರಲಿವೆ. ಜೂನ್ ತಿಂಗಳ ಕೊನೆಯ ವಾರದಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಈ ಆಹಾರ ಪದಾರ್ಥಗಳನ್ನು ತೆರಿಗೆ ವ್ಯಾಪ್ತಿಗೆ ತರುವ ತೀರ್ಮಾನ ಕೈಗೊಳ್ಳಲಾಗಿದೆ. ತೀರ್ಮಾನಗಳು ಸೋಮವಾರದಿಂದ ಅನುಷ್ಠಾನಕ್ಕೆ ಬರಲಿವೆ. ಜಿಎಸ್‌ಟಿ ಅಡಿಯಲ್ಲಿ ಬ್ರ್ಯಾಂಡೆಡ್ ಆಹಾರ ಪದಾರ್ಥಗಳಿಗೆ ಮಾತ್ರ ಇದುವರೆಗೆ ತೆರಿಗೆ ವಿಧಿಸಲಾಗುತ್ತಿತ್ತು. ಬ್ರ್ಯಾಂಡೆಡ್ ಅಲ್ಲದ, ಪ್ಯಾಕ್ ಮಾಡಲಾಗಿರುವ, ಲೇಬಲ್ ಇರುವ ಆಹಾರ ಪದಾರ್ಥಗಳನ್ನು ತೆರಿಗೆ ವ್ಯಾಪ್ತಿಯಿಂದ ಹೊರಗೆ ಇರಿಸಲಾಗಿತ್ತು. ಇದರ ಹಿಂದೆ ತರ್ಕವೊಂದು ಇದ್ದಿರಬಹುದು. ಬ್ರ್ಯಾಂಡೆಡ್ ವಸ್ತುಗಳನ್ನು ಹೆಚ್ಚಾಗಿ ಖರೀದಿಸುವವರು ಹೆಚ್ಚಿನ ವರಮಾನವುಳ್ಳ ವರ್ಗಕ್ಕೆ ಸೇರಿದವರು; ಬ್ರ್ಯಾಂಡೆಡ್ ಅಲ್ಲದ ಹಾಗೂ ಸ್ಥಳೀಯ ತಯಾರಕರು ಸಿದ್ಧಪಡಿಸಿದ, ಪ್ಯಾಕ್ ಮಾಡಿರುವ ಆಹಾರ ಪದಾರ್ಥಗಳನ್ನು ಖರೀದಿಸುವವರು ಕಡಿಮೆ ವರಮಾನ ಉಳ್ಳವರು ಎಂಬ ಭಾವನೆ ಇದೆ. ಬ್ರ್ಯಾಂಡೆಡ್ ಆಹಾರ ಪದಾರ್ಥಗಳಿಗೆ ಮಾತ್ರ ಜಿಎಸ್‌ಟಿ ವಿಧಿಸಿರುವುದನ್ನು ಈ ತರ್ಕದ ಆಧಾರದಲ್ಲಿ ಸಮರ್ಥಿಸಿಕೊಳ್ಳಬಹುದು. ಆದರೆ, ಬ್ರ್ಯಾಂಡೆಡ್ ಅಲ್ಲದ, ಪ್ಯಾಕ್ ಮಾಡಿರುವ ಹಾಗೂ ಲೇಬಲ್ ಇರುವ ಆಹಾರ ಪದಾರ್ಥಗಳಿಗೆ ಶೇಕಡ 5ರಷ್ಟು ತೆರಿಗೆ ವಿಧಿಸುವ ಕ್ರಮಕ್ಕೆ ಇಂತಹ ಯಾವುದೇ ತರ್ಕದ ಸಮರ್ಥನೆ ಇಲ್ಲ. ಕಡಿಮೆ ವರಮಾನವುಳ್ಳ, ಬ್ರ್ಯಾಂಡೆಡ್ ಅಲ್ಲದ ಪದಾರ್ಥಗಳನ್ನು ಖರೀದಿಸುವ ವರ್ಗದ ಮೇಲೆ ಈ ತೆರಿಗೆ ಹೇರಿಕೆಯು ಹೊರೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಆಹಾರ ಪದಾರ್ಥಗಳ ಮೇಲಿನ ಹೊಸ ತೆರಿಗೆಯು ಹಣದುಬ್ಬರ ಹೆಚ್ಚಳಕ್ಕೆ ಇಂಬು ಕೊಡುವ ಸಾಧ್ಯತೆ ಇದೆ

ಪರೋಕ್ಷ ತೆರಿಗೆಗಳ ವಿಚಾರವಾಗಿ ಬಹುದೊಡ್ಡ ಟೀಕೆಯೊಂದು ಇದೆ. ಈ ತೆರಿಗೆಗಳು ಬಡವ ಯಾರು, ಶ್ರೀಮಂತ ಯಾರು ಎಂಬ ವ್ಯತ್ಯಾಸವನ್ನು ಗಮನಿಸುವುದಿಲ್ಲ. ಇದು ಪರೋಕ್ಷ ತೆರಿಗೆಗಳ ಮಿತಿಯೂ ಹೌದು. ಬಡವನಿಗೂ ಶ್ರೀಮಂತನಿಗೂ ಒಂದೇ ತೆರಿಗೆ ಎಂದು ಹೇಳುತ್ತದೆ. ಆಹಾರ ಧಾನ್ಯವನ್ನು ಕೊಳ್ಳುವವ ಬಡವನಾಗಿರಲೀ ಶ್ರೀಮಂತನಾಗಿರಲೀ ಆತ ಒಂದೇ ಪ್ರಮಾಣದಲ್ಲಿ ಪರೋಕ್ಷ ತೆರಿಗೆ ಪಾವತಿ ಮಾಡಬೇಕು. ಆದರೆ, ಇದುವರೆಗೆ ಬ್ರ್ಯಾಂಡೆಡ್ ಆಹಾರ ಪದಾರ್ಥಗಳಿಗೆ ಮಾತ್ರ ತೆರಿಗೆ ವಿಧಿಸಿ, ಬ್ರ್ಯಾಂಡೆಡ್ ಅಲ್ಲದ ಆಹಾರ ಪದಾರ್ಥಗಳನ್ನು ತೆರಿಗೆ ವ್ಯಾಪ್ತಿಯಿಂದ ಹೊರಗೆ ಇರಿಸುವ ಮೂಲಕ ಪರೋಕ್ಷ ತೆರಿಗೆ ವ್ಯವಸ್ಥೆಯ ಮಿತಿಯನ್ನು ಅಷ್ಟಿಷ್ಟಾದರೂ ಮೀರುವ ಯತ್ನವು ನಡೆದಿತ್ತು. ಅಂದರೆ, ಬ್ರ್ಯಾಂಡೆಡ್ ಆಹಾರ ಪದಾರ್ಥಗಳನ್ನು ಮಾತ್ರ ಖರೀದಿಸುವವರು ತೆರಿಗೆ ಪಾವತಿಸುತ್ತಿದ್ದರು. ಸ್ಥಳೀಯ ತಯಾರಕರ, ಬ್ರ್ಯಾಂಡೆಡ್ ಅಲ್ಲದ ಆಹಾರ ಪದಾರ್ಥಗಳನ್ನು ಮಾತ್ರ ಖರೀದಿಸುವ ಗ್ರಾಹಕರು ತೆರಿಗೆಯ ಹೊರೆ ಹೊತ್ತುಕೊಳ್ಳಬೇಕಿರಲಿಲ್ಲ. ಇನ್ನು ಮುಂದೆ ಈ ವ್ಯತ್ಯಾಸ ಮಾಯವಾಗಲಿದೆ. ಬಡವರೂ ಶ್ರೀಮಂತರೂ ತಾವು ಉಣ್ಣುವ ಆಹಾರ ಧಾನ್ಯಗಳಿಗೆ ಸಮಾನ ಪ್ರಮಾಣದಲ್ಲಿ ತೆರಿಗೆ ಪಾವತಿ ಮಾಡಬೇಕಾದ ಸಂದರ್ಭ ಎದುರಾಗಿದೆ. ಅಕ್ಕಿ, ಗೋಧಿ, ಮೊಸರು, ಮಜ್ಜಿಗೆ ಪೌಷ್ಟಿಕಾಂಶಗಳ ದೃಷ್ಟಿಯಿಂದ ಮಹತ್ವದವು. ಇವು ಎಲ್ಲ ವರ್ಗಗಳ ಜನರಿಗೂ ಅನಿವಾರ್ಯ. ಇವುಗಳ ಮೇಲಿನ ತೆರಿಗೆಯು ಗ್ರಾಹಕನಿಗೆ ಅನಗತ್ಯ ಹೊರೆ. ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ವರ್ಷದಿಂದ ವರ್ಷಕ್ಕೆ ವರಮಾನ ಸಂಗ್ರಹವು ಉತ್ತಮವಾಗುತ್ತಿರುವ ಹೊತ್ತಿನಲ್ಲಿ, ಇದುವರೆಗೆ ವಿನಾಯಿತಿ ಪಡೆದಿದ್ದ ಆಹಾರ ಧಾನ್ಯಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಅಗತ್ಯ ಇರಲಿಲ್ಲ.

ಜಿಎಸ್‌ಟಿ ಮಂಡಳಿಯ ಕ್ರಮಕ್ಕೆ ಸಹಜವಾಗಿಯೇ ವಿರೋಧ ವ್ಯಕ್ತವಾಗಿದೆ. ರಾಜ್ಯದಲ್ಲಿ ಅಕ್ಕಿ ಗಿರಣಿಗಳ ಸಂಘವು ಪ್ರತಿಭಟನೆ ದಾಖಲಿಸಿದೆ. ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿ ವರ್ತಕರ ಸಂಘಗಳು ಬಂದ್ ಆಚರಿಸಿ ವಿರೋಧ ದಾಖಲಿಸಿವೆ. ಆಹಾರ ಧಾನ್ಯಗಳ ಮೇಲೆ ತೆರಿಗೆ ವಿಧಿಸುವುದನ್ನು ಸದ್ಯದ ಮಟ್ಟಿಗಾದರೂ ಮುಂದಕ್ಕೆ ಹಾಕಬೇಕು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಈಚೆಗೆ ಒತ್ತಾಯ ಮಾಡಿತ್ತು. ಈ ಎಲ್ಲ ಆಗ್ರಹಗಳು ಹಾಗೂ ವಿರೋಧಗಳನ್ನು ಸರ್ಕಾರಗಳು ಗಮನಕ್ಕೆ ತೆಗೆದುಕೊಳ್ಳಬೇಕು. ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತ ಆರು ತಿಂಗಳುಗಳಿಂದ ಮಿತಿಯನ್ನು ಮೀರಿ ಬೆಳೆದಿದೆ. ಇದರಲ್ಲಿ ಆಹಾರ ಪದಾರ್ಥಗಳ ಹಣದುಬ್ಬರದ ಕೊಡುಗೆಯೂ ಇದೆ. ಪರಿಸ್ಥಿತಿ ಹೀಗಿರುವಾಗ, ಆಹಾರ ಧಾನ್ಯಗಳ ಮೇಲಿನ ಹೊಸ ತೆರಿಗೆಯು ಹಣದುಬ್ಬರ ಹೆಚ್ಚಳಕ್ಕೆ ಇಂಬು ಕೊಡುವ ಸಾಧ್ಯತೆ ಇದ್ದೇ ಇದೆ. ಹೀಗಾಗಿ, ಹಣದುಬ್ಬರವು ಸಂಪೂರ್ಣವಾಗಿ ನಿಯಂತ್ರಣಕ್ಕೆ ಬರುವವರೆಗಾದರೂ ಆಹಾರ ಪದಾರ್ಥಗಳನ್ನು ಸರ್ಕಾರಗಳು ತೆರಿಗೆ ವ್ಯಾಪ್ತಿಯಿಂದ ಹೊರಗೆ ಇರಿಸುವುದು ಯುಕ್ತ.

ದಿನದ ಟ್ವೀಟ್

ಮಾದರಿ ಅಭಿಯಾನ

ಆಂಧ್ರಪ್ರದೇಶ: ರಸ್ತೆಗುಂಡಿಗಳ ಫೋಟೊಗಳು, ವಿಡಿಯೊಗಳ ಮೂಲಕ ನಿಮ್ಮ ಪ್ರದೇಶದಲ್ಲಿನ ರಸ್ತೆಗಳ ಸ್ಥಿತಿಗತಿಯನ್ನು ಬಿಂಬಿಸುವ ಡಿಜಿಟಲ್ ಅಭಿಯಾನವನ್ನು ಪವನ್ ಕಲ್ಯಾಣ್ ಆರಂಭಿಸಿದ್ದಾರೆ. ಈ ಉಪಕ್ರಮವು ಇಡೀ ದೇಶವನ್ನು ತಲುಪಬೇಕು. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರಗಳು ಇಂತಹ ಅಭಿಯಾನವನ್ನು ಬೆಂಬಲಿಸಬೇಕು, ರಸ್ತೆಗಳನ್ನು ದುರಸ್ತಿಪಡಿಸಿ ಗುಂಡಿಗಳನ್ನು ಮುಚ್ಚಲು ಮುಂದಾಗಬೇಕು.

ಅನ್ಷುಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

ಕಿಡಿನುಡಿ

ಜಿಎಸ್‌ಟಿ ಮಂಡಳಿಯ ಸದಸ್ಯರು ಯಾವುದಾದರೂ ಅನ್ಯಗ್ರಹದಲ್ಲಿ ವಾಸಿಸುತ್ತಿದ್ದಾರೆಯೇ? ಅವರು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವೂ ವಾಸ್ತವದಿಂದ ದೂರವಿದ್ದು, ನಂಬಲು ಅಸಾಧ್ಯವಾಗುವಂತೆ ಇರುತ್ತದೆ.

ಸುಶೋವನ್ ಗುಪ್ತಾ, ನಾಗರಿಕ

25 ವರ್ಷಗಳ ಹಿಂದೆ

ಶುಕ್ರವಾರ, 18-7-1997

• **ರಾಷ್ಟ್ರಪತಿಯಾಗಿ ನಾರಾಯಣನ್ ಆಯ್ಕೆ**

ನವದೆಹಲಿ, ಜುಲೈ 17 (ಪಿಟಿಐ)– ದೇಶದ ಹನ್ನೊಂದನೇ ರಾಷ್ಟ್ರಪತಿಯಾಗಿ ಕೊಚೆರಿಲ್ ರಾಮನ್ ನಾರಾಯಣನ್ ಅವರು ನಿರೀಕ್ಷೆಯಂತೆ ಇಂದು ಭಾರಿ ಬಹುಮತದಿಂದ ಆಯ್ಕೆಯಾದರು. ಇದರಿಂದ ಸ್ವಾತಂತ್ರ್ಯೋತ್ಸವದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ದಲಿತ ನಾಯಕರೊಬ್ಬರು ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿದಂತಾಗಿದೆ.

ದೇಶದ ಅತ್ಯುನ್ನತ ಹುದ್ದೆಗೆ ನೇರಸ್ಪರ್ಧೆ ಏರ್ಪಟ್ಟಿದ್ದ ಚುನಾವಣೆಯಲ್ಲಿ ಕೆ.ಆರ್. ನಾರಾಯಣನ್ ಅವರು ಮಾಜಿ ಮುಖ್ಯ ಚುನಾವಣಾ ಕಮಿಷನರ್ ಟಿ.ಎನ್. ಶೇಷನ್ ಅವರ ವಿರುದ್ಧ 3,991 ಮತಗಳ ಭಾರಿ ಅಂತರದ ಜಯ ಸಾಧಿಸಿದರು. ನಾರಾಯಣನ್ ಅವರಿಗೆ 4,231 ಮತಗಳು ಬಂದವು. ಕೇವಲ 240 ಮತ ಗಳಿಸಿದ ಶೇಷನ್ ಠೇವಣಿ ಕಳೆದುಕೊಂಡರು.

• **ಪೂರ್ಣ ಕ್ಷಮಾದಾನಕ್ಕೆ ವೀರಪ್ಪನ್ ಬಿಗಿ ಪಟ್ಟು**

ಚೆನ್ನೈ, ಜುಲೈ 17– ಅರಣ್ಯ ಇಲಾಖೆಯ 9 ಮಂದಿ ಸಿಬ್ಬಂದಿಯನ್ನು ವಶದಲ್ಲಿರಿಸಿಕೊಂಡ ವೀರಪ್ಪನ್, ತನಗೆ ಸರ್ಕಾರ ಕ್ಷಮಾದಾನ ನೀಡುವ ಹಾಗೂ ಮತ್ತಿತರ ಬೇಡಿಕೆಗಳ ಕುರಿತು ಯಾವುದೇ ರಾಜಿ ಬಯಸದೆ ತನ್ನ ನಿಲುವಿಗೇ ಅಂಟಿಕೊಂಡಿದ್ದಾನೆ.

‘ನಕ್ಕೀರನ್’ ತಮಿಳು ಪತ್ರಿಕೆಯ ಸಂಪಾದಕ ಆರ್. ಗೋಪಾಲ್ ಅವರ ಪ್ರಕಾರ, ವೀರಪ್ಪನ್‌ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಗೋಪಾಲ್ ಅವರ ಮೂಲಕ ತಮಿಳುನಾಡು ಸರ್ಕಾರ ವೀರಪ್ಪನ್ ಜತೆ ಸಂಪರ್ಕಿಸಲು ಪ್ರಯತ್ನಿಸುತ್ತಿದೆ. ಕರ್ನಾಟಕ ಸರ್ಕಾರ ಕಳುಹಿಸಿದ ಕ್ಯಾಸೆಟ್‌ಗಳ ಧ್ವನಿಮುದ್ರಿತ ಸಂದೇಶವನ್ನು ತಮಿಳುನಾಡಿನ ಗೃಹಮಂತ್ರಿ ಆರ್. ಪೂರ್ಣಲಿಂಗಂ ಅವರು ಗೋಪಾಲ್ ಅವರಿಗೆ ಕೇಳಿಸಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 18-7-1972

• **ವರ್ಷಕ್ಕೆ 12,000 ರೂ. ಆದಾಯ ಮೀರಿದವರಿಗೆ ಭೂ ಒಡೆತನ ನಿಷೇಧ: ಸರ್ಕಾರದ ಪರಿಶೀಲನೆ**

ಬೆಂಗಳೂರು, ಜುಲೈ 17– ಕೃಷಿಕರಲ್ಲದವರಾಗಿದ್ದು, ವರ್ಷಕ್ಕೆ 12,000 ರೂ. ಅಥವಾ ಅದಕ್ಕಿಂತ ಹೆಚ್ಚಿನ ವರಮಾನ ಇರುವವರಿಗೆ ಜಮೀನು ಇರಕೂಡದೆಂಬ ಕೇಂದ್ರ ಭೂ ಸುಧಾರಣಾ ಸಮಿತಿಯ ಶಿಫಾರಸು ರಾಜ್ಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ವಿಧಾನ ಪರಿಷತ್ತಿನಲ್ಲಿ ಇಂದು ಶ್ರೀ ಎಂ.ವಿ. ವೆಂಕಟಪ್ಪ ಅವರ ಪ್ರಶ್ನೆಗೆ ಉತ್ತರಿಸಿದ ಕಂದಾಯ ಸಚಿವ ಎನ್. ಹುಚ್ಚಮಾಸ್ತಿ ಗೌಡ ಅವರು, ‘ಕೇಂದ್ರ ಸಮಿತಿಯ ಶಿಫಾರಸುಗಳಲ್ಲಿ ಭೂ ಸುಧಾರಣೆಗೆ ಸಂಬಂಧಿಸಿದಂತೆ ಕುಟುಂಬ ಎಂದರೆ ಗಂಡ, ಹೆಂಡತಿ ಮತ್ತು ಮೂರು ಮಂದಿ ಅಪ್ರಾಯಸ್ಥ ಮಕ್ಕಳು ಎಂದು ವಿವರಣೆ ನೀಡಲಾಗಿದೆ. ಅದಕ್ಕಿಂತ ಹೆಚ್ಚು ಜನ ಇದ್ದರೆ ಆ ಕುಟುಂಬಕ್ಕೆ ಭೂ ಮಿತಿಯ ಎರಡರಷ್ಟು ಜಮೀನನ್ನು ಒದಗಿಸಬಹುದೆಂದು ಸೂಚಿಸಲಾಗಿದೆ’ ಎಂದರು.

• **623 ಕೋಟಿ ರೂ.ಗಳ ವರ್ಷದ ವೆಚ್ಚಕ್ಕೆ ವಿಧಾನಸಭೆ ಸಮ್ಮತಿ**

ಬೆಂಗಳೂರು, ಜುಲೈ 17– ಮೂರು ವಾರಗಳ ಚರ್ಚೆಯ ನಂತರ, ಸುಮಾರು 623 ಕೋಟಿ ರೂ.ಗಳ ವರ್ಷದ ವೆಚ್ಚಕ್ಕೆ ವಿಧಾನಸಭೆ ಇಂದು ಸರ್ಕಾರಕ್ಕೆ ಸಮ್ಮತಿ ನೀಡಿತು.

ಹಣ ವಿನಿಯೋಗ ವಿಧೇಯಕದ ಮೇಲೆ ನಡೆದ ಚರ್ಚೆಗೆ ಉತ್ತರ ನೀಡಿದ ಅರ್ಥ ಸಚಿವ ಶ್ರೀ ಎಂ.ವೈ. ಘೋರ್ಪಡೆ ಅವರು, ‘ಜನಕಲ್ಯಾಣದ ಶುದ್ಧ ಆರ್ಥಿಕ ದೃಷ್ಟಿಯಿಂದ ಹಣ ವಿನಿಯೋಗವಾಗುವುದು’ ಎಂದು ಭರವಸೆ ನೀಡಿದರು.

ಸುಲಭವಾಗಿ ಬಗೆಹರಿಸಲಾಗದ ಬಿಕ್ಕಟ್ಟಿನಲ್ಲಿರುವ ಶ್ರೀಲಂಕಾ ಯಾರ ದಾಳವಾಗಬಹುದು?

ನೆರೆಮನೆಯ ಕಿಚ್ಚಿನ ಪಾಠಗಳು

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಹಿಂದೂ ಮಹಾಸಾಗರದಲ್ಲಿ ಜನರ ಬಂಡಾಯದ ಬೆಂಕಿ ಹತ್ತಿಕೊಂಡಿದೆ. ರಾಜಪಕ್ಸ ಕುಟುಂಬದ ಆಡುಂಬೊಲವಾಗಿದ್ದ ಶ್ರೀಲಂಕಾದ ಅಧ್ಯಕ್ಷ ಭವನ ಹೊಕ್ಕ ಪ್ರತಿಭಟನಕಾರರು ಭವನದ ಕೊಳದಲ್ಲಿ ಈಜಾಡಿದ್ದಾರೆ. ಅಧ್ಯಕ್ಷ ಪೀಠದಲ್ಲಿ ಕೂತು ಫೋಟೊ ತೆಗೆಸಿಕೊಂಡಿದ್ದಾರೆ. ದೇಶದಿಂದಲೇ ಪಲಾಯನ ಮಾಡಿ ಮಾಲ್ದೀವ್ಸ್, ಸಿಂಗಪುರ ಅಲೆದ ಅಧ್ಯಕ್ಷ ಗೊಟಬಯ ರಾಜಪಕ್ಸ ಕೊನೆಗೂ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಲೇಬೇಕಾಯಿತು. ಈಚಿನ ತಿಂಗಳುಗಳ ಶ್ರೀಲಂಕಾದ ಸ್ಫೋಟದ ಈ ಚಿತ್ರಗಳು ಎಲ್ಲರ ಕಣ್ಣೆದುರಿಗಿವೆ.

ದೂರದೃಷ್ಟಿ ಇಲ್ಲದ ನೀತಿಗಳ ಪರಿಣಾಮವಾಗಿ ಅರ್ಥವ್ಯವಸ್ಥೆ ಕುಂಟತೊಡಗಿತ್ತು. ನಂತರ ಕೊರೊನಾ ತಂದ ಆರ್ಥಿಕ ಸ್ಥಗಿತವು ಜನರು ತತ್ತರಿಸುವಂತೆ ಮಾಡಿತ್ತು. ಕಳೆದ ಜನವರಿ- ಜೂನ್ ನಡುವೆಯಂತೂ ಅಗತ್ಯ ವಸ್ತುಗಳ ಬೆಲೆಗಳು ಶೇಕಡ ಐವತ್ತಕ್ಕಿಂತಲೂ ಮೇಲೇರಿದವು. ವಿದ್ಯುತ್ ವ್ಯತ್ಯಯದಿಂದ ಉದ್ಯಮಗಳು ನರಳುತ್ತಿದ್ದವು. ಚೀನಾದ ಸರ್ಕಾರಿ ಸ್ವಾಮ್ಯದ ಬ್ಯಾಂಕಿನ ಸಾಲ ತೀರಿಸಲಾಗದೆ ಹಂಬನ್‌ತೋಟ ಬಂದರನ್ನೇ 2018ರಲ್ಲಿ ಚೀನಾಕ್ಕೆ 99 ವರ್ಷಗಳ ಅವಧಿಗೆ ಗುತ್ತಿಗೆಗೆ ಕೊಟ್ಟಿದ್ದ ಲಂಕಾ ಸರ್ಕಾರವು ವಿದೇಶಿ ಸಾಲಗಳ ಬಡ್ಡಿಯನ್ನೂ ಕಟ್ಟಲಾಗದ ಸ್ಥಿತಿ ತಲುಪಿತ್ತು. ಆಳುವವರ ತಾಳಕ್ಕೆ ಕುಣಿಯುವ ಗುಲಾಮ ಆರ್ಥಿಕ ತಜ್ಞರೂ ಈ ಬಿಕ್ಕಟ್ಟಿಗೆ ಅಳಿಲುಸೇವೆ ಸಲ್ಲಿಸಿದ್ದರು!

ದೇಶದ ಕೇಂದ್ರೀಯ ಬ್ಯಾಂಕಿನ ವಹಿವಾಟಿನಲ್ಲಿ ಮತಿಗೆಟ್ಟ ಸರ್ಕಾರಗಳು ಕೈಯಾಡಿಸಿದರೆ ಏನಾಗುತ್ತದೆ ಎಂಬುದಕ್ಕೆ ಶ್ರೀಲಂಕಾ ಉದಾಹರಣೆಯಂತಿದೆ. ಕೊರೊನಾ ಕಾಲದಲ್ಲಿ ಪ್ರವಾಸೋದ್ಯಮಕ್ಕೆ ಬಿದ್ದ ಹೊಡೆತವೂ ಸೇರಿ ಶ್ರೀಲಂಕಾದ ಆರ್ಥಿಕತೆ ಪೂರಾ ಕುಸಿದೇಹೋಯಿತು. ಒಂದು ಕಾಲಕ್ಕೆ ಭಾರತಕ್ಕಿಂತ ಕಡಿಮೆ ಬೆಲೆಯಲ್ಲಿ ಪೆಟ್ರೋಲ್ ಮಾರುತ್ತಿದ್ದ ಶ್ರೀಲಂಕಾದಲ್ಲಿ ಬಂಕುಗಳ ಎದುರು ವಾಹನಗಳು ದಿನಗಟ್ಟಲೆ ಕ್ಯೂ ನಿಂತಿವೆ. ಟ್ಯಾಕ್ಸಿಯಿಂದಲೇ ಬದುಕು ನಡೆಸುವ ಡ್ರೈವರ್‌ನೊಬ್ಬ ಮೂರು ದಿನ ವ್ಯಾನಿನಲ್ಲೇ ಕೂತಿದ್ದಾನೆ. ಕಚೇರಿಗಳಲ್ಲಿ ವಾರಕ್ಕೆ ನಾಲ್ಕು ದಿನದ ಕೆಲಸ ಘೋಷಿಸಲಾಯಿತು. ಬಡಜನರನ್ನಂತೂ ಕೇಳುವವರೇ ಇರಲಿಲ್ಲ. ಇದೆಲ್ಲದರಿಂದ ರೋಸಿದ ಜನರ ಪ್ರತಿಭಟನೆ ದೇಶದೆಲ್ಲೆಡೆ ಹಬ್ಬತೊಡಗಿತು.

ಮಾನವ ಸಂಪನ್ಮೂಲವನ್ನು ಸಮೃದ್ಧವಾಗಿ ತೊಡಗಿಸಿದ್ದ ಶ್ರೀಲಂಕಾ ಈಚಿನ ದಶಕದಲ್ಲಿ ಸೇತುವೆ, ರಸ್ತೆಗಳನ್ನು ಕಟ್ಟಲು ಕೂಡ ಚೀನಾವನ್ನು ಅವಲಂಬಿಸಲಾರಂಭಿಸಿತ್ತು. ದಯನೀಯ ಸ್ಥಿತಿಯಲ್ಲಿದ್ದ ದೇಶದಲ್ಲಿ ಹುಸಿಗರ್ವದ ಮೂಲಕ ವಾಸ್ತವಸ್ಥಿತಿಯನ್ನು ಮರೆಮಾಚುವ ಕೆಲಸ ಶುರುವಾಯಿತು. ಮಹಿಂದ ರಾಜಪಕ್ಸ ಮೊದಲು ಅಧ್ಯಕ್ಷರಾದಾಗ, ಹಿಂದೊಮ್ಮೆ ಶ್ರೀಲಂಕಾದ ಮಿಲಿಟರಿ ಅಧಿಕಾರಿಯಾಗಿದ್ದ ಸಹೋದರ ಗೊಟಬಯ ರಾಜಪಕ್ಸ ಅವರನ್ನು ರಕ್ಷಣಾ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು. ನಿರ್ದಯಿಯಾದ ಗೊಟಬಯ 2009ರಲ್ಲಿ ತಮಿಳು ವಿಮೋಚನಾ ಪಡೆಯ ಹೋರಾಟವನ್ನು ಕ್ರೂರವಾಗಿ ಹತ್ತಿಕ್ಕಿದ್ದರಿಂದ ಮಹಿಂದ ರಾಜಪಕ್ಸ ‘ತಮಿಳರ ಭಯೋತ್ಪಾದನೆಯಿಂದ ದೇಶವನ್ನು ಪಾರು ಮಾಡಿದ ಹೀರೊ’ ಆದರು; ‘ಚಕ್ರವರ್ತಿ ಮಹೇಂದ್ರ’ ಅನ್ನಿಸಿಕೊಂಡರು.

ನಡುನಡುವೆ ಕೈತಪ್ಪಿದ ಅಧಿಕಾರ ಮತ್ತೆ ರಾಜಪಕ್ಸ ಕುಟುಂಬಕ್ಕೇ ಬಂತು. 2019ರಲ್ಲಿ ಕ್ರೈಸ್ತರ ‘ಈಸ್ಟರ್ ಡೇ’ ದಿನ ಇಸ್ಲಾಮಿಕ್ ಗುಂಪೊಂದು ಚರ್ಚಿನ ಮೇಲೆ ಬಾಂಬ್ ದಾಳಿ ನಡೆಸಿತು. ಮುಂದಿನ ಚುನಾವಣೆಯಲ್ಲಿ ಈ ಅಂಶವನ್ನೇ ಬಂಡವಾಳವಾಗಿಸಿಕೊಂಡು ಗೆದ್ದ ಮಹಿಂದ ಪ್ರಧಾನಿಯಾದರು; ಸಹೋದರ ಗೊಟಬಯ ಶ್ರೀಲಂಕಾದ ಅಧ್ಯಕ್ಷರಾದರು. ‘ಬರೀ ಸಿಂಹಳೀಯರ ವೋಟಿನ ಬಲದಿಂದಲೇ ರಾಷ್ಟ್ರಾಧ್ಯಕ್ಷನಾದೆ’ ಎಂದು ಘೋಷಿಸಿಬಿಟ್ಟರು. ಶ್ರೀಲಂಕಾದಲ್ಲಿ ಒಳಗೊಳಗೇ ಇದ್ದ ಜನಾಂಗೀಯ ತಿಕ್ಕಾಟವನ್ನು ಹೆಚ್ಚಿಸುವ ಮಾತು, ಕ್ರಿಯೆ ಶುರು ಮಾಡಿದರು. ಇದರಿಂದಾಗಿ ಲಂಕಾದ ತಮಿಳರನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿಸಿ, ತಮಿಳರ ವಿರುದ್ಧ ಸಿಂಹಳೀಯರಲ್ಲಿ ಪೂರ್ವಗ್ರಹ ಹೆಚ್ಚಿಸುವ ಪ್ರಯತ್ನಗಳು ಶುರುವಾದವು. ಚರ್ಚ್ ದಾಳಿಯ ನಂತರ ಮುಸ್ಲಿಮರನ್ನೂ ಶತ್ರುಗಳನ್ನಾಗಿಸಿ, ಒಡೆದು ಆಳುವ ಕೆಲಸ ಮತ್ತಷ್ಟು ಮುಂದುವರಿಯಿತು.

ಯಾರು, ಯಾರ ಹೆಸರಿನಲ್ಲಿ, ಯಾವ ಕಾರಣಗಳಿಗೆ, ಯಾವಾಗ ಭಯೋತ್ಪಾದನೆ ಸೃಷ್ಟಿಸುತ್ತಾರೆ... ಇವೆಲ್ಲ ಆಳುವ ವರ್ಗಗಳ ನಿಗೂಢ ನಡೆಗಳು! ಒಂದೆಡೆ, ಅಧಿಕಾರ ಉಳಿಸಿಕೊಳ್ಳಲು ತಮಿಳರು, ಮುಸ್ಲಿಮರ ವಿರುದ್ಧ ಅಪಪ್ರಚಾರ; ಮತ್ತೊಂದೆಡೆ ಅಧಿಕಾರ ಕೇಂದ್ರೀಕರಿಸಿಕೊಳ್ಳಲು ರಾಜಪಕ್ಸ ಕುಟುಂಬ ರಾಜಕಾರಣ! ಇದಕ್ಕೆ ತಕ್ಕಂತೆ ಎತ್ತ ಬೇಕಾದರತ್ತ ತಿರುಗಬಲ್ಲ ಭ್ರಷ್ಟರು, ದಲ್ಲಾಳಿಗಳು ಪಾರ್ಲಿಮೆಂಟ್ ಪ್ರವೇಶಿಸತೊಡಗಿದರು. ಭಾರತದಿಂದ ಅಷ್ಟಿಷ್ಟು ಕಲಿತಿದ್ದ ಪಂಚಾಯತ್ ರಾಜ್ ವಿಕೇಂದ್ರೀಕರಣದ ರಾಜಕೀಯವೂ ಮಾಯವಾಯಿತು.

ರಾಜಪಕ್ಸ ಕುಟುಂಬದ ಈಚಿನ ವರ್ಷಗಳ ರಾಜಕೀಯ ವಂಶವೃಕ್ಷ ನೋಡಿ: ಮಹಿಂದ ರಾಜಪಕ್ಸ, ಪ್ರಧಾನಿ. ತಮ್ಮ ಗೊಟಬಯ ರಾಜಪಕ್ಸ, ರಾಷ್ಟ್ರಾಧ್ಯಕ್ಷ. ಮತ್ತೊಬ್ಬ ತಮ್ಮ ಚಮಲ್, ನೀರಾವರಿ ಸಚಿವ. ಮಗದೊಬ್ಬ ತಮ್ಮ ಬೇಸಿಲ್, ಹಣಕಾಸು ಸಚಿವ. ಮಹಿಂದ ಅವರ ಮಗ ನಮಲ್, ಕ್ರೀಡಾ-ಯುವಜನ ಖಾತೆ ಸಚಿವ. ಮತ್ತೊಬ್ಬ ಮಗ ಯೋಶಿತಾ, ಪ್ರಧಾನಮಂತ್ರಿ ಕಾರ್ಯಾಲಯದ ಸಿಬ್ಬಂದಿಯ ಮುಖ್ಯಾಧಿಕಾರಿ. ಚಮಲ್ ಅವರ ಮಗ ಶಶೀಂದ್ರ, ಕೃಷಿ ಇಲಾಖೆ ರಾಜ್ಯ ಸಚಿವ. ಮಹಿಂದ ಅವರ ಭಾವ ನಿಶಾಂತ ವಿಕ್ರಮಸಿಂಘೆ ಶ್ರೀಲಂಕಾ ಏರ್‌ಲೈನ್ಸ್ ಅಧ್ಯಕ್ಷ! ಇಂಥ ಸ್ವಚ್ಛಂದ ಸ್ವಜನಪಕ್ಷಪಾತದ ಚಕ್ರವರ್ತಿ ಮಹಿಂದ, ಜನರ ಕಣ್ಣಲ್ಲಿ ಖಳನಾಯಕನಾಗಿದ್ದು ಸಹಜವಾಗಿತ್ತು.

2014ರಲ್ಲಿ ಪ್ರಧಾನಿ ಮಹಿಂದ ತಮ್ಮ ತಂದೆ ತಾಯಿಯನ್ನು ಅಮರರನ್ನಾಗಿಸಲು ಮ್ಯೂಸಿಯಂ ನಿರ್ಮಿಸಿದರು. ಇದಕ್ಕೆ ಬಳಕೆಯಾದದ್ದು ಆರು ಕೋಟಿ ರೂಪಾಯಿ ಸರ್ಕಾರಿ ಹಣ! ರಕ್ಷಣಾ ಕಾರ್ಯದರ್ಶಿಯಾಗಿದ್ದ ಗೊಟಬಯ, ನೌಕಾಪಡೆಯನ್ನೇ ಈ ಕೆಲಸಕ್ಕೆ ಬಳಸಿಕೊಂಡರು. ಇವೆಲ್ಲ ಜನರ ತಲೆಯಲ್ಲಿ ಎಂಥ ರೊಚ್ಚು ಹುಟ್ಟಿಸುತ್ತವೆಂಬುದು ಗೊತ್ತಾದದ್ದು ಪ್ರತಿಭಟನಕಾರರು ಈ ಮ್ಯೂಸಿಯಂ ಧ್ವಂಸ ಮಾಡಿದಾಗಲೇ. ಬದುಕಿರುವಾಗಲೇ ತಂತಮ್ಮ ಹೆಸರಿನಲ್ಲಿ ಬಸ್ ನಿಲ್ದಾಣ, ರಸ್ತೆ, ಕಟ್ಟಡಗಳನ್ನು ಉದ್ಘಾಟಿಸಿಕೊಳ್ಳುವ ನಿರ್ಲಜ್ಜರಿಗೆ ಜನರ ಇಂಥ ಅಸಹ್ಯದ ಅರಿವಿರಲಾರದು!

ಶ್ರೀಲಂಕಾದ ಜೀವನ್ಮರಣದ ಬಿಕ್ಕಟ್ಟಿಗೆ ವಂಶಾಡಳಿತ, ಆರ್ಥಿಕತೆಯ ಜೊತೆಗೇ ಬಹುಸಂಖ್ಯಾತರನ್ನು ರೈಲು ಹತ್ತಿಸುವ ರಾಜಕಾರಣ ತಂದೊಡ್ಡುವ ದುರಂತವೂ ಕಾರಣವಾಗಿದೆ. ಇಂಥ ಬಹುಸಂಖ್ಯಾತತ್ವದ ಅಹಂಕಾರದ ಅಪಾಯವನ್ನು ಭಾರತವೂ ಅರಿಯಬೇಕು. ವಿಭಜಕ ನಾಯಕರಿಗೆ ಈ ಅಪಾಯ ಅರ್ಥವಾಗದಿದ್ದರೂ ಒಡಕಿನ ಬಿಸಿ ತಾಗುವ ಜನರಿಗಾದರೂ ಇದು ಅರ್ಥವಾಗಬೇಕು. ರಾಜಪಕ್ಸ ನೇತೃತ್ವದ ಸರ್ಕಾರವು ತಮಿಳರು, ಮುಸ್ಲಿಮರ ಬಗೆಗಿನ ಪೂರ್ವಗ್ರಹವನ್ನೇ ಬಂಡವಾಳವಾಗಿಸಿಕೊಂಡು ಆಳುತ್ತಿದ್ದುದರ ಅಪಾಯ ಸಿಂಹಳೀಯರಿಗೆ ಕೊನೆಗೂ ಅರ್ಥವಾಗಿದೆ. ಈಗಿನ ಪ್ರತಿಭಟನೆಯನ್ನು ಅಲ್ಪಸಂಖ್ಯಾತರ ತಲೆಗೆ ಕಟ್ಟಲೆತ್ನಿಸಿದ ಸರ್ಕಾರಿ ಚೇಲಾಗಳ ಸುಳ್ಳುಗಳನ್ನು ಸಿಂಹಳೀಯರೂ ಅರಿತರು. ಪ್ರತಿಭಟನೆಗಳಲ್ಲಿ ಕಾಣುತ್ತಿದ್ದ ‘ಗೊಟಾ ಗೋ ಹೋಮ್’ ಪ್ಲೆಕಾರ್ಡುಗಳು ಯಾವುದೋ ಒಂದು ಧರ್ಮದ ಗುಂಪಿನ ಪ್ರತಿಕ್ರಿಯೆಗಳಾಗಿರಲಿಲ್ಲ.

ಪ್ರತಿಭಟನೆಯೊಂದರಲ್ಲಿ ಬೌದ್ಧ ಧರ್ಮಗುರುವೊಬ್ಬ ಹೇಳಿದ: ‘ಇಲ್ಲಿ ಕ್ಯಾಥೊಲಿಕ್ ಕ್ರಿಶ್ಚಿಯನ್ನರಿದ್ದಾರೆ, ಹಿಂದೂ ತಮಿಳರಿದ್ದಾರೆ, ಮುಸ್ಲಿಮರಿದ್ದಾರೆ, ಬೌದ್ಧರಿದ್ದಾರೆ. ಇದು ನಿಜವಾದ ಶ್ರೀಲಂಕಾ’. ತಮ್ಮ ದೋಷಗಳನ್ನು ಮುಚ್ಚಿಡಲು ಅಲ್ಪಸಂಖ್ಯಾತ ಗುಮ್ಮನನ್ನು ಎಬ್ಬಿಸುವ ಸರ್ಕಾರಿ ಕುಟಿಲ ನಡೆ ಎಲ್ಲೆಡೆಯೂ ನಡೆಯುತ್ತಿರುತ್ತದೆ. ‘ಎಲ್ಲಿ ಅಲ್ಪಸಂಖ್ಯಾತರು ನೆಮ್ಮದಿಯಿಂದ ಇರುತ್ತಾರೋ ಆ ದೇಶ ನೆಮ್ಮದಿಯಿಂದ ಇರುತ್ತದೆ’ ಎಂಬ ಗಾಂಧೀಜಿಯ ಮಾತು ಶ್ರೀಲಂಕಾದ ಜನರಿಗೆ ಈಚೆಗೆ ಅರ್ಥವಾಗತೊಡಗಿದೆ. ಅಲ್ಲಿನ ನ್ಯಾಯಾಂಗ ಕೂಡ ಈ ಬಿಕ್ಕಟ್ಟಿನಲ್ಲಿ ದೃಢವಾಗಿ ನಿಂತಿದೆ.

ಗೊಟಬಯ ರಾಜೀನಾಮೆಯ ನಂತರ ಹೊಸ ಸರ್ಕಾರ ರಚನೆಯ ಸಿದ್ಧತೆ ಶುರುವಾಗಿದೆ, ಆದರೆ ಪಾರ್ಲಿಮೆಂಟಿನಲ್ಲಿ ಗೊಟಬಯ ಪ್ರತಿನಿಧಿಸುವ ‘ಶ್ರೀಲಂಕಾ ಪೊದುಜನ ಪೆರಮುನ’ ಪಕ್ಷದ ಸದಸ್ಯರ ಸಂಖ್ಯೆಯೇ ಹೆಚ್ಚು. ತನ್ನ ತಪ್ಪುಗಳನ್ನು ಮುಚ್ಚಿಹಾಕಲು ರಾಜಪಕ್ಸ ಕುಟುಂಬ ಹಿಂಬಾಗಿಲ ಆಡಳಿತಕ್ಕೆ ರೆಡಿಯಾಗಲೂಬಹುದು. ಆದರೆ ಯಾವ ಸರ್ಕಾರವೂ ಸುಲಭವಾಗಿ ಬಗೆಹರಿಸಲಾರದ ಬಿಕ್ಕಟ್ಟಿನಲ್ಲಿರುವ ಶ್ರೀಲಂಕಾ, ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಯಾರ ದಾಳವಾಗುತ್ತದೆ, ಎಂಥ ಆರ್ಥಿಕ ದಾಸ್ಯಕ್ಕೆ ಈಡಾಗುತ್ತದೆ ಎಂಬುದು ಭಾರತಕ್ಕೆ ನಿಜಕ್ಕೂ ಸವಾಲಾಗಬಲ್ಲ ಪ್ರಶ್ನೆ.

ಚುರುಮುರಿ



ಚುರುಮುರಿಗೂ ಬರೆ!

• ಸುಮಂಗಲಾ

‘ನನ್ ಜೊತಿಗಿ ಮಾತಾಡಿದ್ದೆಲ್ಲ ಬರೆದು ಎಲ್ಲಿಗಿ ಕಳಿಸ್ತೀ’ ಬೆಕ್ಕಣ್ಣ ಇದ್ದಕ್ಕಿದ್ದಂತೆ ಭಾರಿ ಕುತೂಹಲದಿಂದ ಕೇಳಿತು.

‘ಚುರುಮುರಿಗೆ ಕಣಲೇ... ನಿನಗ ಭಯಂಕರ ಅಭಿಮಾನಿಗಳು ಅದಾರ’ ಅಗದಿ ಹೆಮ್ಮೆಯಿಂದಲೇ ಹೇಳಿದೆ.

‘ಅಂಕಣದ ಹೆಸ್ರು ಬದಲು ಮಾಡ್ರಿ ಅಂತ ಸಂಪಾದಕರಿಗೆ ಹೇಳು. ಮಂಡಕ್ಕಿಗೂ ಶೇಕಡ 5 ಜಿಎಸ್‌ಟಿ ಹಾಕ್ಯಾರಂತ. ಅಂದ್ರ ಚುರುಮುರಿಗೂ ಅಷ್ಟೇ ಜಿಎಸ್‌ಟಿ... ನಿನ್ ಅಂಕಣಕ್ಕೆ ಕೊಡೂ ಕಾಸಿನ ಮ್ಯಾಲೂ ಜಿಎಸ್‌ಟಿ ಹೊಡೆತ ಬೀಳತೈತಿ’ ಬೆಕ್ಕಣ್ಣ ಗಂಭೀರವಾಗಿ ವಿವರಿಸಿತು.

‘ಹೆಹ್ಹೆ... ಅದು ತಿನ್ನೂ ಮಂಡಕ್ಕಿ ಮ್ಯಾಗೆ ಹಾಕಿರೂ ಜಿಎಸ್‌ಟಿ, ಓದೋ ಚುರುಮುರಿಗೆ ಅಲ್ಲಲೇ. ಮಂಡಕ್ಕಿ ಮ್ಯಾಗಿನ ಜಿಎಸ್‌ಟಿ ಹೊಡೆತ ಬೀಳೂದು ಭಟ್ಟಿ ಮಾಲೀಕರು ಮತ್ತ ಅದ್ರಾಗೆ ದುಡಿಯೋವ್ರ ಮ್ಯಾಗೆ. ಮಂಡಕ್ಕಿ ಅಷ್ಟೇ ಅಲ್ಲಲೇ, ಅಕ್ಕಿ, ಗೋಧಿ, ಸಿರಿಧಾನ್ಯ, ಹಿಟ್ಟು ಎಲ್ಲಾದರ ಮ್ಯಾಗೂ ಜಿಎಸ್‌ಟಿ ಬರೆ ಹಾಕ್ಯಾರ. ಜನಸಾಮಾನ್ಯರು ಊಟ ಮಾಡೂದ ಬಿಡಬೇಕಾಗತೈತಿ ಅಂತ ನಿಮ್ ನಿರ್ಮಲಕ್ಕಂಗೆ ಹೇಳಲೇ’ ಎಂದೆ.

ನಿರ್ಮಲಕ್ಕನ ಹೆಸರು ತೆಗೆಯುತ್ತಿದ್ದಂತೆ ‘ಎಲ್ಲಾ ತುಟ್ಟಿಯಾಗ್ಯಾವು ಅಂತ ಒಂದ್ ಹೊತ್ತು ಊಟ ಕಡಿಮೆ ಮಾಡಿದ್ರ ಆರೋಗ್ಯಕ್ಕೆ ವಳ್ಳೇದೆ ಬಿಡು’ ಉಡಾಫೆಯಿಂದ ಹೇಳಿದ ಬೆಕ್ಕಣ್ಣ ಕೂತು ಏನೋ ಬರೆಯತೊಡಗಿತು.

‘ಅಸಂಸದೀಯ ಪದಗಳ ಪಟ್ಟಿಗೆ ಒಂದಿಷ್ಟ್ ಪದ ಸೇರಿಸ್ಯಾರಲ್ಲ, ಅವುಗಳ ಬದ್ಲಿಗೆ ಬಳಸೂವಂತಹ ಪದಗಳನ್ನು ನಾನೇ ಕಂಡ್ಹಿಡಿದು ಹೊಸಾ ಪದಕೋಶ ತಯಾರು ಮಾಡಾಕೆ ಹತ್ತೀನಿ. ದುಡ್ಡಿಲ್ಲ ಅಂತೀಯಲ್ಲ, ಇದನ್ನ ಪ್ರಕಟಣೆ ಮಾಡಿ ರೊಕ್ಕ ಮಾಡಿಕೋ’ ಎಂದು ಕೆಲವು ಪದಗಳನ್ನು ಓದಿತು. ‘ಕರಪ್ಟ್ ಬದಲಿಗೆ ಪರ್ಸೆಂಟೇಜ್, ಡಾಂಕಿ ಬದಲಿಗೆ ಸಂಸ್ಕೃತದ ಗಾರ್ದಭ, ಲೈ ಬದಲಿಗೆ ಅನೃತ, ಕ್ರೊಕಡೈಲ್ ಬದಲಿಗೆ ಮಕರ, ಟಿಯರ್ಸ್ ಬದಲಿಗೆ ಅಶ್ರು... ಸಂಸ್ಕೃತ ದೇವಭಾಷೆ, ಹಿಂಗಾಗಿ ಸಂಸ್ಕೃತ ಪದಗಳು ಅಸಂಸದೀಯ ಆಗಂಗಿಲ್ಲ, ಬ್ಯಾನೂ ಮಾಡಂಗಿಲ್ಲ’ ಎಂದು ಸಂಸ್ಕೃತ ಪದಗಳ ಉದ್ದ-ಪಟ್ಟಿಯನ್ನೇ ಮುಂದಿಟ್ಟಿತು!

ಸಂಗತ

ಅಧಿಕಾರ ರಾಜಕಾರಣ ಮತ್ತು ಭಾಷಾ ಸೌಜನ್ಯ

ಸಾರ್ವಜನಿಕ ಬದುಕಿನಲ್ಲಿ ಎರಡು– ಮೂರು ದಶಕಗಳಿಂದ ನಾವು ಆಲಿಸುತ್ತಿರುವ ರಾಜಕೀಯ ಪರಿಭಾಷೆಯನ್ನು ಮರುಪರಿಷ್ಕರಣೆಗೆ ಒಳಪಡಿಸಬೇಕಿದೆ

• ನಾ.ದಿವಾಕರ

ಲೋಕಸಭಾ ಕಾರ್ಯಾಲಯವು ‘ಅಸಂಸದೀಯ ಅಭಿವ್ಯಕ್ತಿ’ಗಳಿಗೆ ಸಂಬಂಧಿಸಿದಂತೆ ಹೊಸದಾಗಿ ಈಚೆಗೆ ರೂಪಿಸಿರುವ ಕಿರು ಹೊತ್ತಗೆಯು ವಿವಾದ ಸೃಷ್ಟಿಸಿದೆ. ಈ ಪಟ್ಟಿಗೆ ಹೊಸದಾಗಿ ಸೇರ್ಪಡೆಗೊಂಡ ಪದಗಳಿಗೆ ವಿರೋಧ ಪಕ್ಷಗಳಿಂದ ತೀವ್ರ ಟೀಕೆ ವ್ಯಕ್ತವಾಗಿದೆ. ಇದರ ಹಿಂದೆ ಇರುವ ‘ರಾಜಕೀಯ’ವನ್ನು ಪಕ್ಕಕ್ಕೆ ಇಟ್ಟು, ನಮ್ಮ ಜನಪ್ರತಿನಿಧಿಗಳು ಪರಸ್ಪರ ದೋಷಾರೋಪದ ಸಂದರ್ಭದಲ್ಲಿ ಬಳಸುವ ಭಾಷೆ, ಪದಗಳ ಬಗೆಗೆ ಗಮನಹರಿಸಿದರೆ, ಅವು ಭವಿಷ್ಯದ ಪೀಳಿಗೆಗೆ ಯಾವ ರೀತಿಯಲ್ಲೂ ಮಾರ್ಗದರ್ಶಕವಾಗಿ ಇರುವುದಿಲ್ಲ ಎಂಬುದು ಮನದಟ್ಟಾಗುತ್ತದೆ.

1950-60ರ ದಶಕದ ಶಾಸನಸಭೆಗಳ ಕಲಾಪಗಳನ್ನೂ ಈ ಹಿಂದಿನ 30 ವರ್ಷಗಳ ಕಲಾಪಗಳನ್ನೂ ಹೋಲಿಸಿ ನೋಡಿದರೆ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಮೊದಲನೆಯದು, ಚುನಾಯಿತ ಪ್ರತಿನಿಧಿಗಳು ಸಾಂಸ್ಕೃತಿಕ ಹಾಗೂ ಸಾಂವಿಧಾನಿಕ ಮೌಲ್ಯಗಳನ್ನು ಕಳೆದುಕೊಂಡಿರುವುದು. ಎರಡನೆಯದು, ಜನಪ್ರತಿನಿಧಿಗಳು ಬಳಸುವ ದೋಷಾರೋಪದ ಭಾಷೆ ಮತ್ತು ವಿಮರ್ಶಾತ್ಮಕ ಪರಿಭಾಷೆ ಎರಡೂ ತಮ್ಮ ಘನತೆಯನ್ನು ಕಳೆದುಕೊಂಡಿರುವುದು.

ಕಲಾಪಗಳಲ್ಲಿ ಭಾಷಾ ಸೌಜನ್ಯ ಮತ್ತು ಸಂಯಮವನ್ನು ಕಾಪಾಡಿಕೊಳ್ಳಬೇಕಾದುದು ಅಪೇಕ್ಷಣೀಯ. ಆದರೆ ನಮ್ಮ ಸಂಸದರು ಮತ್ತು ಶಾಸಕರು ಇವುಗಳನ್ನು ಗಾಳಿಗೆ ತೂರಿ ಬಹಳ ವರ್ಷಗಳೇ ಆಗಿವೆ. ಪರಿಣಾಮವಾಗಿ ಕಲಾಪದ ಗುಣಮಟ್ಟ ಕುಸಿಯತೊಡಗಿದೆ. ಈ ಕುಸಿತಕ್ಕೆ ಪಕ್ಷಭೇದವಿಲ್ಲದೆ ಎಲ್ಲರೂ ಕೊಡುಗೆ ನೀಡಿದ್ದಾರೆ.

ತಮ್ಮ 13 ದಿನಗಳ ಸರ್ಕಾರವು ಪತನವಾಗುತ್ತದೆ ಎಂಬ ಅರಿವಿದ್ದರೂ, ಸಂಸತ್ತಿನಲ್ಲಿ ವಿಶ್ವಾಸಮತ ಕೋರುವ ಸಂದರ್ಭದಲ್ಲಿ 1996ರ ಮೇ ತಿಂಗಳಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಮಾಡಿದ ಸಂಸದೀಯ ಭಾಷಣವನ್ನು ಇಂದಿನ ಪ್ರತಿಯೊಬ್ಬ ಕಿರಿಯ ಸಂಸದ, ಶಾಸಕ ಒಮ್ಮೆಯಾದರೂ ಆಲಿಸುವುದು ಒಳಿತು. ಅಂದಿನ ಭಾಷಣದಲ್ಲಿ ವಾಜಪೇಯಿ ಅವರ ಟೀಕೆ, ವಿಮರ್ಶೆ, ಆರೋಪ ಮತ್ತು ರಾಜಕೀಯ ಪ್ರತ್ಯಾರೋಪಗಳನ್ನು ಸಹಜವೆಂದೇ ಪರಿಗಣಿಸಿ ಆಲಿಸಿದಾಗ, ಅವರ ಭಾಷಣದಲ್ಲಿದ್ದ ಸೌಜನ್ಯ, ಸಂಯಮ ಮತ್ತು ಭಾಷಾಶಿಸ್ತು ಸಾರ್ವಕಾಲಿಕವಾಗಿ ಮಾನ್ಯತೆ ಪಡೆಯುವಂತಿದ್ದವು. ತಾವು ಅಧಿಕಾರ ಕಳೆದುಕೊಳ್ಳುವ ಹತಾಶೆಯನ್ನಾಗಲೀ ಆಕ್ರೋಶವನ್ನಾಗಲೀ ತೋರಗೊಡದೆ, ಪ್ರಜಾತಂತ್ರದ ಚೌಕಟ್ಟಿನಲ್ಲೇ ತಮ್ಮ ವಿರೋಧಿಗಳಿಗೆ ಪ್ರತ್ಯುತ್ತರ ನೀಡಿದ ವಾಜಪೇಯಿ ಅವರ ಈ ಭಾಷಣ ಎಲ್ಲರ ಮೆಚ್ಚುಗೆ ಗಳಿಸಿದ್ದಕ್ಕೆ ಕಾರಣವೆಂದರೆ, ಅವರ ಭಾಷೆಯಲ್ಲಿದ್ದ ಸಂಯಮ ಮತ್ತು ಸೌಜನ್ಯ.

ಬಹುಶಃ ಇದೇ ಸೌಜನ್ಯ ಮತ್ತು ಸಂಯಮವನ್ನು ನಮ್ಮ ಜನಪ್ರತಿನಿಧಿಗಳು ಕಾಪಾಡಿಕೊಂಡು ಬಂದಿದ್ದಲ್ಲಿ, ಅಸಂಸದೀಯ ಪದಗಳ ಪಟ್ಟಿಯನ್ನು ವರ್ಷದಿಂದ ವರ್ಷಕ್ಕೆ ಹಿಗ್ಗಿಸಬೇಕಾದ ಪ್ರಮೇಯ ಬರುತ್ತಿರಲಿಲ್ಲ. ಆದರೆ ಭಾರತದ ಅಧಿಕಾರ ರಾಜಕಾರಣದ ಪರಿಭಾಷೆಯು ಮನುಜ ಸಂವೇದನೆಯನ್ನೂ ಕಳೆದುಕೊಂಡಿರುವುದನ್ನು ಕಾಣುತ್ತಿದ್ದೇವೆ.

ಒಂದು ನಾಗರಿಕ ಸಮಾಜವಾಗಿ ನಾವು ನಿರ್ಬಂಧಿಸಬೇಕಿರುವುದು ಸಂಸದೀಯ ನೆಲೆಯ ಪರಿಭಾಷೆಯನ್ನಷ್ಟೇ ಅಲ್ಲ. ಸಾರ್ವಜನಿಕ ಬದುಕಿನಲ್ಲೂ ಎರಡು– ಮೂರು ದಶಕಗಳಿಂದ ನಾವು ಆಲಿಸುತ್ತಿರುವ ರಾಜಕೀಯ ಪರಿಭಾಷೆಯನ್ನೇ ಮರುಪರಿಷ್ಕರಣೆಗೆ ಒಳಪಡಿಸಬೇಕಿದೆ. ಸಮಾಜ ಸುಧಾರಣೆಯ ಕೂಗು, ಅಸ್ಮಿತೆಗಳ ಚೌಕಟ್ಟಿನಲ್ಲಿ ಬಂಧಿತವಾಗಿರುವ ಸಂದರ್ಭದಲ್ಲಿ ಆಧ್ಯಾತ್ಮಿಕ ಮಠಗಳೂ ಧಾರ್ಮಿಕ ಕೇಂದ್ರಗಳೂ ತಮ್ಮ ಸಾಮಾಜಿಕ ಹಾಗೂ ಸಾಮುದಾಯಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ರಾಜಕೀಯ ವೇದಿಕೆಗಳನ್ನೇ ಚಿಮ್ಮುಹಲಗೆಯಂತೆ ಬಳಸಿಕೊಳ್ಳುತ್ತಿವೆ. ಹಾಗಾಗಿಯೇ ಸುಧಾರಣೆಯ ಸ್ವರಗಳೂ ಕ್ಷೀಣಿಸುತ್ತಲೇ ಬರುತ್ತಿದ್ದು, ಸಾಂಸ್ಕೃತಿಕ ಪರಿಭಾಷೆಯೂ ಸಾಪೇಕ್ಷವಾಗುತ್ತಿದೆ.



ದ್ವೇಷ, ಈರ್ಷ್ಯೆ, ಮತ್ಸರ, ಹಿಂಸೆ, ಅಸಹನೆ ಇವೆಲ್ಲವನ್ನೂ ಇಂದಿನ ರಾಜಕೀಯ ನಾಯಕರ ಭಾಷಣಗಳಲ್ಲಿ, ಹೇಳಿಕೆಗಳಲ್ಲಿ ಮತ್ತು ಟ್ವೀಟ್‌ಗಳಲ್ಲಿ ವಿಪುಲವಾಗಿ ಕಾಣುತ್ತಲೇ ಬಂದಿದ್ದೇವೆ. ಸಾಮಾಜಿಕ ಮಾಧ್ಯಮಗಳಲ್ಲಿ ಯುವಪೀಳಿಗೆ ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಗಮನಿಸಿದಾಗ, ನಮ್ಮ ಸಮಾಜವು ನಾಗರಿಕ ನಡೆಗಳಿಂದ ವಿಮುಖವಾಗುತ್ತಿದೆಯೇ ಸಂವೇದನಾಶೂನ್ಯವಾಗುತ್ತಿದೆಯೇ ಎಂಬ ಆತಂಕ ಮೂಡುತ್ತದೆ. ಸಾರ್ವಜನಿಕ ವಲಯವನ್ನು ಇನ್ನೂ ಹೆಚ್ಚು ಪ್ರಭಾವಿಸುವ ದೃಶ್ಯಮಾಧ್ಯಮಗಳನ್ನು, ಟಿ.ವಿ. ವಾಹಿನಿಗಳ ಧಾರಾವಾಹಿಗಳನ್ನು ಮತ್ತು ಸುದ್ದಿಮನೆಗಳ ನಿರೂಪಕರ ಮಾತಿನ ಶೈಲಿಯನ್ನು ಗಮನಿಸುತ್ತಾ ಹೋದರೆ, ಈ ಆತಂಕಗಳೇ ಆಘಾತಕ್ಕೆ ಎಡೆಮಾಡಿಕೊಡುತ್ತವೆ. ಈ ವಿಕೃತಿಯು ದಿನಗಳೆದಂತೆ ಹೆಚ್ಚಾಗುತ್ತಲೇ ಹೋಗುತ್ತಿದ್ದರೆ ರಾಜಕೀಯ ನಾಯಕರೂ ಅದರ ಭಾಗಶಃ ಹೊಣೆ ಹೊರಬೇಕಾಗುತ್ತದೆ.

ಸಮಾಜದ ಸ್ವಾಸ್ಥ್ಯ ಮತ್ತು ಮನುಜ ಸಂವೇದನೆಯನ್ನು ಭಂಗಗೊಳಿಸುವ ಯಾವುದೇ ಭಾಷೆ ಅಥವಾ ಪರಿಭಾಷೆಯನ್ನು ಸಹಿಸುವುದಿಲ್ಲ ಎಂಬ ಸಂದೇಶವನ್ನು ಸಮಾಜ ನೀಡಬೇಕಿದೆ. ಹೀಗೆ ಅಧಿಕಾರಯುತವಾಗಿ ಆದೇಶಿಸಬೇಕಾದ ಒಂದು ಸಮಾಜವನ್ನು ರೂಪಿಸುವ ಹೊಣೆ ನಮ್ಮೆಲ್ಲರ ಮೇಲಿದೆ.

ರಾಜಕೀಯ ನಾಯಕರು ಈ ದಿಸೆಯಲ್ಲಿ ಮುಂದಾಳತ್ವ ವಹಿಸುತ್ತಾರೆ ಎಂದು ಭಾವಿಸುವುದು ಉತ್ಪ್ರೇಕ್ಷೆಯಾಗುತ್ತದೆ. ಆದರೆ ನಾಗರಿಕತೆಯತ್ತ ಸಾಗುತ್ತಿರುವ ಒಂದು ಸಮಾಜ ಮತ್ತು ಈ ಸಮಾಜ ಮುಂದಾಳತ್ವ ವಹಿಸಲು ಬಯಸುವ ಯಾವುದೇ ಸಾಂಸ್ಕೃತಿಕ ವೇದಿಕೆಗಳು ಈ ದಿಸೆಯಲ್ಲಿ ಯೋಚಿಸಬಹುದು.

ವಾಚಕರ ವಾಣಿ

ಅಕ್ಷರ ದೋಷ: ತಕ್ಕ ಶಿಕ್ಷೆಯಾಗಲಿ

ಸರ್ಕಾರಿ ಕಚೇರಿಗಳಲ್ಲಿ ಕಾರ್ಯನಿರ್ವಹಣೆ ವೇಳೆ ಸಾರ್ವಜನಿಕರು ಫೋಟೊ ತೆಗೆಯುವುದು, ವಿಡಿಯೊ ಚಿತ್ರೀಕರಣ ಮಾಡುವುದನ್ನು ನಿಷೇಧಿಸಿದ್ದ ಆದೇಶವನ್ನು ಹಿಂಪಡೆದು ಹೊರಡಿಸಿದ ಆದೇಶದಲ್ಲಿ ಆದ ಅಕ್ಷಮ್ಯ ಅಕ್ಷರ ದೋಷಗಳನ್ನು ಗಮನಿಸಿದರೆ, ಆದೇಶ ಪತ್ರವನ್ನು ಟೈಪಿಸಿದ ಹಾಗೂ ಅದರ ಕರಡು ತಿದ್ದಿದ ಅಧಿಕಾರಿಗಳು ಅದನ್ನು ನಿರ್ವಹಿಸಿದಾಗ ಮಾನಸಿಕವಾಗಿ ಮತ್ತು ದೈಹಿಕವಾಗಿ ಯಾವ ಸ್ಥಿತಿಯಲ್ಲಿ ಇದ್ದರು ಎಂಬುದನ್ನು ಪತ್ತೆಹಚ್ಚುವುದು ಅವಶ್ಯಕವಾಗಿದೆ.

ಆಡಳಿತ ಭಾಷೆಯನ್ನು ಹೀಗೆ ಕೊಲೆ ಮಾಡುವಂತಹವರಿಗೆ ಸರ್ಕಾರ ತಕ್ಕ ಶಿಕ್ಷೆ ವಿಧಿಸಲೇಬೇಕು. ಈಗಾಗಲೇ ಅಧ್ವಾನ ಸ್ಥಿತಿ ತಲುಪಿರುವ ಇಂತಹ ಅಧಿಕಾರಿಗಳ ನಡವಳಿಕೆಗಳು ಪುನರಾವರ್ತನೆ ಆಗದಂತೆ ತಡೆಯಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಕ್ಷಣ ನಿಗಾ ವಹಿಸಬೇಕಿದೆ.

ಸಿ.ಎಚ್. ಹನುಮಂತರಾಯ, ಬೆಂಗಳೂರು

ಅನ್ಯಾಯದ ಹಣದಿಂದ ನೆಮ್ಮದಿ ಸಾಧ್ಯವೇ?

ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಭಾಗಿಯಾಗಿ ಜೈಲಿನಲ್ಲಿರುವ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ‘ನಿತ್ಯ ಹೆಂಡತಿ, ಮಕ್ಕಳನ್ನು ನೋಡಲು ಅವಕಾಶ ಮಾಡಿಕೊಡಿ’ ಎಂದು ಅಲವತ್ತುಕೊಂಡಿರುವುದು ನಿಜಕ್ಕೂ ಕನಿಕರ ಮೂಡಿಸುತ್ತದೆ (ಪ್ರ.ವಾ., ಜುಲೈ 16). ಘನತೆಯ ಬದುಕಿಗೆ ಬೇಕಾದ ಎಲ್ಲವೂ ಅವರ ಬಳಿ ಇತ್ತು. ಅದರಲ್ಲೇ ನೆಮ್ಮದಿ ಅರಸಿದ್ದರೆ ಇಂಥ ಸ್ಥಿತಿ ತಪ್ಪಿಸಲು ಸಾಧ್ಯವಾಗುತ್ತಿತ್ತೇನೊ. ಒಟ್ಟಾರೆ, ಹಣದ ಹುಚ್ಚು ಹತ್ತಿಸಿಕೊಂಡರೆ ಏನಾಗುತ್ತದೆ ಎಂಬುದು ಮತ್ತು ಯಾರ್‍ಯಾರ ಹೆಸರಿನಲ್ಲಿಯೋ ಆಸ್ತಿ ಮಾಡಿಟ್ಟವರ ಸ್ಥಿತಿ ಕೊನೆಗೆ ಎಲ್ಲಿಗೆ ತಲುಪುತ್ತದೆ ಎಂಬುದು ಯೋಚಿಸಬೇಕಾಗಿರುವ ಸಂಗತಿಗಳು.

ಮಕ್ಕಳೂ ಸೇರಿ ಮುಂದಿನ ತಲೆಮಾರಿನವರೆಗೂ ಆಗುವಷ್ಟು ಸಂಪತ್ತು ಶೇಖರಿಸಿಡುವ ಪ್ರವೃತ್ತಿ ಜನರಲ್ಲಿ ಹೆಚ್ಚುತ್ತಿದೆ. ಅಷ್ಟಕ್ಕೂ ಪ್ರತಿಯೊಬ್ಬರೂ ಹಣ, ಆಸ್ತಿ ಮಾಡುವುದು ಹೆಂಡತಿ, ಮಕ್ಕಳ ಸಲುವಾಗಿಯೇ ಎಂದಾದರೆ, ಅನ್ಯಾಯದಿಂದ ಗಳಿಸಿ ಬಚ್ಚಿಟ್ಟ ಹಣ ಮುಂದೆ ಅವರನ್ನು ಸುಖವಾಗಿ ಇಡಬಲ್ಲದೇ, ನಿಜಕ್ಕೂ ಅವರು ಸಮಾಜದಲ್ಲಿ ನೆಮ್ಮದಿಯಿಂದ, ಮರ್ಯಾದೆಯಿಂದ ಬದುಕುವುದಕ್ಕೆ ಸಹಕಾರಿಯಾಗುವುದೇ ಎಂಬುದು ಚಿಂತನಾರ್ಹ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಅಣಕು ಮತದಾನ: ಅನಗತ್ಯ ಕ್ರಮ

ಅತಿವೃಷ್ಟಿಯಿಂದ ಸಂಕಷ್ಟಕ್ಕೆ ತುತ್ತಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ, ಸಂತ್ರಸ್ತರಿಗೆ ಸಾಂತ್ವನ ಹೇಳಬೇಕಾದಂತಹ ತುರ್ತು ಸಮಯದಲ್ಲಿ, ರಾಷ್ಟ್ರಪತಿ ಚುನಾವಣೆ ನಿಮಿತ್ತ ತನ್ನ ಪಕ್ಷದ ಶಾಸಕರನ್ನು ಒಂದೆಡೆ ಸೇರಿಸಿ, ಅಣಕು ಮತದಾನದಲ್ಲಿ ಭಾಗಿಯಾಗುವಂತೆ ಮಾಡಿದ ಬಿಜೆಪಿ ನಡೆಯ ಬಗ್ಗೆ (ಪ್ರ.ವಾ., ಜುಲೈ 16) ಶಾಸಕರ ಅಸಮಾಧಾನ ಮೆಚ್ಚುವಂಥದ್ದು. ಶಾಸಕರು ಎಂದರೆ ಶಾಸನ ರೂಪಿಸಲು ಬೇಕಾದ ಸಾಮರ್ಥ್ಯ ಪಡೆದಿರುವಂತಹವರು. ಜನರನ್ನು ಮುನ್ನಡೆಸ ಬೇಕಾದ ಪ್ರಬುದ್ಧತೆ ಅವರಿಗೆ ಇರಬೇಕಾಗುತ್ತದೆ. ಅಂತಹವರು ಚುನಾವಣೆಯಲ್ಲಿ ಮತದಾನ ಮಾಡುವಷ್ಟು ಜ್ಞಾನವಂತರಲ್ಲವೇ?

ಮತ ಚಲಾವಣೆಗೆ ತರಬೇತಿಯನ್ನೇ ಪಡೆಯದ ಸಾಮಾನ್ಯ ಮತದಾರನಿಗೆ ಇದರಿಂದ ಯಾವ ಸಂದೇಶ ಸಿಗಬಹುದು? ಅಣಕು ಮತದಾನಕ್ಕೆ ಐಷಾರಾಮಿ ಹೋಟೆಲ್‌ನಲ್ಲಿ ಮೂರು ದಿನ ತರಬೇತಿ ನೀಡಲು ಆಗುವ ಖರ್ಚು, ಶಾಸಕರ ಸಮಯ, ಮಾನವ ಸಂಪನ್ಮೂಲದ ವ್ಯಯ ತೆರಿಗೆದಾರನಿಗೆ ಅಸಮಾಧಾನ ತರುವುದಿಲ್ಲವೇ? ಒಂದು ವೇಳೆ ತರಬೇತಿಯ ಅವಶ್ಯಕತೆ ಇದ್ದರೆ ಶಾಸಕರಿಗೆ ಶಾಸಕರ ಭವನವಿದೆ, ಪಕ್ಷದ ಕಚೇರಿಯಿದೆ, ಅಲ್ಲಿ ಏರ್ಪಡಿಸಬಹುದಿತ್ತು ಅಲ್ಲವೇ?

ಡಾ. ಜಿ.ಬೈರೇಗೌಡ, ಬೆಂಗಳೂರು

ಹೂರಣವಿರದ ಯಂತ್ರ?

ತಪ್ಪು ಕನ್ನಡಕ್ಕಾಗಿ ಅಧಿಕಾರಿಯನ್ನು
ಶಿಕ್ಷಿಸಿದರೇನು ಫಲ?
ಬೆಳೆಯುತ್ತಿತ್ತು ಗೊಬ್ಬರವಿದ್ದರೆ ಹೊಲ
ಸುಧಾರಿಸಿಕೊಳ್ಳದವರಿಗೆ ಆಡಳಿತ
ಕೊಟ್ಟರೆ ಸುಧಾರಣೆ ಕಂಡೀತೆ?
ಹೂರಣವಿರದ ಯಂತ್ರ ಒತ್ತಿದರೆ
ಶ್ಯಾವಿಗೆ ಉದುರೀತೆ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಅಧೋಗತಿಗೊಂದು ಅದ್ಭುತ ಸಾಕ್ಷಿ!

ಸರ್ಕಾರಿ ಕಚೇರಿಗಳಲ್ಲಿ ಕಾರ್ಯನಿರ್ವಹಣೆ ವೇಳೆ ಫೋಟೊ, ವಿಡಿಯೊ ತೆಗೆಯುವುದನ್ನು ನಿಷೇಧಿಸಿ ಆದೇಶ ಹೊರಡಿಸಿದ್ದರ ಬೆನ್ನಿಗೇ ಹಿಂಪಡೆಯುವ ವಿಷಯದಲ್ಲಿ ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೃಷ್ಟಿಸಿದ್ದು ಪ್ರಮಾದಗಳ ಮೇಲೆ ಪ್ರಮಾದಗಳ ಜಡಿಮಳೆ. ತೀವ್ರವಾದ ಟೀಕಾಪ್ರಹಾರಕ್ಕೆ ಗುರಿಯಾಗಬಹುದೆಂದು ಭಾವಿಸಿ, ನಿಷೇಧದ ಆದೇಶವನ್ನು ಹಿಂಪಡೆದಿದ್ದು ಹೌದಾದರೂ ಸುಧಾರಣೆಯ ಹೆಸರಿನಲ್ಲೇ ಹುಟ್ಟಿಕೊಂಡ ಆಡಳಿತ ಸುಧಾರಣಾ ಇಲಾಖೆಯನ್ನು ಸುಧಾರಿಸುವ ಅಗತ್ಯ ನಮ್ಮ ನಾಡಿನಲ್ಲಿ ಎದುರಾಗಿರುವುದು ನಿಜ.

ಆದೇಶ ಪತ್ರದಲ್ಲಿ ‘ನಡಾವಳಿ’ ಎನ್ನುವ ಶಬ್ದ ‘ನಡವಳಿ’ ಆಗಿ ಮುಂದೆ ನಡೆಯಲಾರದೆ ಕುಂಟುತ್ತಿತ್ತು. ‘ಪ್ರಸ್ತಾವನೆ’ ಎನ್ನುವ ಶಬ್ದ ‘ಪ್ರಸತ್ತಾವನೆ’ ಆಗಿದ್ದರಿಂದ ಮಿತಿಮೀರಿದ ಪ್ರಸವ ವೇದನೆಯಿಂದ ಬಳಲುತ್ತಿತ್ತು. ರಾಜ್ಯದ ಹೆಸರೇ ವಿಕೃತಗೊಂಡು ‘ಕರ್ನಾಟಾ’ ಆಗಿದ್ದು ನಮ್ಮ ಆಡಳಿತ ವ್ಯವಸ್ಥೆ ಎಷ್ಟು ಕೆಟ್ಟುಹೋಗಿದೆ ಎನ್ನುವುದಕ್ಕೆ ಸ್ಪಷ್ಟ ಸಾಕ್ಷಿಯಾಗಿತ್ತು ಎಂಬುದು ತಲೆ ತಗ್ಗಿಸುವ ಸಂಗತಿ. ತಪ್ಪಾಗಿ ಮೂಡಿಬಂದಿದ್ದ ‘ಮೇಲೇ’ ಮತ್ತು ‘ಬಾಗ-1’ ಪದಗಳು ತೀರಾ ಸಾಮಾನ್ಯ ತಪ್ಪುಗಳು ಎಂದು ಸರ್ಕಾರಿ ಆದೇಶದ ಶಿಲ್ಪಿಗಳು ಹೇಳುವ ಮೂಲಕ ನೊಂದ ಕನ್ನಡಿಗರನ್ನು ಈಗ ಸಂತೈಸಲು ಮುಂದಾದರೆ ಅದು ಸರಿಯಾಗಿಬಿಡುವುದಿಲ್ಲ.

ತಪ್ಪುಗಳನ್ನು ಸರಿಪಡಿಸಿ ಹೊರಡಿಸಿದ ಹೊಸ ಆದೇಶದಲ್ಲಿ, ಅಧಿಕಾರಿ ಆನಂದ ಅವರ ಹೆಸರು ‘ಅನಂದ’ ಆಗಿದ್ದು ಅವರಿಗೆ ಆನಂದ ತರುವ ಸಂಗತಿಯಂತೂ ಅಲ್ಲ. ಯಾವ ಸಮರ್ಥನೆಯೂ ಇಲ್ಲದ ಆದೇಶಗಳನ್ನು ಪ್ರಕಟಿಸುವುದಕ್ಕೆ, ಹಿಂಪಡೆಯುವುದಕ್ಕೆ ಮತ್ತು ಮತ್ತೊಂದು ಆದೇಶ ಹೊರಡಿಸುವುದಕ್ಕೆ ತಗುಲಿದ ವೆಚ್ಚ, ಬೇಕಾದ ಸಮಯವನ್ನು ಲೆಕ್ಕ ಹಾಕಿದರೆ, ಸಾರ್ವಜನಿಕ ಆಡಳಿತದಲ್ಲಿ ಕ್ಷಮತೆಯೇ ಇಲ್ಲವಾದಾಗ ತಲೆದೋರುವ ಸಮಸ್ಯೆಗಳ ಪ್ರವಾಹಕ್ಕೂ ನಮ್ಮ ರಾಜ್ಯ ಸಾಕ್ಷಿಯಾಗಿದೆ ಅನಿಸುತ್ತದೆ.

ಪ್ರೊ. ಜಿ.ವಿ.ಜೋಶಿ, ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಷ್ಟ್ರಪತಿ ಚುನಾವಣೆ

ಒಗ್ಗಟ್ಟು ತೋರಲು ವಿಪಕ್ಷಗಳು ವಿಫಲ

● ಶೆಮಿನ್ ಜಾಯ್

ರಾಷ್ಟ್ರಪತಿ ಚುನಾವಣೆಯ ಫಲಿತಾಂಶ ಏನು ಎಂಬುದು ಮತದಾನಕ್ಕೆ ಮುನ್ನವೇ ಎಲ್ಲರಿಗೂ ತಿಳಿದಿದೆ. ಸೋಮವಾರದ ಚುನಾವಣೆಯ ಮತ ಎಣಿಕೆ ಮೂರು ದಿನಗಳ ಬಳಿಕ ಅಂದರೆ, ಗುರುವಾರ ನಡೆಯಲಿದೆ. ಆದಿವಾಸಿ ಸಮುದಾಯದ ಮಹಿಳೆ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ ಆಯ್ಕೆಯಾಗಲು ಇನ್ನೇನು ಬೆರಳೆಣಿಕೆಯ ದಿನಗಳಷ್ಟೇ ಇವೆ. ಭಾರತದ ರಾಷ್ಟ್ರಪತಿ ಚುನಾವಣೆಯು ಅಚ್ಚರಿಯ ಫಲಿತಾಂಶಕ್ಕೆ ಕಾರಣವಾಗಿದ್ದು ಇತಿಹಾಸದಲ್ಲಿ ಒಂದು ಬಾರಿ ಮಾತ್ರ. 1969ರಲ್ಲಿ ಇಂದಿರಾ ಗಾಂಧಿ ಅವರು ತಮ್ಮದೇ ಪಕ್ಷದ ಅಧಿಕೃತ ಅಭ್ಯರ್ಥಿಯನ್ನು ಸೋಲಿಸಿದ್ದರು. ತಮ್ಮ ಪಕ್ಷದ ನಾಯಕರನ್ನು ಮೂಲೆಗುಂಪು ಮಾಡುವುದಕ್ಕಾಗಿ ಇಂದಿರಾ ಅವರು 'ಆತ್ಮಸಾಕ್ಷಿ ಮತ' ಹಾಕಿ ಎಂದು ಪಕ್ಷದ ಶಾಸಕರು, ಸಂಸದರಿಗೆ ಕರೆ ನೀಡಿದ್ದರು. ಕಾಂಗ್ರೆಸ್ ಪಕ್ಷವು ನೀಲಂ ಸಂಜೀವ ರೆಡ್ಡಿ ಅವರನ್ನು ಕಣಕ್ಕೆ ಇಳಿಸಿತ್ತು. ಜನಪ್ರಿಯ ಕಾರ್ಮಿಕ ನಾಯಕರಾಗಿದ್ದ ವಿ.ವಿ. ಗಿರಿ ಅವರು ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಇಂದಿರಾ ಅವರ ಬೆಂಬಲದಿಂದಾಗಿ ವಿ.ವಿ.ಗಿರಿ ಅವರು ಗೆದ್ದರು.

ಆರಂಭದಲ್ಲಿಯೇ, ಮತದಾರರ ಸಂಖ್ಯೆಯು ಬಿಜೆಪಿ ನೇತೃತ್ವದ ಎನ್‌ಡಿಎ ಪರವಾಗಿಯೇ ಇತ್ತು. ಎನ್‌ಡಿಎ ಮತ್ತು ಬಿಜೆಡಿ-ವೈಎಸ್‌ಆರ್ ಕಾಂಗ್ರೆಸ್‌ನಂತಹ ಮಿತ್ರ ಪಕ್ಷಗಳ ನೆರವಿನಿಂದಾಗಿ ತಕ್ಕಡಿ ಮುರ್ಮು ಅವರ ಕಡೆಗೇ ವಾಲಿಕೊಂಡಿತ್ತು. ಅವರಿಗೆ 9,000 ಮತಗಳ (ಮತ ಮೌಲ್ಯ) ಕೊರತೆಯಷ್ಟೇ ಇತ್ತು. ವಿರೋಧ ಪಕ್ಷಗಳ ಸಹಮತದ ಅಭ್ಯರ್ಥಿಯಾಗಿ ಜೂನ್ 21ರಂದು ಯಶವಂತ ಸಿನ್ಹಾ ಅವರನ್ನು ಆಯ್ಕೆ ಮಾಡಿದ ಆರು ತಾಸುಗಳ ಬಳಿಕ ಮುರ್ಮು ಅವರ ಹೆಸರನ್ನು ಬಿಜೆಪಿ ಪ್ರಕಟಿಸಿತ್ತು.

ಬಿಜೆಪಿಯ ಅಭ್ಯರ್ಥಿ ಯಾರಾಗಬಹುದು ಎಂಬುದನ್ನು ಈ ಬಾರಿ ಮಾಧ್ಯಮಗಳು ಹಾಗೂ ರಾಜಕೀಯ ಪಂಡಿತರು ಸರಿಯಾಗಿಯೇ ಊಹಿಸಿದ್ದರು. ಮಾಧ್ಯಮಗಳಲ್ಲಿ ಪ್ರಕಟವಾದ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಮುರ್ಮು ಅವರ ಹೆಸರೇ ಮುಂಚೂಣಿಯಲ್ಲಿತ್ತು. ಕಳೆದ ಬಾರಿ ಹೀಗೆ ಆಗಿರಲಿಲ್ಲ. ರಾಮನಾಥ ಕೋವಿಂದ್ ಅವರ ಹೆಸರನ್ನು ಬಿಜೆಪಿ ಪ್ರಕಟಿಸಿದಾಗ ಅದು ದೇಶಕ್ಕೇ ಅಚ್ಚರಿ ಉಂಟು ಮಾಡಿತ್ತು. ಸಾಂಕೇತಿಕತೆಯ ಬಗ್ಗೆ ನರೇಂದ್ರ ಮೋದಿ ಅವರಿಗೆ ಇರುವ ಮೋಹವು ಮಾಧ್ಯಮ ಮತ್ತು ರಾಜಕೀಯ ಪಂಡಿತರಿಗೆ ಈಗ ಸ್ಪಷ್ಟವಾಗಿ ಅರ್ಥವಾಗಿದೆ.

ಕಳೆದ ಬಾರಿ ಬಿಜೆಪಿಯು ಕೋವಿಂದ್ ಅವರನ್ನು ಕಣಕ್ಕೆ ಇಳಿಸಿದಾಗ, ದಲಿತ ನಾಯಕಿ ಮೀರಾ ಕುಮಾರ್ ಅವರನ್ನು ವಿರೋಧ ಪಕ್ಷಗಳು ಸ್ಪರ್ಧೆಗೆ ಇಳಿಸಿದ್ದವು. ಮಹಿಳೆ, ಆದಿವಾಸಿ, ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಹೀಗೆ ಆಡಳಿತ ಪಕ್ಷವು ಯಾರನ್ನೇ ಕಣಕ್ಕೆ ಇಳಿಸಿದರೂ ಅವರು ಬಿಜೆಪಿಯವರೇ ಆಗಿರುತ್ತಾರೆ ಎಂಬುದು ಪ್ರತಿಪಕ್ಷಗಳಿಗೆ ಸ್ಪಷ್ಟವಿತ್ತು. ಹಾಗಾಗಿಯೇ, ಬಿಜೆಪಿಯಲ್ಲಿಯೇ ಇದ್ದ, ವಿರೋಧ ಪಕ್ಷಗಳಿಗೆ ಸರ್ವ ಸಮ್ಮತಿಯೂ ಇದ್ದ ಸಿನ್ಹಾ ಅವರನ್ನು ಕಣಕ್ಕೆ ಇಳಿಸುವ ಮೂಲಕ ಬಿಜೆಪಿಗಿಂತ ಒಂದು ಮುಂದೆ ಹೆಜ್ಜೆ ಇರಿಸುವುದು ವಿರೋಧ ಪಕ್ಷಗಳ ಕಾರ್ಯತಂತ್ರವಾಗಿತ್ತು. ಆದರೆ, ಈ ಕಾರ್ಯತಂತ್ರವನ್ನು ಬಿರುಸಿನಿಂದ ಮುಂದಕ್ಕೆ ಒಯ್ಯಲು ಮಾತ್ರ ವಿರೋಧ ಪಕ್ಷಗಳಿಗೆ ಸಾಧ್ಯವಾಗಲಿಲ್ಲ.

ಎನ್‌ಡಿಎಯ ಹೊರಗೆ ಇದ್ದ ಹಲವು ಪಕ್ಷಗಳು ಸಿನ್ಹಾ ಅವರಿಗೆ ಬೆಂಬಲ ಘೋಷಿಸಿದ್ದವು. ಆದರೆ, ಮುರ್ಮು ಅವರ ಹೆಸರು ಘೋಷಣೆಯಾದ ಬಳಿಕ ಕೆಲವು ಪಕ್ಷಗಳು ಮನಸ್ಸು ಬದಲಾಯಿಸಿದವು. ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾದಲ್ಲಿ ಉಂಟಾದ ಬಂಡಾಯದಿಂದಾಗಿ ಆ ಪಕ್ಷವು ಈಗ ಅನಿವಾರ್ಯವಾಗಿ ಮುರ್ಮು ಅವರನ್ನು ಬೆಂಬಲಿಸಬೇಕಾದ ಸ್ಥಿತಿ ಸೃಷ್ಟಿಯಾಗಿದೆ. ಎನ್‌ಡಿಎ ತೆಕ್ಕೆಗೆ ಮರಳುವ ಉತ್ಸಾಹದಲ್ಲಿರುವ ಅಕಾಲಿದಳ ಕೂಡ ಆಡಳಿತ ಪಕ್ಷದ ಅಭ್ಯರ್ಥಿಯ ಬೆನ್ನಿಗೆ ನಿಂತಿದೆ. ಕಾಂಗ್ರೆಸ್‌ನ ಮಿತ್ರ ಪಕ್ಷ ಜೆಎಂಎಂ ಕೂಡ ಮುರ್ಮು ಅವರನ್ನು ಬೆಂಬಲಿಸುವುದಾಗಿ ಹೇಳಿದೆ. ಆದಿವಾಸಿ ಜನಸಂಖ್ಯೆಯೂ ಗಣನೀಯವಾಗಿರುವ ಜಾರ್ಖಂಡ್‌ನ ಈ ಪಕ್ಷದ ನಿರ್ಧಾರದ ಹಿಂದೆ ಅಚ್ಚರಿಯೇನೂ ಇಲ್ಲ.

ಸಿನ್ಹಾ ಅವರ ಹೆಸರು ಸೂಚಿಸಿದ್ದ ತೃಣಮೂಲ ಕಾಂಗ್ರೆಸ್‌ನ ಈಗಿನ ನಿಲುವಿನಲ್ಲಿ ದ್ವಂದ್ವ ಕಾಣಿಸುತ್ತಿದೆ. ಮುರ್ಮು ಅವರನ್ನು ಅಭ್ಯರ್ಥಿ ಮಾಡಲಾಗುವುದು, ಅವರನ್ನು ಬೆಂಬಲಿಸಿ ಎಂದು ಬಿಜೆಪಿ ಮೊದಲೇ ಹೇಳಿದ್ದರೆ ಅದನ್ನು ಒಪ್ಪಿಕೊಳ್ಳಬಹುದಿತ್ತು ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಹಾಗಿದ್ದರೂ ತೃಣಮೂಲ ಕಾಂಗ್ರೆಸ್, ಸಿನ್ಹಾ ಅವರ ಕೈಬಿಟ್ಟಿಲ್ಲ. ಪಶ್ಚಿಮ ಬಂಗಾಳದಲ್ಲಿಯೂ ಆದಿವಾಸಿ ಜನಸಂಖ್ಯೆ ಗಣನೀಯವಾಗಿಯೇ ಇದೆ. ಕಾಶ್ಮೀರದಲ್ಲಿ ಈಗ ಇರುವುದು ನ್ಯಾಷನಲ್ ಕಾನ್ಫರೆನ್ಸ್‌ನ ಮೂವರು ಸಂಸದರ ಮತಗಳು ಮಾತ್ರ. ಈ ಮತಗಳ ಮೌಲ್ಯ 2,100. ಹಾಗಿದ್ದರೂ ಕಾಶ್ಮೀರದ ಜನರೊಂದಿಗೆ ತಾವು ಇದ್ದೇವೆ ಎಂಬುದನ್ನು ತೋರಿಸಿಕೊಳ್ಳುವುದಕ್ಕಾಗಿ ಸಿನ್ಹಾ ಅವರು ಶ್ರೀನಗರಕ್ಕೂ ಭೇಟಿ ಕೊಟ್ಟಿದ್ದಾರೆ. ಇದು ಸಾಂಕೇತಿಕವಾದ ಭೇಟಿಯಾದರೂ ರಾಜಕೀಯವಾಗಿ ಮಹತ್ವದ್ದು ಎಂದು ಸಿನ್ಹಾ ಹೇಳಿದ್ದಾರೆ. ಸಿನ್ಹಾ ಅವರು ತಮ್ಮ ತವರು ರಾಜ್ಯ ಜಾರ್ಖಂಡ್‌ನಿಂದ ಪ್ರಚಾರ ಆರಂಭಿಸಲಿಲ್ಲ. ಅವರು ಜಾರ್ಖಂಡ್‌ನಿಂದ ಪ್ರಚಾರ ಆರಂಭಿಸಬೇಕು ಎಂದೇ ನಿರ್ಧಾರವಾಗಿತ್ತು. ಆದರೆ, ಜೆಎಂಎಂ ಬೆಂಬಲ ಬದಲಾಯಿಸಿದ್ದರಿಂದಾಗಿ ಸಿನ್ಹಾ ಅವರು ಜಾರ್ಖಂಡ್‌ನಿಂದ ಪ್ರಚಾರ ಆರಂಭಿಸಲಿಲ್ಲ. ಅವರು ಕೋಲ್ಕತ್ತಕ್ಕೂ ಭೇಟಿ ಕೊಡಲಿಲ್ಲ. ಈ ಭೇಟಿಯು ಮಮತಾ ಅವರ ಮತಬ್ಯಾಂಕ್‌ಗೆ ಹಾನಿ ಮಾಡಬಹುದು ಎಂಬುದೇ ಇದಕ್ಕೆ ಕಾರಣ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಸ್ಪರ್ಧಿಸಬೇಕು ಎಂಬುದು ವಿರೋಧ ಪಕ್ಷಗಳ ಇಚ್ಛೆ ಆಗಿತ್ತು. ಪವಾರ್ ಸ್ಪರ್ಧಿಸಿದ್ದರೆ, ಮೋದಿ ಇಕ್ಕಟ್ಟಿಗೆ ಸಿಲುಕುತ್ತಿದ್ದರು. ಆದರೆ, ಪವಾರ್ ಸ್ಪರ್ಧೆಗೆ ಒಪ್ಪಲಿಲ್ಲ. ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಅವರು ಹಿಂದೇಟು ಹಾಕಿದರು. ಮಹಾತ್ಮ ಗಾಂಧಿ ಅವರ ಮೊಮ್ಮಗ, ಮಾಜಿ ರಾಜ್ಯಪಾಲ ಗೋಪಾಲಕೃಷ್ಣ ಗಾಂಧಿ ಅವರೂ ಕಣಕ್ಕೆ ಇಳಿಯಲು ತಯಾರಾಗಲಿಲ್ಲ.

ಚುನಾವಣೆಯನ್ನು 'ಗಾಂಧಿ ವಿರುದ್ಧ ಗೋಡ್ಸೆ' ಎಂಬಂತೆ ಬಿಂಬಿಸಲು ವಿರೋಧ ಪಕ್ಷಗಳು ಯೋಚಿಸಿದ್ದವು. ಅದು ಸಾಧ್ಯವಾಗಲಿಲ್ಲ. ಬಿಜೆಪಿ ಸರ್ಕಾರದಲ್ಲಿ ಈ ಹಿಂದೆ ಸಚಿವರಾಗಿದ್ದ ಸಿನ್ಹಾ ಅವರನ್ನು ಆಯ್ಕೆ ಮಾಡಬೇಕಾಯಿತು. ಮೋದಿ ಅವರು ಪ್ರಧಾನಿ ಆಗಬೇಕು ಎಂಬುದನ್ನು ಸಿನ್ಹಾ 2014ರಲ್ಲಿ ಬೆಂಬಲಿಸಿದ್ದರು. ಬಳಿಕ, ಅವರಿಗೆ ಲೋಕಸಭೆಗೆ ಸ್ಪರ್ಧಿಸಲು ಟಿಕೆಟ್ ನಿರಾಕರಿಸಲಾಯಿತು. ಅವರು ಮೋದಿ ಟೀಕಾಕಾರರಾಗಿ ಬದಲಾದರು. ಹಲವು ನಾಯಕರು ಸ್ಪರ್ಧಿಸಲು ಹಿಂದೇಟು ಹಾಕಿದ್ದೇ ವಿರೋಧ ಪಕ್ಷಗಳಿಗೆ ದೊಡ್ಡ ಹಿನ್ನಡೆ ಆಯಿತು. ವಿರೋಧ ಪಕ್ಷಗಳಲ್ಲಿ ಅಭ್ಯರ್ಥಿಗಳೇ ಇಲ್ಲ ಎಂಬುದು ಬಯಲಾಯಿತು. ಸಿನ್ಹಾ ಅವರು 2018ರಿಂದಲೇ ಮೋದಿಯ ಟೀಕಾಕಾರ ಎಂಬುದನ್ನು ದೊಡ್ಡದಾಗಿ ಬಿಂಬಿಸಿ, ಅವರ ಅಭ್ಯರ್ಥಿತನಕ್ಕೆ ಹೆಚ್ಚಿನ ಘನತೆ ತರಲು ವಿರೋಧ ಪಕ್ಷಗಳು ಯತ್ನಿಸಿವೆ. ಪ್ರಚಾರದ ಸಂದರ್ಭದಲ್ಲಿ, ಸಿನ್ಹಾ ಅವರು ಮೋದಿ ನೇತೃತ್ವದ ಸರ್ಕಾರದ ಆಳ್ವಿಕೆಯ 'ದೋಷಗಳನ್ನು' ಎತ್ತಿ ತೋರಿಸಿದ್ದಾರೆ.

ಸೋಲು ಖಚಿತವಾಗಿದ್ದರೂ ವಿರೋಧ ಪಕ್ಷಗಳ ಹೋರಾಟಕ್ಕೆ ದೊಡ್ಡ ಮಟ್ಟದ ವಿಶ್ವಾಸಾರ್ಹತೆಯೂ ಉಳಿಯಲಿಲ್ಲ. ವಿರೋಧ ಪಕ್ಷಗಳ ನಡುವೆ ಇರುವ ಒಡಕು ಮತ್ತು ವಿರೋಧಾಭಾಸಗಳು ಇದಕ್ಕೆ ಕಾರಣ. ಕಾಂಗ್ರೆಸ್‌ನ ಸ್ಥಾನ ಏನು ಎಂಬುದನ್ನು ತೋರಿಸಬೇಕು ಎಂಬುದು ಮಮತಾ ಬ್ಯಾನರ್ಜಿ ಅವರ ಬಯಕೆಯಾಗಿತ್ತು. ಕಾಂಗ್ರೆಸ್ ಜತೆಗೆ ವೇದಿಕೆ ಹಂಚಿಕೊಳ್ಳಲು ಟಿಆರ್‌ಎಸ್‌ಗೆ ಮನಸ್ಸಿಲ್ಲ. ಎಎಪಿ, ಅಳೆದೂ ಸುರಿದೂ ಕೊನೆ ಕ್ಷಣದಲ್ಲಿ ಬೆಂಬಲ ಘೋಷಿಸಿತು.


ಸಜಿತ್ ಕುಮಾರ್



ರಾಷ್ಟ್ರಪತಿ ಭವನಕ್ಕೆ ಪಯಣ

ಜುಲೈ 18 ಮತದಾನದ ದಿನಾಂಕ
ಜುಲೈ 21 ಮತ ಎಣಿಕೆ ದಿನಾಂಕ
94 ನಾಮಪತ್ರ ಸಲ್ಲಿಸಿದವರು
92 ನಾಮಪತ್ರ ತಿರಸ್ಕೃತಗೊಂಡವರು

2022: ಮತದಾರರು ಯಾರು?

4,809 ಮತ ಚಲಾಯಿಸಲಿರುವ ಒಟ್ಟು ಜನಪ್ರತಿನಿಧಿಗಳ ಸಂಖ್ಯೆ



87 ಮತಗಳು ಕಡಿಮೆ

2017	4,896
2022	4,809

● ಜಮ್ಮು ಕಾಶ್ಮೀರ ವಿಧಾನಸಭೆ ಅಸ್ತಿತ್ವದಲ್ಲಿಲ್ಲದ ಕಾರಣ, 2022ರ ರಾಷ್ಟ್ರಪತಿ ಚುನಾವಣೆಯಲ್ಲಿ 87 ಸದಸ್ಯರ ಮತಗಳು ಕಡಿಮೆ ಆಗಲಿವೆ

ಜನಪ್ರತಿನಿಧಿಗಳ ಮತಮೌಲ್ಯ

ಸಂಸದರ ಮತಮೌಲ್ಯ	5,43,200
ಶಾಸಕರ ಮತಮೌಲ್ಯ	5,43,231

10,86,431 ಒಟ್ಟು ಸದಸ್ಯರ ಮತಮೌಲ್ಯ

2017 10.98 ಲಕ್ಷ
2022 10.86 ಲಕ್ಷ

ನಿಮಗಿದು ಗೊತ್ತೇ...

1967 17 ಅಭ್ಯರ್ಥಿಗಳು ಕಣದಲ್ಲಿದ್ದರು. ಇದು ಈವರೆಗಿನ ಅತಿಹೆಚ್ಚು ಅಭ್ಯರ್ಥಿಗಳ ಸಂಖ್ಯೆ. ರಾಷ್ಟ್ರಪತಿಯಾಗಿ ಆಯ್ಕೆಯಾದ ಜಾಕಿರ್ ಹುಸೇನ್ ಅವರ ಎದುರಾಳಿಗಳಲ್ಲಿ 9 ಅಭ್ಯರ್ಥಿಗಳು ಶೂನ್ಯ ಮತ ಪಡೆದಿದ್ದರು

1969 15 ಅಭ್ಯರ್ಥಿಗಳು ಕಣದಲ್ಲಿದ್ದರು. ಇದು ಎರಡನೇ ಅತಿಹೆಚ್ಚು ಅಭ್ಯರ್ಥಿಗಳ ಸಂಖ್ಯೆ. ವಿ.ವಿ. ಗಿರಿ ಅವರು ಚುನಾಯಿತರಾದರು. ಇವರ ಎದುರು ಸ್ಪರ್ಧಿಸಿದ್ದ ಐವರು ಶೂನ್ಯ ಸಂಪಾದಿಸಿದರು. ಖುಬಿ ರಾಮ್ ಎಂಬ ಅಭ್ಯರ್ಥಿ 94 ಮತಗಳನ್ನು ಗಳಿಸಿದ್ದರು. ಸೊನ್ನೆ ಗಳಿಸಿದವರನ್ನು ಹೊರತುಪಡಿಸಿದರೆ, ಇದು ಈವರೆಗಿನ ಅತಿಕಡಿಮೆ ಮತಗಳಿಕೆ ಎಂಬುದಾಗಿ ದಾಖಲಾಗಿದೆ

1977 ಅವಿರೋಧವಾಗಿ ಆಯ್ಕೆಯಾದ ಏಕೈಕ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ

1997 ಕೆ.ಆರ್. ನಾರಾಯಣನ್ ಅವರು ರಾಷ್ಟ್ರಪತಿ ಚುನಾವಣೆಯಲ್ಲಿ ಅತಿಹೆಚ್ಚು ಮತಗಳನ್ನು (9,56,290) ಪಡೆದ ಶ್ರೇಯ ಹೊಂದಿದ್ದಾರೆ

2007 ಮೊದಲ ಮಹಿಳಾ ರಾಷ್ಟ್ರಪತಿಯಾಗಿ ಪ್ರತಿಭಾ ಪಾಟೀಲ್ ಆಯ್ಕೆ

2017 ಮೀರಾ ಕುಮಾರ್ ಅವರು 3,67,314 ಮತಗಳನ್ನು ಪಡೆದಿದ್ದರು. 1952ರಿಂದ ಪರಿಗಣಿಸಿದರೆ, ಸೋತ ಅಭ್ಯರ್ಥಿಯೊಬ್ಬರು ಗಳಿಸಿದ ಅತ್ಯಧಿಕ ಮತಗಳಿವು

● 1952ರಿಂದ ಇಲ್ಲಿಯವರೆಗೆ 67 ಅಭ್ಯರ್ಥಿಗಳು ರಾಷ್ಟ್ರಪತಿ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಇವರಲ್ಲಿ ಮಹಿಳೆಯರ ಸಂಖ್ಯೆ 7 ಮಾತ್ರ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 175

ದಹನವಾದ ಸತೀದೇವಿ

'ಎಲ್ಲೈ ನಾರದ, ದಕ್ಷಾದಿಗಳನ್ನು ನಿಂದಿಸಿದ ಸತಿಯು, ದಕ್ಷನಿಂದ ಜನಿಸಿದ ತನ್ನ ದೇಹವನ್ನ ತ್ಯಜಿಸಲು ನಿರ್ಧರಿಸಿದಳು. ಯಜ್ಞಶಾಲೆಯ ಉತ್ತರದಿಕ್ಕಿನಲ್ಲಿ ಪದ್ಮಾಸನ ಹಾಕಿ ಶಾಂತವಾಗಿ ಕುಳಿತಳು. ಜಲದಿಂದ ದೇಹಕ್ಕೆ ಆಚಮನಮಾಡಿ ಪರಿಶುದ್ಧಳಾದಳು. ಕಣ್ಣುಗಳನ್ನು ಮುಚ್ಚಿ ಪತಿಯಾದ ಶಿವನನ್ನು ಸ್ಮರಿಸಿ ಯೋಗಸಮಾಧಿಯಲ್ಲಿ ಧ್ಯಾನನಿರತಳಾದಳು. ಸತೀದೇವಿಯು ಪ್ರಾಣ ಮತ್ತು ಅಪಾನ ಎಂಬ ಎರಡು ಪ್ರಾಣವಾಯುಗಳನ್ನು ಸಮಾನಗತಿಗೆ ತಂದಳು. ಈ ಉದಾನವಾಯುವನ್ನು ಹೊಕ್ಕಳಿನ ಮಧ್ಯದಿಂದ ಮೇಲಕ್ಕೆ ತಂದು ಹೃದಯದಲ್ಲಿ ಸ್ಥಾಪಿಸಿದಳು. ಮತ್ತೆ ಉದಾನವಾಯುವನ್ನು ಹೃದಯದಿಂದ ಕಂಠಕ್ಕೇರಿಸಿ, ಹುಬ್ಬುಗಳ ನಡುವೆ ತಂದಳು.

'ಸತೀದೇವಿಯು ಯೋಗಧ್ಯಾನದಲ್ಲಿ ಶಂಕರನ ಚರಣಗಳನ್ನು ಏಕದೃಷ್ಟಿಯಿಂದ ಚಿಂತಿಸುತ್ತಾ ಶಿವನನ್ನು ಸಾಕ್ಷಾತ್ಕರಿಸಿಕೊಂಡಳು. ಯೋಗಮಾರ್ಗದಿಂದ ಪ್ರಾಣವಾಯುಗಳನ್ನು ಬಂಧಿಸಿದಳು. ದಕ್ಷನ ಮೇಲಿನ ಕೋಪದಿಂದ ಹಲ್ಲು ಕಟಕಟಿಸುತ್ತಾ, ತನ್ನ ಶರೀರದಲ್ಲಿ ಜಿಹಾಸೆಯನ್ನು ಹೊಂದಿದಳು. ಇಂಥ ಯೋಗಕರ್ಮದಿಂದ ಅವಳ ಶರೀರವು ಕಲ್ಮಷರಹಿತವಾಗಿ ಪವಿತ್ರವಾಯಿತು. ಮತ್ತೆ ಯೋಗಮಾರ್ಗವನ್ನನುಸರಿಸಿದ ಸತಿಯು, ಸ್ವ-ಇಚ್ಛೆಯಿಂದ ತನ್ನ ಶರೀರವನ್ನು ದಹಿಸಿ ಭಸ್ಮವಾಗಿಸಿದಳು.

'ಹೀಗೆ ಸತಿಯು ಶರೀರವನ್ನು ತನ್ನತಾನು ದಹಿಸಿದುದನ್ನು ನೋಡಿ ಆಕಾಶಚಾರಿಗಳಾದ ದೇವತೆಗಳು ಮತ್ತು ಭೂಲೋಕದ ಮನುಷ್ಯರು ದುಃಖ-ಆತಂಕದಿಂದ ಹಾಹಾಕಾರ ಮಾಡಿದರು. 'ಅಯ್ಯೋ! ಮೂರ್ಖ ದಕ್ಷನ ಅವಮಾನದಿಂದಲೇ ಮಾನವತಿ ಆದಂತಹ ಸತೀದೇವಿ ಪ್ರಾಣ ತ್ಯಜಿಸಿದಳು. ಅಸೂಯಾಪರನಾದ ದಕ್ಷ ತಾನು ಬ್ರಹ್ಮನ ಮಗನೆಂಬ ಗರ್ವದಿಂದ ಮಗಳು ಸಾಯುವಂತೆ ಮಾಡಿದ. ಇದರ ಫಲವನ್ನು ಶೀಘ್ರವೇ ಪಡೆಯುವನು' ಎಂದು ಜನರು ಹೇಳಿದರೆ, ಸತೀದೇವಿಯ ಜೊತೆಗೆ ಬಂದ ಮಹಾಬಲಶಾಲಿಗಳಾದ ಹತ್ತು ಸಾವಿರ ಶಿವಗಣಗಳು ದಕ್ಷನನ್ನು ಗಟ್ಟಿಯಾಗಿ ನಿಂದಿಸತೊಡಗಿದವು.

'ಪ್ರಮಥಗಣಗಳು ಕೋಪದಿಂದ ದಕ್ಷಯಜ್ಞವನ್ನು ನಾಶ ಮಾಡಲು ಆಯುಧಗಳನ್ನು ಹಿಡಿದುನಿಂತರು. ಅವರು ಪ್ರಯೋಗಿಸಿದ ಆಯುಧಗಳ ಶಬ್ದದಿಂದ ದಶದಿಕ್ಕುಗಳು ತುಂಬಿಹೋದವು. ಅಲ್ಲಿ ನೆರೆದಿದ್ದ ದೇವತೆಗಳು, ಮುನಿಗಳು ಭಯಗೊಂಡು ಹಾಹಾಕಾರ ಮಾಡಿದರು. ಕೆಲವು ಗಣಗಳಂತೂ ಸತಿಯ ಪ್ರಾಣತ್ಯಾಗ ಸಹಿಸಲಾಗದೆ ತಮ್ಮ ಶಿರಸ್ಸುಗಳನ್ನೇ ಕತ್ತರಿಸಿಕೊಂಡು ಪ್ರಾಣಬಿಟ್ಟವು. ಹೀಗೆ ಇಪತ್ತುಸಾವಿರಕ್ಕೂ ಹೆಚ್ಚು ಗಣಗಳು ಸತಿಯೊಡನೆ ನಾಶವಾದವು. ಮತ್ತೆ ಕೆಲವು ಗಣಗಳು ಕ್ರೋಧದಿಂದ ದಕ್ಷಬ್ರಹ್ಮನನ್ನು ನಾಶಮಾಡಲು ಆಯುಧಗಳನ್ನು ಹಿಡಿದು ಮುನ್ನುಗಿದವು. ಗಣಗಳು ದಕ್ಷನನ್ನು ಸಂಹರಿಸಲು ವೇಗವಾಗಿ ಬರುತ್ತಿರುವುದನ್ನು ನೋಡಿದ ಅಧ್ವರ್ಯುವಾದ ಭೃಗುಮುನಿಯು ಯಜ್ಞಶತ್ರುಗಳನ್ನು ನಾಶ ಮಾಡುವ ಯಜುರ್ವೇದವಾಕ್ಯದಿಂದ ಹೋಮಮಾಡಿದ. ಕೂಡಲೇ ಅಗ್ನಿಯಿಂದ ಋಭವರೆಂಬ ಬಲಶಾಲಿಗಳಾದಂತಹ ಸಹಸ್ರಾರು ರಾಕ್ಷಸರು ಜನಿಸಿದರು. ಬೆಂಕಿಕೊಳ್ಳಿಗಳನ್ನು ಹಿಡಿದ ರಾಕ್ಷಸರು ಪ್ರಮಥಗಣಗಳೊಡನೆ ಭಯಂಕರವಾದ ಯುದ್ಧ ಮಾಡಿದರು. ಬ್ರಹ್ಮತೇಜಸ್ಸಿನಿಂದ ಜನಿಸಿದ ಋಭುರಾಕ್ಷಸರು ಪ್ರಮಥಗಳ ಗಣಗಳ ಮೇಲೆ ಉಗ್ರ ಪ್ರಹಾರ ಮಾಡಿದರು. ಇದನ್ನು ಎದುರಿಸಲು ಅಶಕ್ತರಾದ ಕೆಲವು ಗಣಗಳು ನಾಶವಾದರೆ, ಕೆಲವು ಗಣಗಳು ಪಲಾಯನ ಮಾಡಿದವು.

'ಇದೆಲ್ಲವನ್ನು ನೋಡಿದ ಸನಕ ಮುಂತಾದ ಮುನಿಗಳು, ವಿಶ್ವೇದೇವ, ಇಂದ್ರ, ಅಶ್ವಿನೀ ಮತ್ತಿತರ ದೇವತೆಗಳು, ಲೋಕಪಾಲಕರೆಲ್ಲರೂ ಭಯದಿಂದ ಏನೂ ಮಾಡಲಾಗದೆ ಮೂಕಪ್ರೇಕ್ಷಕರಾಗಿದ್ದರು. ಕೆಲವರು ಪ್ರಭುವಾದ ವಿಷ್ಣುವಿನ ಬಳಿಗೆ ಬಂದು, ಯಾಗಕ್ಕೆ ವಿಘ್ನ ಬರದಂತೆ ಕಾಯಬೇಕೆಂದು ಕೇಳಿಕೊಂಡರು. ಆದರೆ ಮುಂದೆ ಯಜ್ಞಕ್ಕೆ ಆಗುವ ಮಹಾವಿಘ್ನವನ್ನು ಊಹಿಸಿ ತಟಸ್ಥನಾಗಿ ಉಳಿದ. ವಿಷ್ಣು ಎಣಿಕೆ ಸುಳ್ಳಾಗಲಿಲ್ಲ' ಎಂದು ಬ್ರಹ್ಮ ನಾರದನಿಗೆ ಹೇಳುವಲ್ಲಿಗೆ ಸತೀಖಂಡದ ಮೂವತ್ತನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬ ಆಜಾನ್ ಪಠಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಾಲಕ ವೇದಿಕೆಯ ಮೇಲೆ ನಿಂತು ಆಜಾನ್ ಪಠಿಸುತ್ತಿದ್ದಾನೆ ಮತ್ತು ಶಾಲೆಯ ಇತರ ವಿದ್ಯಾರ್ಥಿಗಳು, ಶಿಕ್ಷಕರು ವೇದಿಕೆಯ ಕೆಳಗೆ ಸಾಲಾಗಿ ನಿಂತಿದ್ದಾರೆ. ಜಾರ್ಖಂಡ್‌ನ ಗ್ರಾಮವೊಂದರ ಶಾಲೆಯ ವಿಡಿಯೊ ಇದಾಗಿದೆ. ಗ್ರಾಮದಲ್ಲಿ ಮುಸ್ಲಿಮರ ಜನಸಂಖ್ಯೆಯೇ ಹೆಚ್ಚು ಇದೆ. ಅದಕ್ಕಾಗಿ ಹಿಂದೂ ಮಕ್ಕಳೂ ಮುಸ್ಲಿಮರ ಪ್ರಾರ್ಥನೆ ಹೇಳುವುದನ್ನು ಕಡ್ಡಾಯಗೊಳಿಸಲಾಗಿದೆ. ಇದು ಕಾಂಗ್ರೆಸ್ ಸರ್ಕಾರವಿರುವ ಜಾರ್ಖಂಡ್‌ನ ಪರಿಸ್ಥಿತಿ. ಇಸ್ಲಾಮಿಕ್ ಸ್ಟೇಟ್ ಆಗುವ ದಿಸೆಯಲ್ಲಿ ಇದು ಮೊದಲ ಹೆಜ್ಜೆ ಎಂಬ ವಿವರಣೆಯನ್ನು ಈ ವಿಡಿಯೊ ಜೊತೆ ನೀಡಲಾಗಿದೆ.

ವಿಡಿಯೊ ಜೊತೆ ನೀಡಲಾಗಿರುವ ಮಾಹಿತಿ ಸುಳ್ಳು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಕೆಲ ಮಾಧ್ಯಮಗಳು ಈ ಘಟನೆ ಕುರಿತು ಜೂನ್ 6ರಂದು ವರದಿ ಪ್ರಕಟಿಸಿವೆ. ಅಸ್ಸಾಂನ ಜೋರ್ಹಾಟ್‌ನ ಹೇಮಾಲಯ್ ಜ್ಞಾನ್ ಬಿಕಾಶ್ ಪ್ರಾಥಮಿಕ ಶಾಲೆಯಲ್ಲಿ ಬೆಳಗಿನ ಪ್ರಾರ್ಥನೆ ವೇಳೆ ವಿದ್ಯಾರ್ಥಿಯೊಬ್ಬ ವೇದಿಕೆ ಏರಿ ಆಜಾನ್ ಪಠಿಸಿದ್ದಾನೆ. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾ ಶಿಕ್ಷಣ ಅಧಿಕಾರಿಯು ಶಾಲೆಯ ಪ್ರಾಂಶುಪಾಲರಿಗೆ ಶೋಕಾಸ್ ನೋಟಿಸ್ ನೀಡಿದ್ದರು. ಘಟನೆ ಕುರಿತು ಪ್ರತಿಕ್ರಿಯಿಸಿದ್ದ ಶಾಲೆಯ ಶಿಕ್ಷಕರೊಬ್ಬರು, 'ಬಾಲಕ ವೇದಿಕೆ ಏರಿ ಆಜಾನ್ ಪಠಿಸುತ್ತಾನೆ ಎಂದು ನಮಗೆ ಮೊದಲೇ ತಿಳಿದಿರಲಿಲ್ಲ' ಎಂದಿದ್ದರು ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ತೀರ್ಮಾನವಾದ ಲೆಕ್ಕ

ಒಂದಗಳು ಹೆಚ್ಚಿರದು, ಒಂದಗಳು ಕೊರೆಯಿರದು|
ತಿಂದು ನಿನ್ನನ್ನ ಋಣ ತೀರುತಲೆ ಪಯಣ ||
ಹಿಂದಾಗದೊಂದು ಚಣ, ಮುಂದಕು ಕಾದಿರದು |
ಸಂದ ಲೆಕ್ಕವದೆಲ್ಲ – ಮಂಕುತಿಮ್ಮ || 673 ||

ಪದ-ಅರ್ಥ: ಒಂದಗಳು = ಒಂದು + ಅಗುಳು, ಕೊರೆಯಿರದು = ಕೊರೆ(ಕಡಿಮೆ-) + ಇರದು, ನಿನ್ನನ್ನ = ನಿನ್ನ + ಅನ್ನ, ಹಿಂದಾಗದೊಂದು = ಹಿಂದೆ + ಆಗದು- + ಒಂದು, ಚಣ = ಕ್ಷಣ, ಸಂದ = ತೀರ್ಮಾನವಾದ, ಲೆಕ್ಕವದೆಲ್ಲ = ಲೆಕ್ಕವು + ಅದೆಲ್ಲ.

ವಾಚ್ಯಾರ್ಥ: ಒಂದು ಅಗುಳು ಹೆಚ್ಚಾಗಲಾರದು, ಒಂದು ಅಗುಳು ಕಡಿಮೆಯಾಗದು. ನಮ್ಮ ಅನ್ನದ ಋಣ ಮುಗಿದ ಕ್ಷಣವೇ ಪ್ರಯಾಣ. ಒಂದು ಕ್ಷಣವೂ ಹಿಂದೆ, ಮುಂದೆ ಆಗುವುದಿಲ್ಲ. ಅದೆಲ್ಲ ತೀರ್ಮಾನವಾದ ಲೆಕ್ಕ.

ವಿವರಣೆ: ಯಮರಾಜ ವಿಷ್ಣುವನ್ನು ಕಾಣಲು ವೈಕುಂಠಕ್ಕೆ ಬಂದ. ದ್ವಾರದ ಬಲಭಾಗದಲ್ಲಿ ಗರುಡ ಕುಳಿತಿದ್ದ. ಯಮ ಅಕಸ್ಮಾತ್ತಾಗಿ ಬಲಕ್ಕೆ ತಿರುಗಿ ನೋಡಿದಾಗ ಪುಟ್ಟ ಗುಬ್ಬಚ್ಚಿಯೊಂದು ಕುಳಿತದ್ದನ್ನು ಕಂಡ. ಆಶ್ಚರ್ಯದಿಂದ ಹುಬ್ಬೇರಿಸಿ, ಭುಜ ಕುಣಿಸಿ ನೋಡಿದಾಗ ಪುಟ್ಟ ಗುಬ್ಬಚ್ಚಿಯೊಂದು ಕುಳಿತದ್ದನ್ನು ಕಂಡ. ಆಶ್ಚರ್ಯದಿಂದ ಹುಬ್ಬೇರಿಸಿ, ಭುಜ ಕುಣಿಸಿ ಒಳಗೆ ನಡೆದ. ಗುಬ್ಬಚ್ಚಿಗೆ ಗಾಬರಿ. ತನ್ನ ಆಯುಷ್ಯ ಮುಗಿಯಿತು ಎಂದು ಅಳತೊಡಗಿತು. ಗರುಡ ಮಹಾನ್ ಬಲಶಾಲಿಯಾದರೂ ಮೂಲತಃ ಪಕ್ಷಿ ತಾನೇ? ಜಾತಿ ಪ್ರೇಮ ಉಕ್ಕಿತು. ಯಾಕೆ ಅಳುತ್ತೀ ಎಂದು ಗುಬ್ಬಚ್ಚಿಯನ್ನು ಕೇಳಿದ. ಗುಬ್ಬಚ್ಚಿ ಹೇಳಿತು, "ಯಮರಾಜ ನನ್ನನ್ನು ನೋಡಿದ ರೀತಿ, ನನ್ನ ಆಯುಸ್ಸು ಮುಗಿಯಿತು ಎಂದು ತೋರುತ್ತದೆ. ಕ್ಷಣದಲ್ಲಿ ನಾನೂ ಇಲ್ಲೇ ಸತ್ತು ಹೋಗುತ್ತೇನೆ". ಗರುಡ ಹೇಳಿದ, "ಭಯಬೇಡ. ನೀನು ಯಮನ ಕೈಗೆ ಸಿಗದಂತೆ ಪಾರು ಮಾಡುತ್ತೇನೆ ಬಾ". ಗುಬ್ಬಚ್ಚಿಯನ್ನು ನಯವಾಗಿ ಚುಂಚಿನಲ್ಲಿ ಹಿಡಿದು ಹಾರಿದ. ಅವನ ಪ್ರಯಾಣ ಮನೋವೇಗದಲ್ಲಿ. ಕ್ಷಣಮಾತ್ರದಲ್ಲಿ ಆತ ಗಂಧಮಾದನ ಪರ್ವತದ ಅತ್ಯುನ್ನತ ಶಿಖರದ ಮೇಲಿದ್ದ. ಗುಬ್ಬಚ್ಚಿಯನ್ನು ಅಲ್ಲಿ ಇಳಿಸಿದ. "ನೀನು ಇಲ್ಲಿರು, ಯಮ ಕೂಡ ಇಲ್ಲಿಗೆ ಬರಲಾರ" ಎಂದು ಹೇಳಿ ಮರಳಿ ಬಂದು ತನ್ನ ಸ್ಥಾನದಲ್ಲಿ ಕುಳಿತ.

ಸ್ವಲ್ಪ ಹೊತ್ತಿಗೆ ಯಮರಾಜ ಮರಳಿ ಬಂದ. ಗುಬ್ಬಚ್ಚಿ ಅಲ್ಲಿ ಇಲ್ಲದ್ದನ್ನು ಕಂಡು ಕಣ್ಣುಮುಚ್ಚಿ ನಕ್ಕ. ಗರುಡ ಕೇಳಿದ, "ನಿನಗೆ ನಿನ್ನ ಬಗ್ಗೆ ಬಹಳ ಹೆಮ್ಮೆ ಅಲ್ಲವೆ? ಪಾಪ! ಆ ಗುಬ್ಬಚ್ಚಿಯ ಪ್ರಾಣವನ್ನು ಇಲ್ಲಿ ತೆಗೆಯಬೇಕೆಂದಿದ್ದೆ ನೀನು. ಈಗ ನಿನಗೆ ಅದು ಸಿಗಲಾರದು", "ಯಾಕೆ? ಅದನ್ನು ಎಲ್ಲಿಗೆ ಒಯ್ದೆ?" ಕೇಳಿದ ಯಮ, "ನಿಮ್ಮ ದೂತರು ತಲುಪದಂತೆ ಗಂಧಮಾದನ ಪರ್ವತದ ಶಿಖರದ ಮೇಲೆ ಇರಿಸಿದ್ದೇನೆ" ಎಂದ ಗರುಡ ಗರ್ವದಿಂದ. ಯಮ, "ಧನ್ಯವಾದಗಳು. ವಿಧಿಲಿಖಿತದಂತೆ ಅದು ಈ ಕ್ಷಣ ಗಂಧಮಾದನ ಪರ್ವತದ ಅತ್ಯುನ್ನತ ಶಿಖರದ ಮೇಲೆ ಸಾಯಬೇಕಿತ್ತು. ಆ ಪುಟ್ಟ ಪಕ್ಷಿ ನೂರು ವರ್ಷ ಹಾರಿದರೂ ಅದು ತಲುಪುವುದು ಅಸಾಧ್ಯ. ಅದಕ್ಕೇ ಅದನ್ನು ಇಲ್ಲಿ ಕಂಡು ಆಶ್ಚರ್ಯವಾಗಿತ್ತು. ನೀನಲ್ಲದೆ ಅದನ್ನು ಯಾರು ಆ ಮೃತ್ಯುವಿನ ಸ್ಥಳಕ್ಕೆ ಕರೆದೊಯ್ಯಬಹುದಿತ್ತು?". ಬದುಕಿನ ಹುಟ್ಟು ಸಾವುಗಳ ಕ್ಷಣಗಳು ನಿಶ್ಚಿತ. ಒಂದು ಕ್ಷಣವೂ ಆಚೀಚೆ ಆಗುವುದಿಲ್ಲ. ಅದು ವಿಧಿಯ ನಿರ್ಧಾರಿತ ಲೆಕ್ಕ. ಅದಕ್ಕೇ ಕಗ್ಗ ಹೇಳುತ್ತದೆ, ನಾನು ಭೂಮಿಯಲ್ಲಿ ಎಷ್ಟು ಕ್ಷಣ ಇರಬೇಕು, ಎಷ್ಟು ಊಟ ಮಾಡಬೇಕು ಎನ್ನುವುದು ಪೂರ್ವನಿರ್ಧಾರಿತ. ಅದರಲ್ಲಿ ಒಂದು ಅಗುಳೂ ಹೆಚ್ಚು ಕಡಿಮೆಯಾಗುವುದಿಲ್ಲ. ಅನ್ನದ ಋಣ ಮುಗಿಯುತ್ತಲೇ ಪ್ರಯಾಣ. ಸುದೈವವೋ, ದುರ್ದೈವವೋ ಮನುಷ್ಯನಿಗೆ ಬದುಕಿನ ಅಂಚುಗಳು ಕಾಣುವುದಿಲ್ಲ. ಆದ್ದರಿಂದ ಅಂಚು ಹತ್ತಿರದಲ್ಲೇ ಇದೆಯೆಂದು ತಿಳಿದು ನೇಮದಿಂದ ಬಾಳುವುದು ಕ್ಷೇಮ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜುಲೈ 18, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಪಂಚಮಿ ಗಂ. 08-56 ನಕ್ಷತ್ರ: ಪೂರ್ವಾಭಾದ್ರಾ ಗಂ. 12-24 ಯೋಗ: ಶೋಭನ ಗಂ. 15-26, ಕರಣ: ತೈತಿಲ ಗಂ. 08-56, ಕರ್ಕಾಟಕ ಮಾಸದ 01 ನೇ ದಿನ.
ರಾಹುಕಾಲ : ಬೆಳಿಗ್ಗೆ 07:30 – 09:00
ಸೂರ್ಯೋದಯ : 06-16 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 18 ಜುಲ್‌ಹಿಜಾನ್
ಅದೃಷ್ಟ ಸಂಖ್ಯೆ : 4, 9

ಮೇಷ : ನಿಮ್ಮ ಶ್ರಮದ ಜೀವನದಿಂದ ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆಯಾಗಲಿದೆ. ಅತಿಥಿಗಳ ಆಗಮನ ಸಂತಸ ತಂದೀತು. ಶಾರೀರಿಕ ಆಯಾಸ ಇತ್ಯಾದಿ ತೋರಿ ಬಂದರೂ ಹಂತಹಂತವಾಗಿ ಪ್ರಗತಿ ಇರುತ್ತದೆ.

ವೃಷಭ : ಸಾಂಸಾರಿಕ ಸಮಸ್ಯೆಗೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿಶ್ವಾಸಿಗಳಿಂದ ಕಷ್ಟ-ನಷ್ಟ ಸಂಭವಿಸಬಹುದು. ವ್ಯಾಪಾರದಲ್ಲಿ ಸ್ವಂತ ತೀರ್ಮಾನದಿಂದ ಮುಂದುವರಿದರೆ ಧನಾದಾಯ ಹೆಚ್ಚಲಿದೆ.

ಮಿಥುನ : ಗುರುಗಳ ಮಾರ್ಗದರ್ಶನದ ಮಹತ್ವ ತಿಳಿಯುವುದು. ಎಲೆಕ್ಟ್ರಾನಿಕ್ ವಸ್ತುಗಳ ಖರೀದಿಗೆ ಇಂದು ಸೂಕ್ತ ದಿನ. ವಾಹನದ ಅನಿವಾರ್ಯತೆ ಹೆಚ್ಚಿರುವುದರಿಂದ ನೂತನವಾದ ವಾಹನ ಖರೀದಿಸುವ ಬಗ್ಗೆ ಗಮನಹರಿಸಿ.

ಕರ್ಕಾಟಕ : ಧಾರ್ಮಿಕ ಕೆಲಸ ಕಾರ್ಯಗಳನ್ನು ಮಾಡುವ ಅವಕಾಶ ಸಿಗುವುದು. ಅದರ ಫಲವಾಗಿ ಪುಣ್ಯ ಸಂಪಾದನೆ ಆಗುತ್ತದೆ. ದಲ್ಲಾಳಿಗಳಿಗೆ ಉತ್ತಮ ಆದಾಯ. ವಿವಾದವಿರುವ ಬಹುತೇಕ ವಿಷಯಗಳು ಇತ್ಯರ್ಥ.

ಸಿಂಹ : ಮೇಲಧಿಕಾರಿಗಳೊಂದಿಗಿನ ಮಾತುಕತೆಯು ಹೆಚ್ಚಿನ ಫಲ ನೀಡಲಿದೆ. ಮಕ್ಕಳ ಜೊತೆ ಸಂತೋಷದಿಂದ ಕಾಲ ಕಳೆಯುವ ದಿಕ್ಕಿನಲ್ಲಿ ಕೆಲ ನಿರ್ಧಾರ ಕೈಗೊಳ್ಳಬೇಕಾಗುವುದು. ವಿಶ್ರಾಂತಿ ಮಾಡಬೇಕಾಗುತ್ತದೆ.

ಕನ್ಯಾ : ಮನಸ್ಸಿಗೆ ಮುದ ತರುವ ಸಂಗತಿಗಳು ಜರುಗಲಿದೆ. ಕಾನೂನು ಕಾಯಿದೆ ವಿಚಾರದಲ್ಲಿ ಹೋರಾಟ ನಡೆಸಿದರೆ ಜಯ ನಿಮ್ಮ ಪಾಲಿಗಿರುವುದು. ಜೀವನದಲ್ಲಿದ್ದ ನಿರುತ್ಸಾಹವನ್ನು ದೂರ ಮಾಡಿಕೊಳ್ಳಿ.

ತುಲಾ : ದೂರದೃಷ್ಟಿ ಇಟ್ಟುಕೊಂಡು ಪ್ರಪಂಚದ ಓಟಕ್ಕೆ ಸರಿಯಾಗಿ ಕಾರ್ಯಪ್ರವೃತ್ತರಾಗಿ. ಲೇವಾದೇವಿ ವ್ಯವಹಾರ ಮಾಡುವವರಿಗೆ ನಷ್ಟ ಸಂಭವಿಸಬಹುದು. ಬ್ಯಾಂಕಿನ ಕೆಲಸಗಾರರು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿ.

ವೃಶ್ಚಿಕ : ಬಹಳ ದಿನದ ಉಳಿತಾಯದ ಹಣವನ್ನು ಸುವ್ಯವಸ್ಥಿತವಾಗಿ ಇರಿಸಲು ಬೇಕಾದ ಮಾರ್ಗವನ್ನು ತಿಳಿದುಕೊಳ್ಳಿ. ನಿತ್ಯವೂ ಸಜ್ಜನರ ಸಂಘದಲ್ಲಿ ನಿಮ್ಮ ಒಡನಾಟ ಇರಲಿ. ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಆಯ್ಕೆಗೊಳ್ಳುವಿರಿ.

ಧನು : ತೋಟ ಮತ್ತು ಎಸ್ಟೇಟ್ ಕೆಲಸಗಾರರಿಗೆ ಉದ್ಯೋಗದಲ್ಲಿ ಭಯ ಹುಟ್ಟುವಂತಹ ಘಟನೆ ಈ ದಿನ ನಡೆಯಬಹುದು. ಜಾಗ್ರತರಾಗಿರಿ. ನಿಮಗಿರುವ ಉತ್ತಮ ದೈವಾನುಗ್ರಹದಿಂದ ಕೆಲಸಗಳೆಲ್ಲವೂ ನಿರಾಳವಾಗಿ ನೆರವೇರುವುದು.

ಮಕರ : ಮಾತುಗಾರರಿಗೆ, ವಾಗ್ಮಿಗಳಿಗೆ, ಬೋಧಕ ವರ್ಗದವರಿಗೆ, ಕಲಾವಿದರಿಗೆ ವೃತ್ತಿಯಲ್ಲಿ ಮುಂಬಡ್ತಿ ದೊರಕಲಿದೆ. ಮಕ್ಕಳಿಗೆ ವಿದೇಶದಲ್ಲಿ ಉನ್ನತ ಶಿಕ್ಷಣ ಕೊಡಿಸಲು ಸಂಘ ಸಂಸ್ಥೆಗಳು ನೆರವಾಗುವುದು.

ಕುಂಭ : ಪೊಲೀಸ್ ಸಿಬ್ಬಂದಿಗೆ ಕಾನೂನಿನ ನಿಯಮಗಳ ಬಗ್ಗೆ ಗಮನವಿರಲಿ. ಸೂಕ್ಷ್ಮವಾಗಿ ಯೋಚಿಸಿ ಅಥವಾ ಮಾರ್ಗದರ್ಶನ ಪಡೆದು ಕಾರ್ಯದಲ್ಲಿ ಮುನ್ನುಗ್ಗಿ. ಉದರವ್ಯಾಧಿಯಂಥ ಸಮಸ್ಯೆ ಎದುರಾಗಬಹುದು.

ಮೀನ : ನಿಮ್ಮ ಸೌಜನ್ಯತೆಯು ನಿಮ್ಮ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರುಗು ನೀಡಲಿದೆ. ಆರ್ಥಿಕ ಕಷ್ಟ ನಿವಾರಣೆಯಾಗಲಿದೆ. ಮಕ್ಕಳ ಮುಂದಿನ ವಿದೇಶಿ ವ್ಯಾಸಂಗಕ್ಕೆ ಹಣದ ವ್ಯವಸ್ಥೆ ಈಗಿಂದಲೇ ಮಾಡುವುದು ಉತ್ತಮ.

ಪದಬಂಧ 5022 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತೊದಲು ಮಾತಲ್ಲ!ಪ್ರತ್ಯುತ್ತರ!(5)
3.ಮೊಸರು ಮಾರುವವನ ನಾಮ! (3)
5.ಇದು ಕನ್ನಡಿಗನ ಟೈಟಲ್!(5)
7.ದಾಖಲೆಗಳ ಕೊನೆಯಲ್ಲಿ ಸೇರಿಸಿರುವ ವಿಶೇಷಾಂಶ(2)
9.ಪ್ರಾತಃಕಾಲದಿಂದ ಸಂಜೆವರೆಗಿನ ಕಾಲ(3)
11.ಕಲಾವಿದನ ಮನೆ ಬಾಗಿಲು(2)
13.ಲೋಹದ ಹಕ್ಕಿಯಲ್ಲಿನ ಪಯಣ(5)
15.ಅವನಿರುವ ಭೂಮಿ!(3)
16.ವರದಿಯನ್ನು ಸಿದ್ಧಪಡಿಸುವವನು(5)

ಮೇಲಿಂದ ಕೆಳಕ್ಕೆ
1.ಬದ್ಧನಾದವನ ಮೇಲೆ ಕಡುಹಗೆತನವೇ?(4)
2.ಈತ ಆನೆನಡೆಸುವವ(3)
4.ಸನಿಹದಲ್ಲೇ ನಡೆಸಿರುವ ಸಿದ್ಧತೆ(3)
6.ಬೈಯ್ಯಲು ಸೂಕ್ತವೆನಿಸಿದ ವಿಸ್ತಾರಜಾಗ(3)
8.ಸುರಾಸುರರ ಬಳಿಯಿರುವ ಜಾನುವಾರು(2)
9.ವನದ ಕೊನೆಗೆ ಮಾಡಿರುವ ಯಜ್ಞ(3)
10.ಸ್ತೋತ್ರರೂಪವಾದ ಪದ್ಯ(2)
12.ಬೆಲೆ ಮೊದಲಿದ್ದಾಗಿನ ಅಗತ್ಯ(4)
13.ಪ್ಲವಂಗ ಸಂವತ್ಸರದಲ್ಲಿ ಉಂಟಾದ ಆಂದೋಳನ!(3)
14.ನರನು ನೋಡುತ್ತಿರುವ ಷಹರು(3)



5021ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಿವೇಕ 3.ತಲೆಗಾಪು 4.ವಿಯೋಗ 5.ಅಪವಾದ 7.ತಿದ್ದುಪಡಿ 9.ಅತಿರೇಕ 11.ಅನುಮತಿ 12.ರಶೀತಿ 14.ಆಪ್ತಮಿತ್ರ 15.ಮಲಯಜ

ಮೇಲಿಂದ ಕೆಳಕ್ಕೆ:
1.ಅಲೆ 2.ಕಲಾವಿದ 3.ತರಗತಿ 6.ಪದ್ಧತಿ 8.ಪರಮ 10.ಕರಪತ್ರ 11.ಅತಿಕ್ರಮ 13.ಬೀಜ

ಸುಡೊಕು 5408

			8		1	9		
	8						3	1
3		1	2		9		5	6
	1	7			8	3		
							8	4
8		3	9				6	
1			7		2	4		3
		8		4			1	
	3		1		5			8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5407 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಸಂಕ್ಷಿಪ್ತ ಸುದ್ದಿ

ಹತ್ಯೆಗೆ ಸಂಚು ಸಂದೇಶ ರವಾನೆ: ವೈದ್ಯನ ಬಂಧನ

ಚಿತ್ರದುರ್ಗ: ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಶಾಸಕರಾದ ಅರವಿಂದ ಲಿಂಬಾವಳಿ, ಗೂಳಿಹಟ್ಟಿ ಡಿ. ಶೇಖರ್, ಎಂ. ಚಂದ್ರಪ್ಪ ಸೇರಿ ಹಲವರ ಹತ್ಯೆಗೆ ಸಂಚು ರೂಪಿಸಲಾಗಿದೆ ಎಂಬ ಅರ್ಥದ ಸಂದೇಶ ಕಳುಹಿಸಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯ ಸತ್ಯಸಾಯಿ ಸರಳ ಸ್ಮಾರಕ ಆಸ್ಪತ್ರೆಯ ವೈದ್ಯ ಡಾ.ತಿಪ್ಪೇರುದ್ರಸ್ವಾಮಿ ಬಂಧಿತ ಆರೋಪಿ.

ಈತ ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) ಆ್ಯಪ್ ಮೂಲಕ ಜುಲೈ 14ರಂದು ಸಂದೇಶ ರವಾನಿಸಿದ್ದರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ರಾಷ್ಟ್ರೀಯ ವಡ್ಡ ಸೇನೆ’ ಹೆಸರಿನ ಸಂಘಟನೆ ಕಟ್ಟಿಕೊಂಡಿರುವ ಆರೋಪಿ, ಜುಲೈ 1ರಂದು ಧಾರವಾಡದಲ್ಲಿ ಸಮಾವೇಶ ನಡೆಸಿದ್ದರು. ನಂತರ ಅವರಿಗೆ ಹಾಗೂ ಕಾರ್ಯಕರ್ತರಿಗೆ ಅಖಿಲ ಕರ್ನಾಟಕ ಭೋವಿ ವಡ್ಡರ ಸಂಘದ ನಾಲ್ವರು ಕರೆ ಮಾಡಿ ಕಿರುಕುಳ ನೀಡಿದ್ದರು ಎಂಬ ಕಾರಣಕ್ಕೆ, ಗಣ್ಯ ವ್ಯಕ್ತಿಗಳ ಹೆಸರನ್ನು ಬಳಸಿಕೊಂಡರೆ ಪ್ರಕರಣಕ್ಕೆ ಮಹತ್ವ ಬರುತ್ತದೆ ಎಂದು ಶ್ರೀಗಳು ಹಾಗೂ ಶಾಸಕರ ಜತೆ ತನ್ನ ಹೆಸರನ್ನೂ ಸೇರಿಸಿ ಹತ್ಯೆಯ ಸಂಚು ರೂಪಿಸಿರುವ ಸಂದೇಶ ಕಳುಹಿಸಿದ್ದಾಗಿ ತಿಳಿದುಬಂದಿದೆ’ ಎಂದು ವಿವರಿಸಿದರು.

‘ಹೊಳಲ್ಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದು, ಆರೋಪಿ ಬಂಧಿಸಿರುವ ವಿಚಾರಣೆ ನಡೆಸುತ್ತಿದ್ದಾರೆ’ ಎಂದು ತಿಳಿಸಿದರು.

ರಾಷ್ಟ್ರಮಟ್ಟದ ಸಂಶೋಧನಾ ಕಮ್ಮಟ ಇಂದಿನಿಂದ

ಶಿರಸಿ: ತಾಲ್ಲೂಕಿನ ಸೋಂದಾದ ದಿಗಂಬರ ಜೈನಮಠದಲ್ಲಿ ಜುಲೈ 18 ರಿಂದ 22ರವರೆಗೆ ರಾಷ್ಟ್ರ ಮಟ್ಟದ ಕನ್ನಡ ಸಾಹಿತ್ಯ ಸಂಶೋಧನಾ ಕಮ್ಮಟವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಆಯೋಜಿಸಿದೆ.

‘ದೇಶದ ವಿವಿಧ ವಿಶ್ವವಿದ್ಯಾಲಯಗಳ ನೂರಕ್ಕೂ ಹೆಚ್ಚು ಸಂಶೋಧನಾರ್ಥಿಗಳು ಪಾಲ್ಗೊಳ್ಳಲಿದ್ದು, ಪ್ರತಿ ಅಭ್ಯರ್ಥಿ ತಲಾ ಒಂದು ಪ್ರಬಂಧ ಮಂಡಿಸಲಿದ್ದಾರೆ’ ಎಂದು ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ಭಾನುವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

‘ಕನ್ನಡ ಸಾಹಿತ್ಯ ಸಂಶೋಧನೆಗಳ ಕುರಿತು 17 ಗೋಷ್ಠಿಗಳು ನಡೆಯಲಿವೆ. ಜೈನಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ, ಹಿರಿಯ ಸಂಶೋಧಕ ಪ್ರೊ.ಎ.ವಿ. ನಾವಡ, ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್ ಪಾಲ್ಗೊಳ್ಳುವರು’ ಎಂದು ತಿಳಿಸಿದರು.

ಕೆಪಿಟಿಸಿಎಲ್: 1,492 ವಿವಿಧ ಹುದ್ದೆಗಳ ನೇಮಕಾತಿ ಪರೀಕ್ಷೆಗೆ 3,97,315 ಅಭ್ಯರ್ಥಿಗಳು ಅರ್ಹ

ಜೆಇ, ಎಇ: 30,933 ಅರ್ಜಿ ತಿರಸ್ಕೃತ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ಕಿರಿಯ ಎಂಜಿನಿಯರ್ (ಜೆಇ), ಸಹಾಯಕ ಎಂಜಿನಿಯರ್ (ಎಇ) ಮತ್ತು ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಗಾಗಿ ನಡೆಯುವ ಪರೀಕ್ಷೆಗೆ ಸಲ್ಲಿಕೆಯಾದ ಒಟ್ಟು ಅರ್ಜಿಗಳಲ್ಲಿ 3.97 ಲಕ್ಷ ಅರ್ಜಿಗಳು ಸ್ವೀಕೃತಗೊಂಡಿವೆ.

ಈ ಪೈಕಿ, ಜೆಇ ಮತ್ತು ಎಇ ಹುದ್ದೆಗಳಿಗೆ ಸಲ್ಲಿಕೆಯಾದ ಅರ್ಜಿಗಳಲ್ಲಿ 30,933 ತಿರಸ್ಕೃತಗೊಂಡಿದ್ದು, ಈ ಪಟ್ಟಿಯನ್ನು ನೇಮಕಾತಿ ಪ್ರಾಧಿಕಾರವಾದ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಕೆಪಿಟಿಸಿಎಲ್ ನೀಡಿದೆ. ಕಿರಿಯ ಸಹಾಯಕ ಹುದ್ದೆಗಳ ಹಾಲ್ ಟಿಕೆಟ್ ಇನ್ನೂ ಬಿಡುಗಡೆ ಆಗದಿರುವುದರಿಂದ ಈ ಹುದ್ದೆಗೆ ಸಲ್ಲಿಕೆಯಾದ ಅರ್ಜಿಗಳಲ್ಲಿ ತಿರಸ್ಕೃತ ಅರ್ಜಿಗಳ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ಪರೀಕ್ಷಾ ಶುಲ್ಕ ಪಾವತಿಸಿದ ಅಭ್ಯರ್ಥಿಗಳ ಅರ್ಜಿಗಳೂ ತಿರಸ್ಕೃತ ಪಟ್ಟಿಯಲ್ಲಿದೆ. ಪ್ರತಿ ಅರ್ಜಿಗೆ ಸಾಮಾನ್ಯ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳು ₹600, ಪರಿಶಿಷ್ಟ ಸಮುದಾಯ ಅಭ್ಯರ್ಥಿಗಳು ₹300 ಶುಲ್ಕ ಪಾವತಿಸಿದ್ದಾರೆ. ಅರ್ಜಿ ತಿರಸ್ಕೃತರಾದವರು ಮತ್ತು ತಾಂತ್ರಿಕ ಕಾರಣಗಳಿಂದ ಹಾಲ್ ಟಿಕೆಟ್ ಡೌನ್ ಲೋಡ್ ಮಾಡಿಕೊಳ್ಳಲು ಸಾಧ್ಯವಾಗದ ಸಾವಿರಾರು ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತರಾಗುವ ಸಂಭವವಿದೆ.

ಜೆಇ ಮತ್ತು ಎಇ ಹುದ್ದೆಗಳ ನೇಮಕಾತಿಗೆ ಕೆಇಎ ಇದೇ 23 ಮತ್ತು 24 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ. ಮೊದಲ ದಿನ 70 ಕೇಂದ್ರಗಳಲ್ಲಿ ಹಾಗೂ ಎರಡನೇ ದಿನ ಬೆಳಿಗ್ಗೆ ಮತ್ತು ಮಧ್ಯಾಹ್ನದ ಅವಧಿಯಲ್ಲಿ 45 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಗೆ ಆಗಸ್ಟ್ 7 ರಂದು ಪರೀಕ್ಷೆ ನಡೆಯಲಿದೆ.

ಜೆಇ ಮತ್ತು ಎಇ ಹುದ್ದೆಗೆ ಅರ್ಜಿ ಸಲ್ಲಿಸಿ, ಸ್ವೀಕೃತವಾದವರ ಹಾಲ್ ಟಿಕೆಟ್‌ಅನ್ನು ಕೆಇಎ ತನ್ನ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದೆ. ಆದರೆ, ಹಾಲ್ ಟಿಕೆಟ್ ಡೌನ್ ಲೋಡ್ ಸಾಧ್ಯ ಆಗುತ್ತಿಲ್ಲ ಎಂದು ಹಲವು ಅಭ್ಯರ್ಥಿಗಳು ದೂರುತ್ತಿದ್ದಾರೆ. ಎಲ್ಲ ದಾಖಲೆಗಳ ಸಹಿತ, ಶುಲ್ಕ ಪಾವತಿಸಿದ್ದರೂ ವೆಬ್‌ಸೈಟ್‌ನಲ್ಲಿ ಹಾಲ್ ಟಿಕೆಟ್ ಕಾಣುತ್ತಿಲ್ಲ ಎಂದು ಅನೇಕರು ಅಳಲು ತೋಡಿಕೊಂಡಿದ್ದಾರೆ.

‘ಹಾಲ್ ಟಿಕೆಟ್ ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವಾಗದ ಎಇ ಮತ್ತು ಜೆಇ ಹುದ್ದೆಯ ಅರ್ಜಿದಾರರು ಅವರವರ ಅರ್ಜಿಯಲ್ಲಿ ನಮೂದಿಸಿದ ಜನ್ಮ ದಿನಾಂಕವನ್ನು ಪರಿಶೀಲಿಸಿ, ಅದೇ ಜನ್ಮ ದಿನಾಂಕವನ್ನು ಹಾಲ್ ಟಿಕೆಟ್ ಡೌನ್‌ಲೋಡ್ ಮಾಡಲು ನಮೂದಿಸಬೇಕು. ಕೆಇಎ ವೆಬ್ ಸೈಟ್‌ನ ಪೋರ್ಟಲ್‌ನಲ್ಲಿ ನೀಡಿದ ತಿರಸ್ಕರಿಸಿದ ಪಟ್ಟಿಯನ್ನು ಪರಿಶೀಲಿಸಿ, ಅರ್ಜಿಯು ಈ ಪಟ್ಟಿಯಲ್ಲಿದ್ದರೆ ಕೆಪಿಟಿಸಿಎಲ್ ಅನ್ನು ಸಂಪರ್ಕಿಸಬೇಕು. ಕೆಪಿಟಿಸಿಎಲ್ ನೀಡಿದ ಅಭ್ಯರ್ಥಿಗಳ ಪಟ್ಟಿ ಆಧರಿಸಿ ನಾವು ಸ್ಪರ್ಧಾತ್ಮಕ ಪರೀಕ್ಷೆಯ ಹಾಲ್ ಟಿಕೆಟ್ ಬಿಡುಗಡೆ ಮಾಡಿದ್ದೇವೆ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದರು.

‘ಜೆಇಮತ್ತು ಎಇ ಹುದ್ದೆ ಆಕಾಂಕ್ಷಿಗಳು ಹಾಲ್ ಟಿಕೆಟ್ ಡೌನ್‌ಲೋಡ್ ಮಾಡುವಾಗ ಸರ್ವರ್‌ನಲ್ಲಿ ಒತ್ತಡ ಉಂಟಾಗಬಾರದೆಂಬ ಕಾರಣಕ್ಕೆ ಕಿರಿಯ ಸಹಾಯಕ ಹುದ್ದೆ ಅರ್ಜಿ ಸಲ್ಲಿಸಿದ ಪರೀಕ್ಷೆ ಬರೆಯಲು ಅರ್ಹರಾದವರ ಹಾಲ್ ಟಿಕೆಟ್ ಇನ್ನೂ ಬಿಡುಗಡೆ ಮಾಡಿಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆ ವೇಳೆ ಪುರುಷ ಮತ್ತು ಮಹಿಳಾ ಅಭ್ಯರ್ಥಿಗೆ ಸೂಚಿಸಿದ್ದ ಕಟ್ಟುನಿಟ್ಟಿನ ವಸ್ತ್ರ ಸಂಹಿತೆಯನ್ನು ಕೆಪಿಟಿಸಿಎಲ್ ನೇಮಕಾತಿಗೂ ಅಳವಡಿಸಲಾಗಿದೆ. ಆ ಮೂಲಕ, ಯಾವುದೇ ಪರೀಕ್ಷಾ ಅಕ್ರಮಗಳಿಗೆ ಅವಕಾಶ ಆಗದಂತೆ, ಅತ್ಯಂತ ಪಾರದರ್ಶಕವಾಗಿ ಈ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸುತ್ತೇವೆ’ ಎಂದರು.

‘ತಾಂತ್ರಿಕ ದೋಷ– ಅವಕಾಶ ಕಲ್ಪಿಸಬೇಕು’

ಪ್ರಜಾವಾಣಿ ವಿಶೇಷ

‘ಕೆಪಿಟಿಸಿಎಲ್ ವೆಬ್‌ಸೈಟ್‌ನಲ್ಲಿ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಿ, ಶುಲ್ಕ ಪಾವತಿಸಿದ ನಂತರ ಅರ್ಜಿಯ ಪ್ರತಿ ಪಡೆಯುವ ವೇಳೆಯಲ್ಲಿ ಮತ್ತೊಮ್ಮೆ ಜಾತಿ ಪ್ರಮಾಣಪತ್ರ ಸಲ್ಲಿಸುವಂತೆ ಕೇಳಿತ್ತು. ಇದನ್ನು ಸಲ್ಲಿಸಲು ಹಲವು ಬಾರಿ ಪ್ರಯತ್ನಿಸಿದರೂ ಅದೇ ಪುನರಾವರ್ತನೆ ಆಗುತ್ತಿತ್ತು. ಈ ತಾಂತ್ರಿಕ ದೋಷದಿಂದ ಅನೇಕರಿಗೆ ಅರ್ಜಿ ಸಲ್ಲಿಸಲು ಸಾಧ್ಯ ಆಗಿಲ್ಲ. ಈ ಬಗ್ಗೆ ಕೆಪಿಟಿಸಿಎಲ್ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಕೋವಿಡ್‌ನಿಂದ ಎರಡು ವರ್ಷ ನೇಮಕಾತಿಗಳೇ ನಡೆದಿರಲಿಲ್ಲ. ಅದರಲ್ಲೂ ಕೆಪಿಟಿಸಿಎಲ್‌ನಲ್ಲಿ ಹಲವು ವರ್ಷಗಳ ಬಳಿಕ ನೇಮಕಾತಿ ನಡೆಯುತ್ತಿದೆ. ತಾಂತ್ರಿಕ ದೋಷದಿಂದ ಅರ್ಜಿ ತಿರಸ್ಕೃತರಾದವರಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕು’ ಎಂದು ಅರ್ಜಿ ತಿರಸ್ಕೃತ ಪಟ್ಟಿಯಲ್ಲಿರುವ, ಪರೀಕ್ಷೆ ವಂಚಿತ ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

ಕೆಪಿಟಿಸಿಎಲ್: ಹುದ್ದೆ, ಸ್ವೀಕೃತ ಅರ್ಜಿ

ವೃಂದ	ಒಟ್ಟು ಹುದ್ದೆ	ಸ್ವೀಕೃತ ಅರ್ಜಿ
ಸಹಾಯಕ ಎಂಜಿನಿಯರ್ (ವಿದ್ಯುತ್)	505	23,979
ಕಿರಿಯ ಎಂಜಿನಿಯರ್ (ವಿದ್ಯುತ್)	570	22,920
ಸಹಾಯಕ ಎಂಜಿನಿಯರ್ (ಸಿವಿಲ್)	28	24,316
ಕಿರಿಯ ಎಂಜಿನಿಯರ್ (ಸಿವಿಲ್)	29	15,140
ಕಿರಿಯ ಸಹಾಯಕ	360	3,10,960
ಒಟ್ಟು	1,492	3,97,315

ನೇಮಕಾತಿ ಪ್ರಕ್ರಿಯೆಯಲ್ಲಿ ಪರೀಕ್ಷೆ ನಡೆಸುವುದು ಮಾತ್ರ ನಮ್ಮ ಕೆಲಸ. ಅರ್ಜಿ ತಿರಸ್ಕೃತಗೊಂಡ ಅಭ್ಯರ್ಥಿಗಳು ದಯವಿಟ್ಟು ಕೆಪಿಟಿಸಿಎಲ್ ಅನ್ನು ಸಂಪರ್ಕಿಸಬೇಕು

ಎಸ್. ರಮ್ಯಾ, ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

21ರಂದು ಕಾಂಗ್ರೆಸ್‌ನಿಂದ ‘ರಾಜಭವನ ಮುತ್ತಿಗೆ’: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಷನಲ್ ಹೆರಾಲ್ಡ್ ಪ್ರಕರಣದ ಹೆಸರಲ್ಲಿ ಜಾರಿ ನಿರ್ದೇಶನಾಲಯವನ್ನು (ಇಡಿ) ಕೇಂದ್ರ ಸರ್ಕಾರ ದುರುಪಯೋಗ ಮಾಡಿಕೊಂಡು ವಿಚಾರಣೆ ನೆಪದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಅವರಿಗೆ ಕಿರುಕುಳ ನೀಡಲು ಮುಂದಾಗಿದೆ. ಇದನ್ನು ಖಂಡಿಸಿ ಜುಲೈ 21ರಂದು ಪಕ್ಷದ ವತಿಯಿಂದ ‘ರಾಜಭವನ ಮುತ್ತಿಗೆ’ ಹಮ್ಮಿಕೊಳ್ಳಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಜೊತೆ ಪಕ್ಷದ ಶಾಸಕರು, ಮಾಜಿ ಶಾಸಕರು, ಸಂಸದರು, ಪದಾಧಿಕಾರಿಗಳು ಹಾಗೂ ಇತರ ಮುಖಂಡರು ಸೇರಿದಂತೆ 600ಕ್ಕೂ ಹೆಚ್ಚು ನಾಯಕರ ಜೊತೆ ಶನಿವಾರ ತುರ್ತು ಸಭೆ ನಡೆಸಿ ಈ ಬಗ್ಗೆ ತೀರ್ಮಾನಿಸಿದ್ದೇವೆ’ ಎಂದರು.

‘ಪಕ್ಷದ ಎಲ್ಲ ನಾಯಕರು ಅಂದು ಫ್ರೀಡಂ ಪಾರ್ಕ್‌ನಲ್ಲಿ ಸೇರಿ, ಅಲ್ಲಿಂದ ರಾಜಭವನ ಚಲೋ ರ‍್ಯಾಲಿಗೆ ನಿರ್ಧರಿಸಿದ್ದೇವೆ. ಈ ಪ್ರತಿಭಟನಾ ರ‍್ಯಾಲಿಯಲ್ಲಿ ಎಲ್ಲ ಶಾಸಕರು, ನಾಯಕರು ಭಾಗವಹಿಸುವರು. ಮರುದಿನ (ಜುಲೈ 22) ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಯಲಿದೆ’ ಎಂದರು.

‘21ರಿಂದ ಸಂಸತ್ತಿನಲ್ಲಿ ಮುಂಗಾರು ಅಧಿವೇಶನ ಆರಂಭವಾಗಲಿದ್ದು, ಇದೇ ಸಮಯದಲ್ಲಿ ಸೋನಿಯಾ ಗಾಂಧಿಯವರಿಗೆ ವಿಚಾರಣೆ ನೆಪದಲ್ಲಿ ಕಿರುಕುಳ ನೀಡುವ ಪ್ರಯತ್ನ ನಡೆಯುತ್ತಿದೆ. ಕಳೆದ ತಿಂಗಳು ಐದು ದಿನ 50 ಗಂಟೆ ವಿಚಾರಣೆ ಹೆಸರಲ್ಲಿ ರಾಹುಲ್ ಗಾಂಧಿಗೆ ಕಿರುಕುಳ ನೀಡಲಾಗಿತ್ತು. ಸುದೀರ್ಘ ತನಿಖೆ ನಡೆಸಿದರೂ ರಾಹುಲ್ ಗಾಂಧಿಯವರ ವಿರುದ್ಧ ಯಾವುದೇ ಸಾಕ್ಷ್ಯಾಧಾರ ಒದಗಿಸಲು ಸಾಧ್ಯವಾಗಿಲ್ಲ’ ಎಂದರು.

‘75ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಆಗಸ್ಟ್ 15ರಂದು ಬೆಂಗಳೂರಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ರಾಷ್ಟ್ರಧ್ವಜ ಹಿಡಿದು ಸಂಗೊಳ್ಳಿ ರಾಯಣ್ಣ ವೃತ್ತದಿಂದ ಬಸವನಗುಡಿ ಮೈದಾನದವರೆಗೆ ‘ಸ್ವಾತಂತ್ರ್ಯ ನಡಿಗೆ’ ಮಾಡಲಾಗುವುದು. ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ನೀಡುವಂತೆ ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಅನುಮತಿ ಕೋರಲಾಗುವುದು. ಅಲ್ಲಿ ಅನುಮತಿ ಸಿಗದಿದ್ದರೆ ಕಂಠೀರವ ಕ್ರೀಡಾಂಗಣ ನೀಡುವಂತೆ ಮನವಿ ಮಾಡಲಾಗುವುದು’ ಎಂದು ಅವರು ಹೇಳಿದರು.

‘ಬಿಜೆಪಿಯವರಿಗೆ ನಿದ್ದೆ ಬರುವುದಿಲ್ಲ’

‘ಸಿದ್ದರಾಮಯ್ಯ ಮತ್ತು ನನ್ನನ್ನು ನೆನಪಿಸಿಕೊಳ್ಳದಿದ್ದರೆ ಬಿಜೆಪಿಯವರಿಗೆ ನಿದ್ದೆ ಬರುವುದಿಲ್ಲ’ ಎಂದು ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು.

ಪ್ರವಾಹ ಸಂದರ್ಭದಲ್ಲಿ ಬಿಜೆಪಿ ಶಾಸಕರು ಹೋಟೆಲ್‌ನಲ್ಲಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಬಿಜೆಪಿಯಲ್ಲಿ ಆಂತರಿಕ ಭಿನ್ನಾಭಿಪ್ರಾಯವಿದೆ. ಮೂಲ ಬಿಜೆಪಿಯವರು ಈ ಸರ್ಕಾರ ನಡೆಸುತ್ತಿಲ್ಲ. ಮುಖ್ಯಮಂತ್ರಿಯನ್ನು ಹೊರತುಪಡಿಸಿ ಅನೇಕ ಸಚಿವರು ಕಾಂಗ್ರೆಸ್ ಹಾಗೂ ದಳದಿಂದ ಹೋದವರು. ಹೀಗಾಗಿ ಅವರಲ್ಲಿ ಆತಂಕ ಹೆಚ್ಚಾಗಿದೆ’ ಎಂದರು.

ನೀಟ್ ಪರೀಕ್ಷೆಗಾಗಿ ಬೆಂಗಳೂರಿನ ಆರ್ಮಿ ಪಬ್ಲಿಕ್ ಶಾಲೆಯ ಪರೀಕ್ಷಾ ಕೊಠಡಿ ಪ್ರವೇಶಿಸಲು ಸರತಿ ಸಾಲಿನಲ್ಲಿ ನಿಂತಿರುವ ವಿದ್ಯಾರ್ಥಿನಿಯರು

ರಾಜ್ಯದಲ್ಲಿ ನೀಟ್ ಸುಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ‘ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ –2022 (ನೀಟ್) ರಾಜ್ಯದಲ್ಲಿ ಭಾನುವಾರ ಸುಸೂತ್ರವಾಗಿ ನಡೆಯಿತು.

ರಾಜ್ಯದಲ್ಲಿ 1.19 ಲಕ್ಷ ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ನೋಂದಾಯಿಸಿದ್ದರು. ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.20ರವರೆಗೆ ಪರೀಕ್ಷೆ ನಡೆಯಿತು. ಎರಡು ಗಂಟೆ ಮೊದಲೇ ಪರೀಕ್ಷಾ ಕೇಂದ್ರದಲ್ಲಿ ಹಾಜರಿರುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡಿದ್ದರಿಂದ ಮಧ್ಯಾಹ್ನ 12 ಗಂಟೆಯ ವೇಳೆಗೆ ಪರೀಕ್ಷಾ ಕೇಂದ್ರಗಳ ಬಳಿ ವಿದ್ಯಾರ್ಥಿಗಳು ನೆರೆದಿದ್ದರು.

ಕಿವಿಯೋಲೆ ಸೇರಿದಂತೆ ಯಾವುದೇ ರೀತಿಯ ಆಭರಣಗಳನ್ನು ಧರಿಸುವಂತಿಲ್ಲವೆಂದು ಸೂಚನೆ ನೀಡಿದ್ದರಿಂದ ವಿದ್ಯಾರ್ಥಿಗಳು ಈ ಸೂಚನೆಗಳನ್ನು ಪಾಲಿಸಿದ್ದರು. ಸೂಚನೆ ಮರೆತು ಬಂದಿದ್ದ ಅಭ್ಯರ್ಥಿಗಳು ಸ್ಥಳದಲ್ಲೇ ಅದನ್ನು ಬಿಚ್ಚಿ ಪೋಷಕರಿಗೆ ನೀಡಿ ಬಳಿಕ ಪರೀಕ್ಷಾ ಕೇಂದ್ರ ಪ್ರವೇಶಿಸಿದರು.

‘ದಾಖಲೆಗಾಗಿ ವಾಹನ ತಡೆದರೆ ಶಿಸ್ತುಕ್ರಮ’

ಬೆಂಗಳೂರು: ‘ರಾಜ್ಯದ ನಗರ ಪ್ರದೇಶ ಹಾಗೂ ಪ್ರಮುಖ ಹೆದ್ದಾರಿಗಳಲ್ಲಿ ದಾಖಲೆ ಪರಿಶೀಲನೆ ನೆಪದಲ್ಲಿ ವಾಹನಗಳನ್ನು ತಡೆದು ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ದೂರುಗಳು ಬರುತ್ತಿದ್ದು, ತಪ್ಪಿತಸ್ಥ ಪೊಲೀಸ್ ಸಿಬ್ಬಂದಿ ವಿರುದ್ಧ ಇಲಾಖಾ ಕ್ರಮ ಜರುಗಿಸಿ’ ಎಂದು ಡಿಜಿ–ಐಜಿಪಿ ಪ್ರವೀಣ್ ಸೂದ್ ಅವರು ಪೊಲೀಸ್ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ.

ನಡುರಸ್ತೆಯಲ್ಲಿ ಪೊಲೀಸರು ಸುಖಾಸುಮ್ಮನೇ ವಾಹನ ತಡೆಯುತ್ತಾರೆಂದು ಕೆಲ ಸಾರ್ವಜನಿಕರು ಇತ್ತೀಚೆಗೆ ಟ್ವೀಟ್ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಪ್ರವೀಣ್ ಸೂದ್, ದಾಖಲೆ ಪರಿಶೀಲನೆ ನೆಪದಲ್ಲಿ ವಾಹನ ತಡೆಯದಂತೆ ಪೊಲೀಸರಿಗೆ ಎಚ್ಚರಿಕೆ ನೀಡುವುದಾಗಿ ಭರವಸೆ ನೀಡಿದ್ದರು. ಇದಾದ ನಂತರವೂ ಕೆಲವೆಡೆ ಪೊಲೀಸರು ವಾಹನ ತಡೆಯುವುದು ಮುಂದುವರಿದಿತ್ತು. ಈ ಬಗ್ಗೆ ಪುನಃ ದೂರುಗಳು ಬಂದಿದ್ದರಿಂದ, ಶನಿವಾರ (ಜುಲೈ 16) ಅಧಿಕೃತ ಆದೇಶ ಹೊರಡಿಸಿದ್ದಾರೆ. ಆದೇಶ ಪ್ರತಿಗಳನ್ನು ಜಿಲ್ಲಾ ಎಸ್ಪಿಗಳು, ಕಮಿಷನರ್ ಹಾಗೂ ಹಿರಿಯ ಅಧಿಕಾರಿಗಳಿಗೆ ಕಳುಹಿಸಲಾಗಿದೆ.

‘ಡಿ.ಎಲ್, ಆರ್.ಸಿ, ಮಾಲಿನ್ಯ ಪರೀಕ್ಷೆ ಪ್ರಮಾಣ ಪತ್ರ... ಇತರೆ ಪತ್ರಗಳ ಪರಿಶೀಲನೆಗಾಗಿ ವಾಹನಗಳನ್ನು ತಡೆಯುತ್ತಿರುವ ದೂರುಗಳು ಕೇಳಿ ಬರುತ್ತಿವೆ. ಹಿರಿಯ ಅಧಿಕಾರಿಗಳ ಆದೇಶವಿಲ್ಲದಿದ್ದರೂ ಕೆಲ ಸಿಬ್ಬಂದಿ, ವಾಹನ ತಡೆಯುತ್ತಿದ್ದಾರೆ. ಇಂಥ ಸಿಬ್ಬಂದಿಗೆ ಎಚ್ಚರಿಕೆ ನೀಡಬೇಕು’ ಎಂದು ಸೂಚಿಸಿದ್ದಾರೆ.

ಸುದ್ದಿ 2 ನಿಮಿಷ

‘ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ’

ಮೈಸೂರು: ‘ಮುಂದಿನ ವಿಧಾನಸಭಾ ಚುನಾವಣೆಗೆ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ. ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಇಲ್ಲಿ ಭಾನುವಾರ ನಡೆದ ಚಾಮುಂಡೇಶ್ವರಿ, ಇಲವಾಲ ಬ್ಲಾಕ್ ಘಟಕದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಇದು ನನ್ನ ಕೊನೆಯ ಚುನಾವಣೆ. ಕೋಲಾರ, ಕೊಪ್ಪಳ, ಹುಣಸೂರು, ವರುಣಾದಿಂದ ಸ್ಪರ್ಧಿಸುವಂತೆ ಕಾರ್ಯಕರ್ತರು ಆಹ್ವಾನ ನೀಡಿದ್ದಾರೆ. ಆದರೆ, ಈಗಲೇ ತೀರ್ಮಾನ ತೆಗೆದುಕೊಂಡಿಲ್ಲ. ಕಳೆದ ಬಾರಿ ಚಾಮುಂಡೇಶ್ವರಿಯಲ್ಲಿ ಮತಗಟ್ಟೆ ಮಟ್ಟದಲ್ಲಿ ಪಕ್ಷದ ಕಾರ್ಯಕರ್ತರು ಕೆಲಸ ಮಾಡದ ಕಾರಣ ನಾನು ಸೋಲಬೇಕಾಯಿತು’ ಎಂದರು.

‘2028ರ ನಂತರ ಯಾವುದೇ ಹುದ್ದೆ ನೀಡಿದರೂ ಪಡೆಯುವುದಿಲ್ಲ. ರಾಜ್ಯದಲ್ಲಿರುವ ಭ್ರಷ್ಟ, ಧರ್ಮಾಧರಿತ ಸರ್ಕಾರ ಕಿತ್ತೊಗೆದು, ರಾಜ್ಯ ಉಳಿಸಬೇಕು ಎಂಬ ಕಾರಣದಿಂದ ಈ ಬಾರಿ ಸ್ಪರ್ಧಿಸುತ್ತಿದ್ದೇನೆ’ ಎಂದು ಸ್ಪಷ್ಟಪಡಿಸಿದರು.

ವೈದ್ಯ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ?

ಶಿವಮೊಗ್ಗ: ಇಲ್ಲಿನ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಸಿಮ್ಸ್) ಸಹ ಪ್ರಾಧ್ಯಾಪಕರೊಬ್ಬರು ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪ ಕೇಳಿಬಂದಿದೆ.

ವಿದ್ಯಾರ್ಥಿನಿಯ ಐದೂವರೆ ವರ್ಷದ ಅವಧಿಯ ವೈದ್ಯಕೀಯ ವ್ಯಾಸಂಗ, ತರಬೇತಿ ಜುಲೈ 15ರಂದು ಪೂರ್ಣಗೊಂಡಿದೆ. ಆ ಬಗ್ಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯಲು ಸಹ ಪ್ರಾಧ್ಯಾಪಕರ ಬಳಿ ತೆರಳಿದ್ದಾಗ, ಅಸಭ್ಯವಾಗಿ ವರ್ತಿಸಿ ಮಾನಸಿಕ, ದೈಹಿಕ ಕಿರುಕುಳ ನೀಡಿದ್ದಾರೆ. ನೊಂದ ವಿದ್ಯಾರ್ಥಿನಿ ಕಾಲೇಜಿನ ದೂರು ವಿಭಾಗಕ್ಕೆ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

ಇದೇ ಪ್ರಾಧ್ಯಾಪಕ ಹಿಂದೆಯೂ ವಿದ್ಯಾರ್ಥಿನಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದರು. ಆಗಲೂ ಕಾಲೇಜು ಮುಖ್ಯಸ್ಥರಿಗೆ ಮೌಖಿಕ ದೂರು ಸಲ್ಲಿಕೆಯಾಗಿತ್ತು ಎನ್ನಲಾಗಿದೆ. ಇದೀಗ ಮತ್ತೆ ಅಂಥದೇ ಬೆಳವಣಿಗೆ ನಡೆದಿದ್ದು, ಚರ್ಚೆಗೆ ಗ್ರಾಸವಾಗಿದೆ.

‘ಈ ವಿಚಾರ ಶನಿವಾರ ನನ್ನ ಗಮನಕ್ಕೂ ಬಂದಿದೆ. ಕಾಲೇಜಿನ ದೂರು ವಿಭಾಗದಿಂದ ಅಧಿಕೃತವಾಗಿ ಮಾಹಿತಿ ಬಂದಿಲ್ಲ. ಹೀಗಾಗಿ ಈಗಲೇ ಯಾವುದೇ ವಿಚಾರ ಬಹಿರಂಗಪಡಿಸಲಾಗದು. ದೂರು ವಿಭಾಗದ ಮುಖ್ಯಸ್ಥೆ ರಜೆಯಲ್ಲಿದ್ದಾರೆ. ಅವರಿಂದ ಸೋಮವಾರ ಮಾಹಿತಿ ಪಡೆದು ಪ್ರತಿಕ್ರಿಯಿಸುತ್ತೇನೆ’ ಎಂದು ಸಿಮ್ಸ್ ಮುಖ್ಯಸ್ಥ ಡಾ.ಸಿದ್ದಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

‘ಹಿಂದೆ ನಡೆದಿದ್ದ ಘಟನೆ ಮಾಹಿತಿ ಇಲ್ಲ. ಪ್ರಕರಣ ಮುಚ್ಚಿ ಹಾಕುವ, ಯಾರನ್ನೂ ರಕ್ಷಿಸುವ ಕೆಲಸ ಮಾಡುವುದಿಲ್ಲ’ ಎಂದು ತಿಳಿಸಿದರು.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿದೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1 ಸಾವಿರಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ‘Deccan Herald-Prajavani Relief Trust', Canara Bank, Cantonment Branch, A/c no. 0404101200385, IFSC code: CNRB0000404, MICR Code: 560015009 ಇಲ್ಲಿಗೆ ಕಳುಹಿಸಬೇಕು.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. https://bit.ly/3xFpoz4

ಸೂಚನೆ: ದಾನಿಗಳು ಲಕೋಟೆ ಮೇಲೆ **ಶೈಕ್ಷಣಿಕ ನೆರವಿಗೆ ಕೊಡುಗೆ** ಎಂದು ನಮೂದಿಸಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್‌ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ವಿದ್ಯಾರ್ಥಿಗಳ ಅನಿಸಿಕೆ

‘ಕಾಲೇಜಿನ ಶುಲ್ಕ ಭರಿಸಿದೆ’

‘ಪ್ರಜಾವಾಣಿ’ ನೀಡಿದ ಆರ್ಥಿಕ ನೆರವಿನಿಂದ ಬಹಳಷ್ಟು ಅನುಕೂಲವಾಗಿದೆ. ಕಾಲೇಜು ಶುಲ್ಕ ಪಾವತಿಸಿದೆ. ಸದ್ಯ ಪಿಯುಸಿ ವಿಜ್ಞಾನ ಕಲಿಯುತ್ತಿದ್ದು, ಪ್ರಥಮ ಪಿಯುಸಿಯಲ್ಲಿ ಫಲಿತಾಂಶ ಬಂದಿದೆ. ಶಿಕ್ಷಣಕ್ಕೆ ‘ಪ್ರಜಾವಾಣಿ’ ನೀಡಿರುವ ಸಹಕಾರಕ್ಕೆ ಚಿರಋಣಿ.

ಸಿದ್ಧರಾಜು ಆರ್., ಮೈಸೂರು

‘ಕಲಿಕೆಗೆ ನೀರೆರೆದ ಆರ್ಥಿಕ ನೆರವು’

ಆರ್ಥಿಕ ನೆರವು ನೀಡುವ ಮೂಲಕ ‘ಪ್ರಜಾವಾಣಿ’ ಬಡ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ. ಕಲಿಕೆಗೆ ಈ ನೆರವು ಸಾಕಷ್ಟು ಸಹಕಾರಿಯಾಯಿತು. ಕಲಿಕೆಗೆ ಆರ್ಥಿಕ ನೆರವಿನ ಮೂಲಕ ನೀರೆರೆವ ‘ಪ್ರಜಾವಾಣಿ’ಗೆ ನನ್ನದೊಂದು ಥ್ಯಾಂಕ್ಸ್.

ರಮ್ಯಾ, ಮೈಸೂರು

ಲಲಿತಾ ನಾಯಕ್‌ಗೆ ಪತ್ರ • ಕ್ರಮ ಕೈಗೊಳ್ಳದ್ದಕ್ಕೆ ಹಲವರ ಅಸಮಾಧಾನ

‘61 ಸಾಹಿತಿ, ಮುಖಂಡರ ದುರ್ಮರಣ ಸತ್ಯ’

ಬೆಂಗಳೂರು: ‘ಸೈನಿಕರ ಬಗ್ಗೆ ಹಗುರವಾಗಿ ಮಾತನಾಡಿದ್ದೀರಾ. ಕೂಡಲೇ ಕ್ಷಮೆ ಕೇಳಬೇಕು. ಇಲ್ಲದಿದ್ದರೆ, ಅತಿ ಬೇಗ ತಿಥಿ ಆಗಬಹುದು’ ಎಂಬುದಾಗಿ ಲೇಖಕಿ ಬಿ.ಟಿ. ಲಲಿತಾ ನಾಯಕ್ ಅವರಿಗೆ ‘ಸಹಿಷ್ಣು ಹಿಂದೂ’ ಹೆಸರಿನಲ್ಲಿ ಅಪರಿಚಿತರು ಬೆದರಿಕೆ ಪತ್ರ ಬರೆದಿದ್ದಾರೆ.

ಸಾಹಿತಿಗಳಾದ ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಕೀಲ ಕಪಿಲ್ ಸಿಬಲ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, ಸಿನಿಮಾ ನಿರ್ದೇಶಕಿ ಲೀನಾ ಮಣಿಮೇಕಲೈ ಹಾಗೂ ಸಂಸದೆ ಮಹುವಾ ಮೊಹಿತ್ರಾ ಅವರ ಫೋಟೊಗಳನ್ನು ‘ಸಂತಸ ಶ್ರದ್ಧಾಂಜಲಿ’ ಶೀರ್ಷಿಕೆಯಡಿ ಪತ್ರದಲ್ಲಿ ಮುದ್ರಿಸಲಾಗಿದೆ.

‘ಭಯೋತ್ಪಾದಕರು, ನಕ್ಸಲರು, ಮಾವೋವಾದಿಗಳು, ಮತಾಂಧ ಮುಸ್ಲಿಮರು, ಮತಾಂತರಿ ಕ್ರೈಸ್ತರನ್ನು ಬೆಂಬಲಿಸುವ ನೀವು ಹಾಗೂ ಫೋಟೊದಲ್ಲಿರುವ ಎಲ್ಲರ ತಿಥಿ ಬೇಗ ಆಗಬಹುದು. ನಿಮಗೆ ಇಂಥ ಪದ ಬಳಸಲು ನನಗೆ ಇಷ್ಟವಿಲ್ಲ. ಕ್ಷಮೆ ಕೇಳಿ ತಾಯಿ ಎಂದು ಈ ಹಿಂದೆ ಪತ್ರ ಬರೆದಿದ್ದೆ. ಆದರೆ, ನೀವು ಕೊಲೆ ಬೆದರಿಕೆ ಎಂದು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಿರಾ. ಅದಕ್ಕೆ ಈಗ ನಿಜವಾಗಿಯೂ ಬೆದರಿಕೆ ಹಾಕುತ್ತಿದ್ದೇನೆ. ನಮ್ಮ ವೀರ ಸೈನಿಕರನ್ನು ಅವಮಾನ ಮಾಡಿರುವ ನೀವು, ಕೂಡಲೇ ಕ್ಷಮೆ ಕೇಳಿ. ನಿಮಗೆ ಸಾಕಷ್ಟು ಸಮಯವಿದೆ. ಬದಲಾಗಿ’ ಎಂದೂ ಪತ್ರದಲ್ಲಿ ಬರೆಯಲಾಗಿದೆ.

‘ಸೈನಿಕರು, ಪೊಲೀಸರು, ದೇಶದ ನಾಗರಿಕರ ಮೇಲೆ ಮತಾಂಧ ಮುಸ್ಲಿಮರಿಂದ ಹಾಗೂ ಭಯೋತ್ಪಾದಕರಿಂದ ದಾಳಿ ನಡೆದರೆ ನೀವೆಲ್ಲ ಉಸಿರು ಬಿಡುವುದಿಲ್ಲ. ಈಗ ಪಠ್ಯದಲ್ಲಿ ಭಗವದ್ಗೀತೆಯನ್ನು ಸೇರಿಸಿದರೆ ನಿಮಗೆ ಉರಿ, ಉರಿ. 61 ಎಡಬಿಡಂಗಿ ಸಾಹಿತಿಗಳು, ನೀಚ ರಾಜಕಾರಣಿಗಳು ಮುಂದಿನ ದಿನಗಳಲ್ಲಿ ದುರ್ಮರಣಕ್ಕೆ ಬಲಿಯಾಗುವುದು ಸತ್ಯ’ ಎಂದೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಪೊಲೀಸರು ಮೌನ: ಬಿ.ಟಿ. ಲಲಿತಾ ನಾಯಕ್ ಅವರಿಗೆ ಮೇಲಿಂದ ಮೇಲೆ ಬೆದರಿಕೆ ಪತ್ರಗಳು ಬರುತ್ತಿದ್ದು, ಈ ಬಗ್ಗೆ ಸಂಜಯನಗರ ಠಾಣೆಗೆ ದೂರು ನೀಡಿದ್ದಾರೆ. ಆದರೆ, ಪೊಲೀಸರು ಆರೋಪಿಗಳನ್ನು ಪತ್ತೆ ಮಾಡುತ್ತಿಲ್ಲವೆಂದು ಹಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೆದರಿಕೆ ಪತ್ರದಲ್ಲಿರುವ ಸಾಹಿತಿ, ರಾಜಕಾರಣಿ ಹಾಗೂ ಇತರರ ಫೋಟೊಗಳು

ತಿಪಟೂರು ಚಲೊ ಸಮಾವೇಶದಲ್ಲಿ ಸರ್ಕಾರಕ್ಕೆ ಸಾಹಿತಿಗಳ ಆಗ್ರಹ

ಹಳೇ ಪಠ್ಯ ಮುಂದುವರಿಕೆಗೆ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ತಿಪಟೂರು: ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಿಸಿರುವ ಪಠ್ಯಪುಸ್ತಕವನ್ನು ತಕ್ಷಣವೇ ಹಿಂಪಡೆದು ಹಳೆಯ ಪಠ್ಯವನ್ನೇ ಮುಂದುವರಿಸಬೇಕು ಎಂಬ ಒಕ್ಕೊರಲ ಕೂಗು ‘ತಿಪಟೂರು ಚಲೊ’ ಸಮಾವೇಶದಲ್ಲಿ ಭಾನುವಾರ ಪ್ರತಿಧ್ವನಿಸಿತು.

ಪಠ್ಯಪುಸ್ತಕ ಪರಿಷ್ಕರಣೆ ವಿರೋಧಿಸಿ ಜಾಗೃತ ತಿಪಟೂರು, ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಏರ್ಪಡಿಸಿದ್ದ ಸಮಾವೇಶದಲ್ಲಿ ಚಿಂತಕರು, ಸಾಹಿತಿಗಳು, ಲೇಖಕರು, ವಿವಿಧ ಮಠದ ಸ್ವಾಮೀಜಿಗಳು ಈ ಹಕ್ಕೊತ್ತಾಯ ಮಂಡಿಸಿದರು.

ಪಠ್ಯ ಪರಿಷ್ಕರಣೆ ವಿರೋಧಿಸಿ ಜನರಲ್ಲಿ ಜಾಗೃತಿ ಮೂಡಿಸಲು ಜಾಗೃತ ತಿಪಟೂರು ವತಿಯಿಂದ ತಾಲ್ಲೂಕಿನಾದ್ಯಂತ ಹಮ್ಮಿಕೊಂಡಿದ್ದ ಪಾದಯಾತ್ರೆಯ ಸಮಾರೋಪದ ಅಂಗವಾಗಿ ಮೆರವಣಿಗೆ ಮತ್ತು ಈ ಸಮಾವೇಶ ಏರ್ಪಡಿಸಲಾಗಿತ್ತು.

ಹಿರಿಯೂರಿನ ಕೋಡಿಹಳ್ಳಿ ಆದಿಜಾಂಬವ ಮಠದ ಷಡಕ್ಷರ ಮುನಿ ಸ್ವಾಮೀಜಿ ಮಾತನಾಡಿ, ‘ರಾಜ್ಯ ಸರ್ಕಾರ ಪಠ್ಯಪುಸ್ತಕ ವಿಚಾರದಲ್ಲಿ ಅಕ್ಷರಗಳಿಗೆ ಬಣ್ಣ ಬಳಿಯುವ ನಿರ್ಧಾರವನ್ನು ಕೈಬಿಡಬೇಕು’ ಎಂದು ಆಗ್ರಹಿಸಿದರು.

ಸರ್ಕಾರದ ಕ್ರಮಗಳನ್ನಷ್ಟೇ ನಾವು ವಿರೋಧಿಸುತ್ತಿದ್ದೇವೆ. ಯಾವುದೇ ಜಾತಿ, ಜನಾಂಗ, ವ್ಯಕ್ತಿಯನ್ನಲ್ಲ. ಪರಿಷ್ಕರಣೆ ಸಮಿತಿ ಮಾಡಿರುವ ತಪ್ಪು ತಿದ್ದುವ ಕೆಲಸ ಮಾಡಬೇಕಿದ್ದ ಶಿಕ್ಷಣ ಸಚಿವರು ಮೌನವಹಿಸಿ ಬೆಂಬಲ ನೀಡುತ್ತಿರುವುದು ಸರಿಯಲ್ಲ. ಇದು ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದರು.

ಚಿಂತಕ ಕೋಟಿಗಾನಹಳ್ಳಿ ರಾಮಯ್ಯ, ‘ಆರ್‌ಎಸ್‌ಎಸ್ ಎಂದಿಗೂ ಸಮಾನತೆ ಒಪ್ಪುವುದಿಲ್ಲ. ಅವರಿಗೆ ಬುದ್ಧ ಶಾಂತವಾಗಿರುವುದು ಬೇಕಿಲ್ಲ. ಇದೊಂದು ದೇಶದ್ರೋಹಿ ಸಂಘಟನೆ. ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ತಪ್ಪಾಗಿದೆ ಎಂದು ಅವರೇ ಒಪ್ಪಿಕೊಂಡಿರುವ ನಂತರ ಅದನ್ನು ಯಾಕೆ ಹಿಂಪಡೆಯುತ್ತಿಲ್ಲ’ ಎಂದು ಪ್ರಶ್ನಿಸಿದರು.

ಕುಣಿಗಲ್ ತಾಲ್ಲೂಕಿನ ಅರೇಶಂಕರ ಮಠದ ಸಿದ್ದರಾಮ ಚೈತನ್ಯ ಸ್ವಾಮೀಜಿ, ತುರುವೇಕರೆ ತಾಲ್ಲೂಕಿನ ಡಿ. ಕಲ್ಕೆರೆಯ ಅಲ್ಲಮಪ್ರಭು ಮಠದ ತಿಪ್ಪೇರುದ್ರ ಸ್ವಾಮೀಜಿ, ಸಾಹಿತಿ ಎಲ್.ಎನ್. ಮುಕುಂದರಾಜ್, ಚಿಂತಕ ಜಿ.ಎಸ್. ನಾಗರಾಜ್, ರಾಜ್ಯ ರೈತ ಸಂಘದ ಮುಖಂಡ ಕೆ.ಟಿ. ಗಂಗಾಧರ್, ಜಾಗೃತ ತಿಪಟೂರು ಅಧ್ಯಕ್ಷ ಸಿ.ಬಿ. ಶಶಿಧರ್ ಪಾಲ್ಗೊಂಡಿದ್ದರು.

ಸಮಾವೇಶದಲ್ಲಿ ಹಿರಿಯೂರಿನ ಕೋಡಿಹಳ್ಳಿ ಆದಿಜಾಂಬವ ಮಠದ ಷಡಕ್ಷರ ಮುನಿ ಸ್ವಾಮೀಜಿ ಮಾತನಾಡಿದರು. ತುರುವೇಕರೆ ತಾಲ್ಲೂಕಿನ ಡಿ. ಕಲ್ಕೆರೆಯ ಅಲ್ಲಮಪ್ರಭು ಮಠದ ತಿಪ್ಪೇರುದ್ರ ಸ್ವಾಮೀಜಿ, ಚಿಂತಕ ಕೋಟಿಗಾನಹಳ್ಳಿ ರಾಮಯ್ಯ, ಕಥೆಗಾರ ಎಸ್. ಗಂಗಾಧರಯ್ಯ ಉಪಸ್ಥಿತರಿದ್ದರು

ಸರ್ಕಾರ, ವಿಪಕ್ಷ ಸದನಕ್ಕೆ ಸಜ್ಜು

ಒಂದನೇ ಪುಟದಿಂದ...

ಸಂಸತ್ತಿನ ನಿಯಮಗಳು ಮತ್ತು ಪ್ರಕ್ರಿಯೆಗಳ ಅನುಸಾರ ಯಾವುದೇ ವಿಚಾರದ ಚರ್ಚೆಗೆ ಸರ್ಕಾರ ಸಿದ್ಧ ಎಂದು ಸಭೆಯ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ನಗಣ್ಯ ವಿಚಾರಗಳನ್ನು ದೊಡ್ಡದನ್ನಾಗಿ ವಿರೋಧ ಪಕ್ಷಗಳು ಮಾಡುತ್ತಿವೆ, ಈ ಮೂಲಕ ಸಂಸತ್ತಿನ ವರ್ಚಸ್ಸು ಕುಂದಿಸುತ್ತಿವೆ ಎಂದು ಜೋಶಿ ಆರೋಪಿಸಿದ್ದಾರೆ.

13 ವಿಷಯಗಳನ್ನು ಚರ್ಚೆಗೆ ಎತ್ತಿಕೊಳ್ಳಬೇಕು ಎಂದು ಕಾಂಗ್ರೆಸ್ ಮುಖಂಡರು ಸಭೆಯಲ್ಲಿ ಒತ್ತಾಯಿಸಿದ್ದಾರೆ. ದರ ಏರಿಕೆ, ಅಗ್ನಿಪಥ ಯೋಜನೆ, ಒಕ್ಕೂಟ ವ್ಯವಸ್ಥೆಯ ಮೇಲೆ ಪ್ರಹಾರ, ಅನಿಯಂತ್ರಿತ ಹಣದುಬ್ಬರ, ನಿರುದ್ಯೋಗ ಹೆಚ್ಚಳ, ದ್ವೇಷ ಭಾಷಣ, ಕಾಂಗ್ರೆಸ್ ನಾಯಕರ ಮೇಲೆ ಅಪ್ರಜಾಸತ್ತಾತ್ಮಕ ರೀತಿಯ ದಾಳಿ ಕಾಂಗ್ರೆಸ್ ಪ್ರಸ್ತಾಪಿಸಿದ ವಿಚಾರಗಳಲ್ಲಿ ಸೇರಿವೆ.

ಅಲ್ಪಾವಧಿ ಚರ್ಚೆಗಳು, ಗಮನ ಸೆಳೆಯುವ ನಿಲುವಳಿಗಳು, ವಿಶೇಷ ಉಲ್ಲೇಖಗಳಂತಹವುಗಳ ಮೇಲಿನ ಚರ್ಚೆಗೆ ಹೆಚ್ಚಿನ ಸಮಯ ಕೊಡಬೇಕು ಎಂದೂ ಕಾಂಗ್ರೆಸ್ ಆಗ್ರಹಿಸಿದೆ. ಸಿಪಿಐ, ಆರ್‌ಎಸ್‌ಪಿ ಇದನ್ನು ಬೆಂಬಲಿಸಿವೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸಿಂಗಪುರಕ್ಕೆ ತೆರಳಲು ಅನುಮತಿ ನೀಡಿಲ್ಲ ಎಂಬುದನ್ನು ಎಎಪಿ ಸಂಸದರು ಪ್ರಸ್ತಾಪಿಸಿದ್ದಾರೆ.

‘ಸಿದ್ದರಾಮಯ್ಯ 75–’ಕ್ಕೆ ಭರ್ಜರಿ ಸಿದ್ಧತೆ

ಬೆಂಗಳೂರು: ದಾವಣಗೆರೆಯಲ್ಲಿ ಆ. 3 ರಂದು ನಡೆಯಲಿರುವ ‘ಸಿದ್ದರಾಮಯ್ಯ 75– ಅಮೃತ ಮಹೋತ್ಸವ’ ಸಮಾವೇಶಕ್ಕೆ ಅಮೃತ ಮಹೋತ್ಸವ ಸಮಿತಿ ಭರ್ಜರಿ ಸಿದ್ಧತೆಯಲ್ಲಿ ತೊಡಗಿದೆ.

‘ಅಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 2.30 ರವರೆಗೆ ಸಮಾವೇಶ ನಡೆಯಲಿದೆ. ಬೆಳಿಗ್ಗೆ ಸಂಗೀತ ನಿರ್ದೇಶಕ ಹಂಸಲೇಖ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ’ ಎಂದು ಸಮಿತಿಯ ಮೂಲಗಳು ತಿಳಿಸಿವೆ. ‘ರಾಜ್ಯದ ವಿವಿಧ ಭಾಗಗಳಿಂದ 4 ಲಕ್ಷದಿಂದ 5 ಲಕ್ಷ ಜನರು ಬರುವ ನಿರೀಕ್ಷೆಯಿದೆ’ ಎಂದೂ ಮೂಲಗಳು ತಿಳಿಸಿವೆ.

‘ಒಕ್ಕಲಿಗರಿಗೆ ಅವಕಾಶ ಒದಗಿ ಬಂದಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಸ್.ಎಂ. ಕೃಷ್ಣ ಅವರ ನಂತರ ಒಕ್ಕಲಿಗ ಸಮುದಾಯದ ವ್ಯಕ್ತಿಯೊಬ್ಬರು ರಾಜ್ಯದಲ್ಲಿ ಉನ್ನತ ಸ್ಥಾನಕ್ಕೇರುವ ಅವಕಾಶ ಒದಗಿ ಬಂದಿದೆ. ಮುಂದಿನ ಚುನಾವಣೆಯಲ್ಲಿ ಸಮುದಾಯವು ಈ ಅವಕಾಶ ತಪ್ಪಿಸಿಕೊಳ್ಳಬಾರದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೇಂದ್ರ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಲೋಕಸೇವಾ ಆಯೋಗಗಳು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಐಎಎಸ್, ಐಎಫ್‌ಎಸ್, ಕೆಎಎಸ್ ಮತ್ತಿತರ ಹುದ್ದೆಗಳಿಗೆ ಆಯ್ಕೆಯಾಗಿರುವ ಒಕ್ಕಲಿಗ ಸಮುದಾಯದ ಅಭ್ಯರ್ಥಿಗಳನ್ನು ಅಭಿನಂದಿಸಲು ಒಕ್ಕಲಿಗರ ಸಂಘದ ಕೇಂದ್ರ ಕಚೇರಿ ಆವರಣದಲ್ಲಿ ಚುಂಚಶ್ರೀ ಬಳಗವು ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ಡಿ.ಕೆ. ಶಿವಕುಮಾರ್

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿ ತಾವೇ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗಾಗ ಹೇಳಿಕೆ ನೀಡುತ್ತಿದ್ದಾರೆ. ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಲು 75ನೇ ವರ್ಷದ ಹುಟ್ಟುಹಬ್ಬದ ಆಚರಣೆಗೆ ಸಿದ್ಧತೆಯೂ ನಡೆದಿದೆ. ಈ ಸಂದರ್ಭದಲ್ಲೇ ಒಕ್ಕಲಿಗರಿಗೆ ಮುಖ್ಯಮಂತ್ರಿಯಾಗುವ ಅವಕಾಶ ಎದುರಿನಲ್ಲಿದೆ ಎಂದು ಹೇಳುವ ಮೂಲಕ ಶಿವಕುಮಾರ್ ಅವರು ತಾವೂ ಮುಖ್ಯಮಂತ್ರಿ ಹುದ್ದೆಯ ಪ್ರಬಲ ಆಕಾಂಕ್ಷಿ ಎಂಬ ಸಂದೇಶವನ್ನು ಪರೋಕ್ಷವಾಗಿ ರವಾನಿಸಲು ಯತ್ನಿಸಿದರು.

‘ನಮ್ಮವ, ನಮ್ಮವ ಎಂದು ಹೇಳಿದರಷ್ಟೇ ಸಾಲದು. ದೊರಕಿದ ಅವಕಾಶವನ್ನು ಬಳಸಿಕೊಳ್ಳಬೇಕು. ಮುಂದಿನ ಚುನಾವಣೆಯಲ್ಲಿ ಆಶೀರ್ವದಿಸಬೇಕು. ನಾನು ಯಾವುದೇ ತಪ್ಪು ಮಾಡದಿದ್ದರೂ ತನಿಖೆ ಹೆಸರಿನಲ್ಲಿ ತಿಹಾರ್ ಜೈಲಿಗೆ ಕಳುಹಿಸಿದರು. ರಾಜಕೀಯ ಜೀವನದಲ್ಲಿ ಸಾಕಷ್ಟು ಏಳು–ಬೀಳುಗಳನ್ನು ಕಂಡಿದ್ದೇನೆ. ಯಾವುದಕ್ಕೂ ಜಗ್ಗುವುದಿಲ್ಲ’ ಎಂದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಉಪಸ್ಥಿತರಿದ್ದರು.

ವಿಶ್ವ ನಗರಗಳ ಶೃಂಗಸಭೆ: ಅನುಮತಿ ಕೋರಿದ ಕೇಜ್ರಿವಾಲ್

ನವದೆಹಲಿ (ನವದೆಹಲಿ): ವಿಶ್ವ ನಗರಗಳ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಅನುಮತಿ ನೀಡುವಂತೆ ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರ ಪತ್ರ ಬರೆದಿದ್ದಾರೆ.

ಸಿಂಗಪುರದಲ್ಲಿ ನಡೆಯಲಿರುವ ಸಭೆಯಲ್ಲಿ ಪಾಲ್ಗೊಳ್ಳಲು ಅನುಮತಿಗಾಗಿ ಒಂದು ತಿಂಗಳಿನಿಂದ ಕಾಯುತ್ತಿದ್ದೇನೆ. ಅಲ್ಲಿ ನಗರಗಳ ಅಭಿವೃದ್ಧಿ ಕುರಿತು ಭಾಷಣ ಮಾಡಬೇಕಿದೆ. ತಮ್ಮ ಈ ಭೇಟಿಯು ರಾಷ್ಟ್ರಕ್ಕೆ ಹೆಮ್ಮೆ ತರುತ್ತದೆ ಎಂದು ಹೇಳಿದ್ದಾರೆ.

ಆಗಸ್ಟ್ ಮೊದಲ ವಾರ ನಡೆಯಲಿರುವ ಶೃಂಗಸಭೆಗೆ ಕೇಜ್ರಿವಾಲ್ ಅವರನ್ನು ಸಿಂಗಪುರದ ಹೈಕಮಿಷನರ್ ಸೈಮನ್ ವಾಂಗ್ ಆಹ್ವಾನಿಸಿದ್ದಾರೆ. ಕಾರ್ಯಕ್ರಮದ ಮೊದಲ ದಿನ ಪಾಲ್ಗೊಳ್ಳಲು ಅವಕಾಶ ನೀಡುವಂತೆ ಕೋರಿ ಲೆಫ್ಟಿನೆಂಟ್ ಗವರ್ನರ್‌ಗೆ ಮನವಿ ಮಾಡಿದ್ದಾರೆ. 'ಸಿಂಗಪುರಕ್ಕೆ ಹೋಗಲು ನನಗೆ ಅನುಮತಿ ಪತ್ರ ಸಿಗದಿರುವುದು ಬೇಸರ ತರಿಸಿದೆ. ಜೂನ್ 7ರಂದೇ ಪತ್ರ ಬರೆದಿದ್ದೇನೆ. ಪ್ರತಿಕ್ರಿಯೆ ಬಂದಿಲ್ಲ. ಪ್ರಮುಖ ಸಭೆಯಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿಯನ್ನು ತಡೆಯುತ್ತಿರುವುದು ಸರಿಯಲ್ಲ' ಎಂದು ಕೇಜ್ರಿವಾಲ್ ಪತ್ರದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ತಮಿಳುನಾಡು: ಶಾಲೆಯ 13 ಬಸ್‌ಗಳಿಗೆ ಬೆಂಕಿ, 16 ಪೊಲೀಸರಿಗೆ ಗಾಯ–ಹಲವೆಡೆ ನಿಷೇಧಾಜ್ಞೆ

ವಿದ್ಯಾರ್ಥಿನಿ ಸಾವು: ಭುಗಿಲೆದ್ದ ಹಿಂಸಾಚಾರ

ಪ್ರಜಾವಾಣಿ ವಾರ್ತೆ

ಚಿನ್ನಸೇಲಂನ ಖಾಸಗಿ ವಸತಿ ಶಾಲೆಯ ಬಸ್‌ಗಳಿಗೆ ಪ್ರತಿಭಟನಕಾರರು ಭಾನುವಾರ ಬೆಂಕಿ ಹಚ್ಚಿದರು –ಪಿಟಿಐ ಚಿತ್ರ

ಚೆನ್ನೈ: ತಮಿಳುನಾಡಿನ ಕಲ್ಲಕುರಿಚಿ ಜಿಲ್ಲೆಯ ಚಿನ್ನಸೇಲಂನಲ್ಲಿರುವ ಖಾಸಗಿ ವಸತಿ ಶಾಲೆಯೊಂದರ ವಿದ್ಯಾರ್ಥಿನಿ ಜುಲೈ 13ರಂದು ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಆಕೆಯ ಸಾವಿಗೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿ ನಾಲ್ಕು ದಿನಗಳಿಂದ ನಡೆಯುತ್ತಿದ್ದ ಪ್ರತಿಭಟನೆ ಭಾನುವಾರ ಹಿಂಸಾಚಾರಕ್ಕೆ ತಿರುಗಿದೆ.

ಪ್ರತಿಭಟನಕಾರರು ವಾಹನಗಳಿಗೆ ಬೆಂಕಿ ಹಚ್ಚಿ, ಕಲ್ಲು ತೂರಾಟ ನಡೆಸಿದರು. ಈ ವೇಳೆ 16 ಮಂದಿ ಪೊಲೀಸರು ಗಾಯಗೊಂಡಿದ್ದಾರೆ. ಹಿಂಸಾಚಾರ ತಡೆಯಲು ಪೊಲೀಸರು ಎರಡು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿದರು.

ಹಿಂಸಾಚಾರದ ಹಿನ್ನೆಲೆಯಲ್ಲಿ ಕಲ್ಲಕುರಿಚಿ ಜಿಲ್ಲೆಯ ವಿವಿಧೆಡೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

'ಖಾಸಗಿ ಶಾಲೆಯ ಆವರಣಕ್ಕೆ ನುಗ್ಗಿ 13 ಶಾಲಾ ಬಸ್‌ಗಳಿಗೆ ಹಾಗೂ ಪೊಲೀಸ್ ವಾಹನಗಳಿಗೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದಾರೆ. ಶಾಲೆಯ ನಾಮಫಲಕವನ್ನು ಧ್ವಂಸಗೊಳಿಸಿ, ಅಲ್ಲಿನ ಪೀಠೋಪಕರಣಗಳಿಗೆ ಹಾನಿ ಎಸಗಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾಂತಿ ಕಾಪಾಡುವಂತೆ ಪ್ರತಿಭಟನಕಾರರಲ್ಲಿ ಮನವಿ ಮಾಡಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ 'ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ. ಕಲ್ಲಕುರಿಚಿಗೆ ಧಾವಿಸಲು ಉನ್ನತ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಹಿಂಸಾಚಾರಕ್ಕೆ ಸಂಬಂಧಿಸಿ 35 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ಕುರಿತು ಸಿಬಿ–ಸಿಐಡಿ ತನಿಖೆ ನಡೆಯಬೇಕೆಂದು ಆಗ್ರಹಿಸಿ ವಿದ್ಯಾರ್ಥಿನಿಯ ಪೋಷಕರು ಮದ್ರಾಸ್ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಖಾಸಗಿ ಶಾಲೆಯ ಹಾಸ್ಟೆಲ್‌ನ ಮೂರನೇ ಮಹಡಿಯ ಕೊಠಡಿಯೊಂದರಲ್ಲಿ ವಾಸವಾಗಿದ್ದ ಬಾಲಕಿ ಮೇಲಿನಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಶಂಕಿಸಲಾಗಿದೆ. ಬಾಲಕಿಯು ಸಾಯುವ ಮುನ್ನ ಆಕೆಯ ದೇಹದಲ್ಲಿ ಗಾಯಗಳಾಗಿದ್ದವು ಎಂದು ಮರಣೋತ್ತರ ಪರೀಕ್ಷೆಯಲ್ಲಿ ತಿಳಿದು ಬಂದಿತ್ತು. ಬಳಿಕ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ಬಾಲಕಿಯ ಸಾವಿಗೆ ನ್ಯಾಯ ದೊರೆಯಬೇಕೆಂದು ಆಗ್ರಹಿಸಿ ಮೃತ ಬಾಲಕಿಯ ಪೋಷಕರು, ಸಂಬಂಧಿಕರು ಮತ್ತು ಗ್ರಾಮಸ್ಥರು ನಿರಂತರ ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನೆಗೆ ರಾಜಕೀಯ ಸಂಘಟನೆಗಳು ಹಾಗೂ ಎಡ ಪಕ್ಷದ ಯುವ ಘಟಕಗಳು ಬೆಂಬಲ ನೀಡಿವೆ. ಹಿಂಸಾಚಾರದಿಂದಾಗಿ ಚೆನ್ನೈ-ಸೇಲಂ ಹೆದ್ದಾರಿಯಲ್ಲಿ ಸಂಚಾರಕ್ಕೆ ಅಡಚಣೆಯಾಯಿತು.

ಇಬ್ಬರು ಶಿಕ್ಷಕರ ಹೆಸರು ಉಲ್ಲೇಖ

ಬಾಲಕಿ ಬರೆದಿಟ್ಟಿದ್ದಾಳೆ ಎನ್ನಲಾದ ಪತ್ರದಲ್ಲಿ ಇಬ್ಬರು ಶಿಕ್ಷಕರ ಹೆಸರು ಉಲ್ಲೇಖವಾಗಿದ್ದು, ಅವರು ತನಗೆ ಕಿರುಕುಳ ನೀಡುತ್ತಿದ್ದರು ಎಂದು ಬರೆದಿರುವುದಾಗಿ ಪೋಷಕರು ಆರೋಪಿಸಿದ್ದಾರೆ. ಬಾಲಕಿಯ ಸಾವಿನ ವಿಚಾರದಲ್ಲಿ ಶಾಲಾ ಆಡಳಿತದ ಕೈವಾಡ ಇರುವ ಶಂಕೆ ಇದ್ದು, ಶಾಲಾ ಆಡಳಿತದ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಲಸಿಕೆ: 200 ಕೋಟಿ ಡೋಸ್ ಮೈಲಿಗಲ್ಲು

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19ರ ವಿರುದ್ಧದ ಲಸಿಕಾ ಅಭಿಯಾನವು ಭಾನುವಾರ 200 ಕೋಟಿ ಡೋಸ್‌ಗಳ ಮೈಲಿಗಲ್ಲು ದಾಟಿದೆ.

ಈ ಸಾಧನೆಯನ್ನು ಶ್ಲಾಘಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು 'ಇದು ಕೋವಿಡ್ ವಿರುದ್ಧದ ಹೋರಾಟಕ್ಕೆ ಬಲ ನೀಡಿದೆ' ಎಂದಿದ್ದಾರೆ.

'ಭಾರತವು ಮತ್ತೊಮ್ಮೆ ಇತಿಹಾಸ ಸೃಷ್ಟಿಸಿದೆ. ಲಸಿಕಾ ಅಭಿಯಾನವು 200 ಕೋಟಿ ಡೋಸ್‌ಗಳ ಸಂಖ್ಯೆಯನ್ನು ದಾಟಿರುವುದಕ್ಕೆ ಎಲ್ಲಾ ಭಾರತೀಯರಿಗೂ ಅಭಿನಂದನೆಗಳು. ಲಸಿಕಾ ಅಭಿಯಾನವನ್ನು ಸಾಟಿಯಿಲ್ಲದ ವೇಗದಲ್ಲಿ ಕೊಂಡೊಯ್ಯಲು ಕೊಡುಗೆ ನೀಡಿದವರ ಬಗ್ಗೆ ಹೆಮ್ಮೆ ಇದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ದೇಶದಲ್ಲಿ ಶೇ 98ರಷ್ಟು ವಯಸ್ಕರು ಲಸಿಕೆಯ ಒಂದು ಡೋಸ್ ಮತ್ತು ಶೇ 90ರಷ್ಟು ಜನರು ಎರಡು ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ ಎಂದು ಆರೋಗ್ಯ ಸಚಿವಾಲಯದ ಅಂಕಿ–ಅಂಶಗಳು ತಿಳಿಸಿವೆ.

15ರಿಂದ 18ರೊಳಗಿನ ವಯಸ್ಸಿನವರಲ್ಲಿ ಶೇ 82ರಷ್ಟು ಮಂದಿ ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದಾರೆ. ಶೇ 68ರಷ್ಟು ಮಂದಿ ಎರಡು ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ. 12ರಿಂದ 14ರೊಳಗಿನ ವಯಸ್ಸಿವರಲ್ಲಿ ಶೇ 81 ಮಕ್ಕಳು ಮೊದಲ ಡೋಸ್ ಹಾಗೂ ಶೇ 56 ರಷ್ಟು ಮಕ್ಕಳು ಎರಡು ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ ಎಂದೂ ಹೇಳಿವೆ.

ದೇಶದ ಗ್ರಾಮೀಣ ಪ್ರದೇಶಗಳ ಲಸಿಕಾ ಕೇಂದ್ರಗಳಲ್ಲಿ ಶೇ 71 ರಷ್ಟು ಹಾಗೂ ನಗರ ಪ್ರದೇಶದಲ್ಲಿ ಶೇ 29ರಷ್ಟು ಲಸಿಕೆ ನೀಡಲಾಗಿದೆ. ಒಟ್ಟುಡೋಸ್‌ಗಳಲ್ಲಿ ಶೇ 48.9ರಷ್ಟು ಪುರುಷರಿಗೆ, ಶೇ 51.5ರಷ್ಟು ಮಹಿಳೆಯರಿಗೆ ಹಾಗೂ ಶೇ0.02ರಷ್ಟು ಇತರರಿಗೆ ನೀಡಲಾಗಿದೆ ಎಂದೂ ವಿವರಿಸಿದೆ.

ಆಂಧ್ರ ಪ್ರದೇಶ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಲಕ್ಷದ್ವೀಪ, ಛತ್ತೀಸಗಡ, ತೆಲಂಗಾಣ ಮತ್ತು ಗೋವಾಗಳಲ್ಲಿ 12 ವರ್ಷಕ್ಕಿಂತ ಮೇಲ್ಪಟ್ಟ ಅರ್ಹರಿಗೆ ಶೇ 100ರಷ್ಟು ಲಸಿಕೆ ನೀಡಲಾಗಿದೆ.

20,528 ಹೊಸ ಪ್ರಕರಣ

ದೇಶದಲ್ಲಿ ಭಾನುವಾರ ಬೆಳಿಗ್ಗೆ 8 ಗಂಟೆಗೆ ಮುಕ್ತಾಯಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 20,528 ಹೊಸ ಕೋವಿಡ್ ಪ್ರಕರಣಗಳು ದಾಖಲಾಗಿದ್ದು, 49 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಐಸಿಎಸ್‌ಇ 10ನೇ ತರಗತಿ ಫಲಿತಾಂಶ • ಶೇ 99.97ರಷ್ಟು ಒಟ್ಟು ಫಲಿತಾಂಶ

4 ವಿದ್ಯಾರ್ಥಿಗಳಿಗೆ ಮೊದಲ ರ‍್ಯಾಂಕ್

ನವದೆಹಲಿ (ಪಿಟಿಐ): ಐಸಿಎಸ್‌ಇ 10ನೇ ತರಗತಿ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ನಾಲ್ವರು ವಿದ್ಯಾರ್ಥಿಗಳು ಶೇ 99.8 ರಷ್ಟು ಅಂಕಗಳನ್ನು ಪಡೆಯುವ ಮೂಲಕ ಮೊದಲನೇ ರ‍್ಯಾಂಕ್‌ಅನ್ನು ಹಂಚಿಕೊಂಡಿದ್ದಾರೆ. ಒಟ್ಟಾರೆ ಫಲಿತಾಂಶ ಶೇ 99.97ರಷ್ಟು ಎಂದು ಮೂಲಗಳು ತಿಳಿಸಿವೆ.

ಹರ್ಗುನ್ ಕೌರ್ ಮಥಾರು (ಪುಣೆ), ಅನಿಕಾ ಗುಪ್ತಾ (ಕಾನ್ಪುರ), ಪುಷ್ಕರ್ ತ್ರಿಪಾಠಿ (ಬಲರಾಂಪುರ, ಉತ್ತರಪ್ರದೇಶ) ಹಾಗೂ ಕನಿಷ್ಕಾ ಮಿತ್ತಲ್ (ಲಖನೌ) ಮೊದಲ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳು.

34 ವಿದ್ಯಾರ್ಥಿಗಳು ಎರಡನೇ ರ‍್ಯಾಂಕ್ ಹಂಚಿಕೊಂಡಿದ್ದು, ಶೇ 99.6ರಷ್ಟು ಅಂಕ ಗಳಿಸಿದ್ದಾರೆ. ಶೇ 99.4ರಷ್ಟು ಅಂಕ ಗಳಿಸಿರುವ 72 ವಿದ್ಯಾರ್ಥಿಗಳು ಮೂರನೇ ರ‍್ಯಾಂಕ್ ಪಡೆದಿದ್ದಾರೆ.

ಐಸಿಎಸ್‌ಇ ಪರೀಕ್ಷೆ ಫಲಿತಾಂಶದಲ್ಲಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆಗೆ ಕುಳಿತವರ ಪೈಕಿ ಶೇ 99.08ರಷ್ಟು ವಿದ್ಯಾರ್ಥಿನಿಯರು ತೇರ್ಗಡೆಯಾಗಿದ್ದರೆ, ಉತ್ತೀರ್ಣರಾದ ಬಾಲಕರ ಪ್ರಮಾಣ ಶೇ 99.07.

ದಕ್ಷಿಣ ಹಾಗೂ ಪಶ್ಚಿಮ ವಲಯಗಳು ಉತ್ತಮ ಫಲಿತಾಂಶ (ಶೇ 99.9ರಷ್ಟು) ದಾಖಲಿಸಿವೆ. ಉತ್ತರ ವಲಯದ ತೇರ್ಗಡೆ ಪ್ರಮಾಣ ಶೇ 99.98ರಷ್ಟಿದೆ.

'ಮೊದಲ ಮತ್ತು ಎರಡನೇ ಸೆಮಿಸ್ಟರ್ ಫಲಿತಾಂಶವನ್ನು ಸಮಾನವಾಗಿ ಪರಿಗಣಿಸಲಾಗಿದೆ. ಜೊತೆಗೆ, ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಸೇರಿಸಿ ಅಂತಿಮ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಕೋವಿಡ್ ಪಿಡುಗಿನ ಹಿನ್ನೆಲೆಯಲ್ಲಿ ಎರಡು ವರ್ಷಗಳ ಬಳಿಕ ಮಂಡಳಿಯು ಮೆರಿಟ್ ಪಟ್ಟಿಯನ್ನು ಪ್ರಕಟಿಸಿದೆ' ಎಂದು ಸಿಐಎಸ್‌ಸಿಇ ಕಾರ್ಯದರ್ಶಿ ಗೆರ್ರಿ ಆರಥೂನ್ ಅವರು ತಿಳಿಸಿದ್ದಾರೆ.

ದೇಶದಾದ್ಯಂತ 2,535 ಶಾಲೆಗಳ 2,31,063 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ದೃಷ್ಟಿ ದೋಷವುಳ್ಳ 22 ವಿದ್ಯಾರ್ಥಿಗಳ ಪೈಕಿ ಏಳು ಜನರು ಶೇ 90ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ಕಲಿಕೆಯಲ್ಲಿ ತೊಂದರೆಯಿರುವ ವಿದ್ಯಾರ್ಥಿಗಳ ಪೈಕಿ 78 ಮಂದಿ ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ.

ರಾಜ್ಯದ ಐವರಿಗೆ 5ನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ


ಆದಿ ಕಿಶೋರ್

ಸಂಧ್ಯಾ

ನಿಹಾರಾ

ಬೆಂಗಳೂರು: ಐಸಿಎಸ್‌ಇ 10ನೇ ತರಗತಿಯ ಫಲಿತಾಂಶದಲ್ಲಿ ಬೆಂಗಳೂರಿನ ಐವರು ವಿದ್ಯಾರ್ಥಿಗಳು ರಾಷ್ಟ್ರೀಯಮಟ್ಟದಲ್ಲಿ ಐದನೇ ರ‍್ಯಾಂಕ್ ಪಡೆದಿದ್ದಾರೆ.

ರಾಷ್ಟ್ರೀಯ ಮಟ್ಟದಲ್ಲಿ 33 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಐದನೇ ರ‍್ಯಾಂಕ್ ಪಡೆದಿದ್ದಾರೆ. ಬೆಂಗಳೂರಿನ ನ್ಯೂ ಹೊರೈಝುನ್ ಪಬ್ಲಿಕ್ ಶಾಲೆಯ ಎಸ್. ಸಂಧ್ಯಾ, ಬೆಥನಿ ಪ್ರೌಢ ಶಾಲೆಯ ನಿಹಾರಾ ಮರಿಯಂ ಉಮ್ಮೆನ್, ಕ್ಲಾರೆನ್ಸ್ ಪಬ್ಲಿಕ್ ಶಾಲೆಯ ರಾಹುಲ್ ದತ್ತ, ಎಂಇಎಸ್ ಕಿಶೋರ್ ಕೇಂದ್ರ ಪಬ್ಲಿಕ್ ಶಾಲೆಯ ಬಿ.ಎನ್. ವಿಧಾತ್ರಿ ಮತ್ತು ಟ್ರೈಯೊ ವರ್ಲ್ಡ್ ಶಾಲೆಯ ಆದಿ ಕಿಶೋರ್ 5ನೇ ರ‍್ಯಾಂಕ್ ಪಡೆದವರು.

ಈ ಐದೂ ವಿದ್ಯಾರ್ಥಿಗಳು ಇಂಗ್ಲಿಷ್ ಮತ್ತು ನಾಲ್ಕು ಉತ್ತಮ ವಿಷಯಗಳಲ್ಲಿ 498 ಅಂಕ (ಶೇ 99.60) ಪಡೆದಿದ್ದಾರೆ. 18 ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಎರಡನೇ ರ‍್ಯಾಂಕ್ ಪಡೆದಿದ್ದಾರೆ. ರಾಜ್ಯದಿಂದ ಈ ಬಾರಿ ಒಟ್ಟು 23,293 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಒಟ್ಟು ತೇರ್ಗಡೆ ಪ್ರಮಾಣ ಶೇ 99.99. ಈ ಬಾರಿ ಕೂಡಾ ವಿದ್ಯಾರ್ಥಿನಿಯರು (ಶೇ 99.99) ಮೇಲುಗೈ ಸಾಧಿಸಿದ್ದಾರೆ. ಗಂಡು ಮಕ್ಕಳ ಉತ್ತೀರ್ಣ ಪ್ರಮಾಣ ಶೇ 99.98.

'ನಾನು ಈ ಫಲಿತಾಂಶವನ್ನು ನಿರೀಕ್ಷೆ ಮಾಡಿರಲಿಲ್ಲ. ತುಂಬಾ ಖುಷಿಯಾಗಿದೆ. ಇತರ ಶಾಲೆಗಳ ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಓದಿ ಪರೀಕ್ಷೆಗೆ ತಯಾರಿ ನಡೆಸಿದ್ದೆ' ಎಂದು ನಿಹಾರಾ ಹೇಳಿದರು.

ಎರಡು ವಿಮಾನಗಳಲ್ಲಿ ತಾಂತ್ರಿಕ ದೋಷ

ನವದೆಹಲಿ (ಪಿಟಿಐ): ತಾಂತ್ರಿಕ ಸಮಸ್ಯೆಗಳಿಂದಾಗಿ ಭಾರತದ ಎರಡು ವಿಮಾನಗಳು ತುರ್ತಾಗಿ ಬದಲಿ ವಿಮಾನ ನಿಲ್ದಾಣಗಳಲ್ಲಿ ಇಳಿದ ಹಾಗೂ ಮತ್ತೊಂದು ವಿಮಾನದ ಕಾಕ್‌ಪಿಟ್‌ನಲ್ಲಿ ಹಕ್ಕಿಯೊಂದು ಸಿಲುಕಿಕೊಂಡ ವಿದ್ಯಮಾನಗಳು ನಡೆದಿವೆ.

ಕ್ಯಾಬಿನ್‌ನಲ್ಲಿ ಸುಟ್ಟ ವಾಸನೆ ಬಂದ ಹಿನ್ನೆಲೆಯಲ್ಲಿ ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ಕ್ಯಾಲಿಕಟ್-ದುಬೈ ವಿಮಾನವನ್ನು ಶನಿವಾರ ರಾತ್ರಿ ಮಸ್ಕತ್‌ನಲ್ಲಿ ಇಳಿಸಲಾಯಿತು ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮತ್ತೊಂದು ಘಟನೆಯಲ್ಲಿ, ಎಂಜಿನ್‌ನಲ್ಲಿ ದೋಷ ಕಂಡು ಬಂದಿದ್ದರಿಂದ ಇಂಡಿಗೊದ ಶಾರ್ಜಾ-ಹೈದರಾಬಾದ್ ವಿಮಾನವನ್ನು ಭಾನುವಾರ ಕರಾಚಿಯಲ್ಲಿ ಇಳಿಸಲಾಯಿತು.

ಕಾಕ್‌ಪಿಟ್‌ನಲ್ಲಿ ಪಕ್ಷಿ ಪತ್ತೆ: ಜುಲೈ 15 ರಂದು ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ ಬಹರೇನ್-ಕೊಚ್ಚಿ ವಿಮಾನದ ಕಾಕ್‌ಪಿಟ್‌ನಲ್ಲಿ ಪಕ್ಷಿ ಪತ್ತೆಯಾಗಿದೆ ಎಂದು ಡಿಜಿಸಿಎ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ವಿಮಾನವು 37,000 ಅಡಿ ಎತ್ತರದಲ್ಲಿದ್ದಾಗ ಸಹ-ಪೈಲಟ್ ಬದಿಯ ಕೈಗವಸು ವಿಭಾಗದಲ್ಲಿ ಪಕ್ಷಿ ಕಂಡು ಬಂದಿದೆ. ವಿಮಾನವು ಕೊಚ್ಚಿಯಲ್ಲಿ ಸುರಕ್ಷಿತವಾಗಿ ಇಳಿಯಿತು.

ಮೇಲ್ನೋಟಕ್ಕೆ, ವಿದೇಶಿ ನಿಲ್ದಾಣದಲ್ಲಿನ ಸೇವೆಯಲ್ಲಿ ಲೋಪ ಕಂಡುಬಂದಂತೆ ತೋರುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಮೂರೂ ಘಟನೆಗಳ ಬಗ್ಗೆ ಡಿಜಿಸಿಎ ತನಿಖೆ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜುಲೈ 14ರಂದು, ಎಂಜಿನ್‌ಗಳಲ್ಲಿ ಕಂಪನಗಳು ಕಂಡು ಬಂದಿದ್ದರಿಂದ ಇಂಡಿಗೊದ ದೆಹಲಿ-ವಡೋದರಾ ವಿಮಾನವನ್ನು ಮುನ್ನೆಚ್ಚರಿಕೆಯಿಂದ ಜೈಪುರಕ್ಕೆ ತಿರುಗಿಸಲಾಗಿತ್ತು.

ಜೂನ್ 19 ರಿಂದ ಎಂಟು ಬಾರಿ ಅಸಮರ್ಪಕ ಕಾರ್ಯಾಚರಣೆಗಾಗಿ ಸ್ಪೈಸ್‌ಜೆಟ್ ಸಂಸ್ಥೆಗೆ ಡಿಜಿಸಿಎ ಶೋಕಾಸ್ ನೋಟಿಸ್ ನೀಡಿ, ಪ್ರತಿಕ್ರಿಯೆ ನೀಡಲು ಮೂರು ವಾರ ಕಾಲಾವಕಾಶ ನೀಡಿದೆ.

ಮೊದಲನೇ ವರ್ಷದ ಚಿರಸ್ಮರಣೆ

ಬಿ.ಕೆ. ವಿನೋದ್‌ಕುಮಾರ್

(21-06-1971 - 28-07-2021)

ಪ್ರಥಮ ದರ್ಜೆ ಗುತ್ತಿಗೆದಾರರು, ವಿಜಯನಗರ, ಬೆಂಗಳೂರು

ನೀವು ನಮ್ಮನಗಲಿದರೂ ನಿಮ್ಮ ಸರಳತೆ, ಪ್ರೀತಿ ಆದರ್ಶಗಳೇ ನಮಗೆ ದಾರಿದೀಪ, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...

ದುಃಖತಪ್ತ: ಪ್ರಭಾವತಿ ವಿನೋದ್‌ಕುಮಾರ್ ಮತ್ತು ಕುಟುಂಬದವರು

ಸಿದ್ಧಾಂತದ ಜೊತೆ ರಾಜಿಯಾಗದ ಆಳ್ವ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಬಲ ಹಾಗೂ ವಿಶ್ವಾಸಾರ್ಹ ಅಭ್ಯರ್ಥಿ ಇಲ್ಲದೇ ಹೋದರೆ ಹೋರಾಟದಲ್ಲಿ ಪರಾಭವ ಖಚಿತ ಎನ್ನುವ ಪರಿಸ್ಥಿತಿಯಿದ್ದಾಗ ಪ್ರತಿಪಕ್ಷಗಳು ತಿರುಗಿ ನೋಡಿದ್ದು ಮಾರ್ಗರೇಟ್ ಆಳ್ವ ಅವರತ್ತ. ಅವರು ಪ್ರತಿಪಕ್ಷಗಳಿಗೆ ನಿರಾಸೆ ಮಾಡಲಿಲ್ಲ. ವರ್ಚಸ್ವಿ ವ್ಯಕ್ತಿತ್ವ, ಉತ್ತಮ ಆಡಳಿತಗಾರ್ತಿ ಎಂಬ ಶ್ರೇಯದ ಜೊತೆಗೆ ತಮ್ಮ ಸಿದ್ಧಾಂತ, ಬದ್ಧತೆ ಹಾಗೂ ನಿಲುವುಗಳನ್ನು ಕಾಪಾಡಿಕೊಳ್ಳಲು ಏನನ್ನಾದರೂ ಕಳೆದುಕೊಳ್ಳಲು ಸಿದ್ಧವಿರುವ ಮಾರ್ಗರೇಟ್, ತಮ್ಮ ರಾಜಕೀಯ ಜೀವನದಲ್ಲಿ ಎಂದೂ ರಾಜಿ ಮಾಡಿಕೊಂಡವರಲ್ಲ.

2008ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್‌ಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಅವರು ತಮ್ಮ ಪಕ್ಷದ ವಿರುದ್ಧವೇ ಸಾರ್ವಜನಿಕವಾಗಿ ದನಿ ಎತ್ತಿದ್ದರು. ಅವರ ಪುತ್ರ ನಿವೇದಿತ್ ಅವರಿಗೆ ಟಿಕೆಟ್ ಸಿಕ್ಕಿಲ್ಲ ಎಂಬ ಕಾರಣಕ್ಕೆ ಅವರು ಬೇಸರಗೊಂಡಿದ್ದರು ಎನ್ನಲಾಗಿತ್ತು. ಎಲ್ಲ ರಾಜ್ಯಗಳಲ್ಲಿ ನಾಯಕರ ಮಕ್ಕಳಿಗೆ ಟಿಕೆಟ್ ನೀಡಿರುವುದನ್ನು ಅವರು ಬೊಟ್ಟು ಮಾಡಿ ತೋರಿಸಿದ್ದರು.

ತಮ್ಮ ಆತ್ಮಚರಿತ್ರೆ 'ಕರೇಜ್ ಅಂಡ್ ಕಮಿಟ್‌ಮೆಂಟ್' ಪುಸ್ತಕದಲ್ಲಿ ವಿವರಿಸಿದ್ದ ಹಲವು ವಿಚಾರಗಳು ಸಾಕಷ್ಟು ಸುದ್ದಿ ಮಾಡಿದ್ದವು. ಎ.ಕೆ. ಆ್ಯಂಟನಿ ಅವರನ್ನು ಕೇರಳ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುವಂತೆ ತಾವು ಶಿಫಾರಸು ಮಾಡಿದ್ದ ಅಂಶವನ್ನು ಅವರು ಪುಸ್ತಕದಲ್ಲಿ ಉಲ್ಲೇಖಿಸಿದ್ದರು. ಆಳ್ವ ಅವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನೇ ಕಳೆದುಕೊಳ್ಳಬೇಕಾಯಿತು. ಇದರಲ್ಲಿ ಆ್ಯಂಟನಿ ಪಾತ್ರವಿತ್ತು ಎಂದು ಆಳ್ವ ದೂರಿದ್ದರು.

ನಂತರದ ದಿನಗಳಲ್ಲಿ ಆಳ್ವ ಅವರನ್ನು ಉತ್ತರಾ ಖಂಡ, ಗುಜರಾತ್, ರಾಜಸ್ಥಾನ ಹಾಗೂ ಗೋವಾ ರಾಜ್ಯಗಳ ರಾಜ್ಯಪಾಲರನ್ನಾಗಿ ನೇಮಕ ಮಾಡಲಾ ಗಿತ್ತು.

1974ರಲ್ಲಿ ತಮ್ಮ 30ನೇ ವಯಸ್ಸಿನಲ್ಲಿ ಸಂಸತ್ ಪ್ರವೇಶಿಸಿದ್ದ ಅವರು, ಬಳಿಕ ಹಿಂದಿರುಗಿ ನೋಡಿದ್ದೇ ಇಲ್ಲ. ಸಂಸದರಾಗಿದ್ದ ತಮ್ಮ ಅತ್ತೆ–ಮಾವಂದಿರಾದ ವಯಲೆಟ್ ಆಳ್ವ ಹಾಗೂ ಜೋಕಿಮ್ ಅವರಿಂದ ರಾಜಕೀಯದ ಪಟ್ಟುಗಳನ್ನು ಕಲಿತಿದ್ದರು.

ರಾಜೀವ್ ಗಾಂಧಿ ಹಾಗೂ ಪಿ.ವಿ. ನರಸಿಂಹರಾವ್ ಅವರು ಆಳ್ವ ಅವರನ್ನು ತಮ್ಮ ಸಂಪುಟಕ್ಕೆ ಆಯ್ಕೆ ಮಾಡಿದ್ದರು. 1942ರಲ್ಲಿ ಮಂಗಳೂರಿನಲ್ಲಿ ಜನಿಸಿದ ಮಾರ್ಗರೇಟ್, ಕಾಲೇಜು ದಿನಗಳಿಂದಲೇ ಉತ್ತಮ ಚರ್ಚಾಪಟು ಎನಿಸಿಕೊಂಡಿದ್ದರು. ರಾಜಕೀಯಕ್ಕೆ ಬರುವ ಮುನ್ನ ಅವರು ವಕೀಲರಾಗಿದ್ದರು. 1999ರಲ್ಲಿ ಲೋಕಸಭೆಗೆ ಒಮ್ಮೆ ಆಯ್ಕೆಯಾಗಿದ್ದ ಅವರು 2004ರಲ್ಲಿ ಪರಾಭವಗೊಂಡಿದ್ದರು.

ರಾಷ್ಟ್ರಪತಿ ಚುನಾವಣೆ ಇಂದು

ನವದೆಹಲಿ: ದೇಶದ ನೂತನ ರಾಷ್ಟ್ರಪತಿ ಆಯ್ಕೆಗೆ ಸೋಮವಾರ ಮತದಾನ ನಡೆಯಲಿದೆ. ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಹಾಗೂ ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿ ಯಶವಂತ ಸಿನ್ಹಾ ಅವರು ಕಣದಲ್ಲಿದ್ದಾರೆ. ಸರಿಸುಮಾರು ಶೇ 60ಕ್ಕೂ ಹೆಚ್ಚು ಮತಗಳನ್ನು ಹೊಂದಿರುವ ಪಕ್ಷಗಳ ಬೆಂಬಲ ಗಳಿಸಿರುವ ಮುರ್ಮು ಅವರ ಗೆಲುವಿನ ಹಾದಿ ಸುಗಮವಾಗಿದೆ.

ಸಂಸತ್ ಭವನ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮತದಾನ ನಡೆಯಲಿದ್ದು, ಗುರುವಾರ (ಜುಲೈ 21) ಫಲಿತಾಂಶ ಪ್ರಕಟವಾಗಲಿದೆ. ಇದೇ 25ರಂದು ರಾಮನಾಥ ಕೋವಿಂದ್ ಅವರ ಅಧಿಕಾರಾವಧಿ ಮುಕ್ತಾಯ ಆಗಲಿದೆ.

ಒಟ್ಟು 10.86 ಲಕ್ಷ ಮತಗಳ ಪೈಕಿ ಮುರ್ಮು ಅವರು 6.61 ಲಕ್ಷ ಮತಗಳನ್ನು ಪಡೆಯಬಹುದು ಎನ್ನಲಾಗಿದೆ. ಯಶವಂತ್ ಸಿನ್ಹಾ ಅವರು 4.19 ಲಕ್ಷ ಮತಗಳನ್ನು ಪಡೆಯುವ ಸಾಧ್ಯತೆಯಿದೆ.

ಎನ್‌ಡಿಎಯೇತರ ಹಾಗೂ ಯುಪಿಎಯೇತರ ಪಕ್ಷಗಳಾದ ಬಿಜೆಡಿ, ವೈಎಸ್‌ಆರ್ ಕಾಂಗ್ರೆಸ್, ಅಕಾಲಿದಳ, ಟಿಡಿಪಿ ಹಾಗೂ ಶಿವಸೇನಾ ಬೆಂಬಲ ಮುರ್ಮು ಅವರಿಗೆ ಸಿಕ್ಕಿದೆ. ಜಾರ್ಖಂಡ್ ಮೂಲದ ಆದಿವಾಸಿ ಮಹಿಳೆಯನ್ನು ರಾಷ್ಟ್ರಪತಿ ಅಭ್ಯರ್ಥಿಯಾಗಿ ಘೋಷಿಸುವ ಮೂಲಕ ಬಿಜೆಪಿಯು ಜೆಎಂಎಂ ಹಾಗೂ ಜೆಡಿಎಸ್ ಬೆಂಬಲವನ್ನೂ ಗಳಿಸಿಕೊಂಡಿದೆ.

ಆರೋಪಿಗಳ ಖುಲಾಸೆ: ಅರ್ಜಿ ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ಲಖನೌ: ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಎಲ್ಲಾ 32 ಜನ ಆರೋಪಿಗಳನ್ನು ಖುಲಾಸೆಗೊಳಿಸಿ ಸಿಬಿಐ ವಿಶೇಷ ನ್ಯಾಯಾಲಯ ಕಳೆದ ವರ್ಷ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಅಲಹಾಬಾದ್ ಹೈಕೋರ್ಟ್ ಸೋಮವಾರ ಕೈಗೆತ್ತಿಕೊಳ್ಳಲಿದೆ.

ಹಾಜಿ ಮೆಹಬೂಬ್ ಹಾಗೂ ಸೈಯದ್ ಅಖ್ಲಾಕ್ ಎಂಬುವವರು ಈ ಅರ್ಜಿ ಸಲ್ಲಿಸಿದ್ದಾರೆ. ಆರೋಪಿಗಳನ್ನು ಸಿಬಿಐ ವಿಶೇಷ ನ್ಯಾಯಾಲಯ ತಪ್ಪಾಗಿ ಖುಲಾಸೆಗೊಳಿಸಿದೆ ಎಂದು ಅವರು ಅರ್ಜಿಯಲ್ಲಿ ವಿವರಿಸಿದ್ದಾರೆ. ಹೀಗಾಗಿ, ಈ ಅರ್ಜಿಯು ಸಮರ್ಥನೀಯವೇ ಎಂಬ ಬಗ್ಗೆ ಹೈಕೋರ್ಟ್ ವಿಚಾರಣೆ ನಡೆಸುವ ಸಾಧ್ಯತೆ ಇದೆ.

ಬಿಜೆಪಿ ಮುಖಂಡರಾದ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಶಿ, ಉಮಾ ಭಾರತಿ ಹಾಗೂ ಇತರರು ಸೇರಿದಂತೆ 32 ಜನ ಆರೋಪಿಗಳನ್ನು ಖುಲಾಸೆಗೊಳಿಸಿ ವಿಶೇಷ ಸಿಬಿಐ ನ್ಯಾಯಾಧೀಶ ಎಸ್.ಕೆ.ಯಾದವ್ ಅವರು ಕಳೆದ ವರ್ಷ ಜನವರಿಯಲ್ಲಿ ತೀರ್ಪು ನೀಡಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ–4, ಘ.ತ್ಯಾ.ನಿ ವಿಭಾಗ, 2ನೇ ಮಹಡಿ. ಅನೆಕ್ಸ್–2 ಕಟ್ಟಡ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನರಸಿಂಹರಾಜ ಚೌಕ, ಬೆಂಗಳೂರು–560 002.

ಸಂಖ್ಯೆ: ಕಾಪಾಅ–4/ಘತ್ಯಾನಿ/ಟೆಂಡರ್/06/2022–23 ದಿನಾಂಕ: 16.07.2022

ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) (ದ್ವಿಲಕೋಟೆ ಪದ್ಧತಿ ಪ್ರಕಟಣೆ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು–4, ಘ.ತ್ಯಾ.ನಿ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ಅಥವಾ ಸಮನಾಂತರವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾ.ಟೆಂ.ದಾ–ಕೆಡಬ್ಲ್ಯೂ–4**)

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡಗಾರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ
1.	ಮಹದೇವಪುರ ವಿಧಾನಸಭಾ ಕ್ಷೇತ್ರದ ಕಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗಳು ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಎಂ.ಪಿ 1)	875.00	ರೂ.1,00,000/– ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಅಡಿಯಲ್ಲಿ ಇ–ಪಾವತಿ ಮತ್ತು ಉಳಿಕೆ ಮೊತ್ತ ರೂ.7,75,000/–ಗಳನ್ನು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ಗಳು ವಿತರಿಸುವ ಬ್ಯಾಂಕ್ ಖಾತರಿ/ ಎಫ್‌ಡಿಆರ್ ಮೂಲಕ
2.	ಮಹದೇವಪುರ ವಿಧಾನಸಭಾ ಕ್ಷೇತ್ರದ ಕಣ್ಣೂರು ಮತ್ತು ದೊಡ್ಡಗುಬ್ಬಿ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಎಂ.ಪಿ 2)	970.00	ರೂ.1,00,000/– ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಅಡಿಯಲ್ಲಿ ಇ–ಪಾವತಿ ಮತ್ತು ಉಳಿಕೆ ಮೊತ್ತ ರೂ.8,70,000/–ಗಳನ್ನು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ಗಳು ವಿತರಿಸುವ ಬ್ಯಾಂಕ್ ಖಾತರಿ/ ಎಫ್‌ಡಿಆರ್ ಮೂಲಕ
3.	ಮಹದೇವಪುರ ವಿಧಾನಸಭಾ ಕ್ಷೇತ್ರದ ಬಿದರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗಳು ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಎಂ.ಪಿ 3)	965.00	ರೂ.1,00,000/– ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಅಡಿಯಲ್ಲಿ ಇ–ಪಾವತಿ ಮತ್ತು ಉಳಿಕೆ ಮೊತ್ತ ರೂ.8,65,000/–ಗಳನ್ನು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ಗಳು ವಿತರಿಸುವ ಬ್ಯಾಂಕ್ ಖಾತರಿ/ ಎಫ್‌ಡಿಆರ್ ಮೂಲಕ
4.	ಮಹದೇವಪುರ ವಿಧಾನಸಭಾ ಕ್ಷೇತ್ರದ ಬಿದರಹಳ್ಳಿ ಮತ್ತು ಕಿತ್ತಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಎಂ.ಪಿ 4)	920.00	ರೂ.1,00,000/– ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಅಡಿಯಲ್ಲಿ ಇ–ಪಾವತಿ ಮತ್ತು ಉಳಿಕೆ ಮೊತ್ತ ರೂ.8,20,000/–ಗಳನ್ನು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ಗಳು ವಿತರಿಸುವ ಬ್ಯಾಂಕ್ ಖಾತರಿ/ ಎಫ್‌ಡಿಆರ್ ಮೂಲಕ
5.	ಮಹದೇವಪುರ ವಿಧಾನಸಭಾ ಕ್ಷೇತ್ರದ ಕಿತ್ತಗನೂರು ಮತ್ತು ಮಂಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಎಂ.ಪಿ 5)	960.00	ರೂ.1,00,000/– ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಅಡಿಯಲ್ಲಿ ಇ–ಪಾವತಿ ಮತ್ತು ಉಳಿಕೆ ಮೊತ್ತ ರೂ.8,60,000/–ಗಳನ್ನು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ಗಳು ವಿತರಿಸುವ ಬ್ಯಾಂಕ್ ಖಾತರಿ/ ಎಫ್‌ಡಿಆರ್ ಮೂಲಕ
6.	ಮಹದೇವಪುರ ವಿಧಾನಸಭಾ ಕ್ಷೇತ್ರದ ಮಂಡೂರು ಮತ್ತು ಆವಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಎಂ.ಪಿ 6)	995.00	ರೂ.1,00,000/– ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಅಡಿಯಲ್ಲಿ ಇ–ಪಾವತಿ ಮತ್ತು ಉಳಿಕೆ ಮೊತ್ತ ರೂ.8,95,000/–ಗಳನ್ನು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ಗಳು ವಿತರಿಸುವ ಬ್ಯಾಂಕ್ ಖಾತರಿ/ ಎಫ್‌ಡಿಆರ್ ಮೂಲಕ
7.	ಮಹದೇವಪುರ ವಿಧಾನಸಭಾ ಕ್ಷೇತ್ರದ ದೊಡ್ಡಬನಹಳ್ಳಿ ಮತ್ತು ಕನ್ನಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಎಂ.ಪಿ 7)	915.00	ರೂ.1,00,000/– ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಅಡಿಯಲ್ಲಿ ಇ–ಪಾವತಿ ಮತ್ತು ಉಳಿಕೆ ಮೊತ್ತ ರೂ.8,15,000/–ಗಳನ್ನು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ಗಳು ವಿತರಿಸುವ ಬ್ಯಾಂಕ್ ಖಾತರಿ/ ಎಫ್‌ಡಿಆರ್ ಮೂಲಕ
8.	ಭೈರತಿ ಬಂಡೆ, ಭೈರತಿ, ಬಿಳೆಶಿವಾಲೆ, ವಾರಣಾಸಿ, ಸಾದರಮಂಗಲ ಮತ್ತು ಚನ್ನಸಂದ್ರ ಗ್ರಾಮಗಳ ವ್ಯಾಪ್ತಿಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಎಂ.ಪಿ 8)	900.00	ರೂ.1,00,000/– ಆನ್‌ಲೈನ್/ ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಅಡಿಯಲ್ಲಿ ಇ–ಪಾವತಿ ಮತ್ತು ಉಳಿಕೆ ಮೊತ್ತ ರೂ.8,00,000/–ಗಳನ್ನು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ಗಳು ವಿತರಿಸುವ ಬ್ಯಾಂಕ್ ಖಾತರಿ/ ಎಫ್‌ಡಿಆರ್ ಮೂಲಕ

ಟೆಂಡರ್ ವೇಳಾಪಟ್ಟಿ: (1) ಆಸಕ್ತ ಅರ್ಹ ಟೆಂಡರುದಾರರು ಹೆಚ್ಚಿನ ಮಾಹಿತಿಗಳನ್ನು ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಲ್ಲಿ ದಿನಾಂಕ: 04.08.2022ರ ಸಂಜೆ 4:00 ಗಂಟೆಯವರೆಗೆ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ತಿಳಿದುಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ನಿಯೋಜಿತ ಮುಖ್ಯ ಅಭಿಯಂತರರ ಕಚೇರಿ, ಘನ ತ್ಯಾಜ್ಯ ನಿರ್ವಹಣೆ, ನರಸಿಂಹರಾಜ ಚೌಕ, ಬೆಂಗಳೂರು –560 002 ಇಲ್ಲಿ ದಿನಾಂಕ 27.07.2022ರ ಮಧ್ಯಾಹ್ನ 3:00 ಗಂಟೆಗೆ ನಡೆಸಲಾಗುವುದು. (3) ತಾಂತ್ರಿಕ ದಾಖಲೆಗಳನ್ನು ಅವಶ್ಯಕ ಮಾಹಿತಿಗಳು/ದಸ್ತಾವೇಜುಗಳೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ದಾಖಲೆಗಳ ಪ್ರಕಾರ ದಿನಾಂಕ: 04.08.2022ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸತಕ್ಕದ್ದು ಹಾಗೂ ತಾಂತ್ರಿಕ–ವಾಣಿಜ್ಯ ಟೆಂಡರ್ ಒಳಗೊಂಡ ಮೊದಲ ಲಕೋಟೆಯನ್ನು ಇ–ಪೋರ್ಟಲ್ ಮೂಲಕ ಮಾತ್ರ ದಿನಾಂಕ: 05.08.2022ರ ಸಂಜೆ 4:30 ಗಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು–4, ಘನ ತ್ಯಾಜ್ಯ ನಿರ್ವಹಣೆ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಿಆರ್‌ಪಿಎಫ್ ಅಧಿಕಾರಿ ಹುತಾತ್ಮ

ಶ್ರೀನಗರ (ಪಿಟಿಐ): ಪುಲ್ವಾಮ ಪ್ರದೇಶದಲ್ಲಿ ಉಗ್ರರು ನಡೆಸಿದ ದಾಳಿಯಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಸಬ್‌ಇನ್‌ಸ್ಪೆಕ್ಟರ್ ವಿನೋದ್ ಕುಮಾರ್ ಭಾನುವಾರ ಮೃತಪಟ್ಟಿದ್ದಾರೆ.

ದಕ್ಷಿಣ ಕಾಶ್ಮೀರದ ಗಂಗೂ ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದ ಪೊಲೀಸ್ ಹಾಗೂ ಸಿಆರ್‌ಪಿಎಫ್ ತಂಡದ ಮೇಲೆ ಮಧ್ಯಾಹ್ನ 2.20ರ ವೇಳೆಗೆ ಉಗ್ರರು ದಾಳಿ ಮಾಡಲಾರಂಭಿಸಿದರು. ಗಾಯಗೊಂಡ ವಿನೋದ್ ಕುಮಾರ್ ಅವರನ್ನು ಪುಲ್ವಾಮದ ಆಸ್ಪತ್ರೆಯೊಂದಕ್ಕೆ ದಾಖಲು ಮಾಡಲಾಯಿತು. ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಡಬ್ಲ್ಯುಸಿಯಿಂದ ಕಾಮತ್ ವಜಾ

ಪಣಜಿ: ಗೋವಾದ ಮಾಜಿ ಮುಖ್ಯಮಂತ್ರಿ ದಿಗಂಬರ್ ಕಾಮತ್ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯುಸಿ) ಕಾಯಂ ಆಹ್ವಾನಿತ ಸ್ಥಾನದಿಂದ ಭಾನುವಾರ ವಜಾ ಮಾಡಲಾಗಿದೆ.

ರೈಲು ಚಾಲಕಿಯರ ಅಳಲು • ಸ್ಯಾನಿಟರಿ ಪ್ಯಾಡ್ ಬಳಕೆ

ಇಲ್ಲದ ಶೌಚಾಲಯ: ತಡೆದುಕೊಳ್ಳುವುದೇ ದಾರಿ!

ನವದೆಹಲಿ (ಪಿಟಿಐ): ರೈಲು ಎಂಜಿನ್ ಬೋಗಿಗಳಲ್ಲಿ (ಲೋಕೊ) ಶೌಚಾಲಯ ಇಲ್ಲದೆ ರೈಲು ಚಾಲಕರು ಪರಿತಪಿಸುವ ಸ್ಥಿತಿನಿರ್ಮಾಣವಾಗಿದೆ. ಕೆಲವರು ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸಿದರೆ, ಕೆಲವರು ಕಡಿಮೆ ನೀರು ಕುಡಿಯುತ್ತಾರೆ. ಮತ್ತೆ ಕೆಲವರು 5–6 ತಾಸಿನ ವರೆಗೂ ಮೂತ್ರವನ್ನು ತಡೆದುಕೊಳ್ಳುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ!

ತಿಂಗಳ ಮುಟ್ಟಿನ ಸಮಯದಲ್ಲಂತೂ ಚಾಲಕಿಯರ ಸ್ಥಿತಿ ದಯನೀಯವಾಗುತ್ತದೆ. 'ಮುಟ್ಟಿನ ಸಮಯದಲ್ಲಿ ನಾನು ಪ್ರತಿ ಬಾರಿಯೂ ರಜೆ ತೆಗೆದುಕೊಳ್ಳುತ್ತೇನೆ ಎನ್ನುವುದು ವೃತ್ತಿಪರ ಮಹಿಳಾ ಸಿಬ್ಬಂದಿಯಾಗಿ ನನಗೆ ನಾಚಿಕೆಗೇಡು' ಎನ್ನುತ್ತಾರೆ ಸಹಾಯಕ ಚಾಲಕಿ.

'ನಾನು ಕೆಲಸಕ್ಕೆ ಸೇರಿ ಐದು ವರ್ಷವಾಗಿದೆ. ನಾನು ಕಚೇರಿ ಕೆಲಸ ಮಾಡಲು ಇಚ್ಛಿಸುತ್ತೇನೆ. ಶೌಚಾಲಯ ಇಲ್ಲದ ಎಂಜಿನ್ ಬೋಗಿಯಲ್ಲಿ ದೂರದ ಪ್ರಯಾಣ ನರಕವೇ ಸರಿ' ಎನ್ನುತ್ತಾರೆ ಮತ್ತೊಬ್ಬ ಚಾಲಕಿ.

'ಇದು ಮಹಿಳೆಯರ ಸಮಸ್ಯೆ ಮಾತ್ರವಲ್ಲ. ಪುರುಷರೂ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಆದರೆ, ಅವರು ಎಲ್ಲಿ ಬೇಕಾದರಲ್ಲಿ ಮೂತ್ರ ವಿಸರ್ಜಿಸಿ ಬರುತ್ತಾರೆ. ಮಹಿಳೆಯರಿಗೆ ಇದು ಸಾಧ್ಯವಿಲ್ಲ' ಎಂದು ಅವರು ವಿವರಿಸುತ್ತಾರೆ.

> ಸಂಚರಿಸುತ್ತಿರುವ ರೈಲಿನಲ್ಲಿ ಚಾಲಕರಿಗೆ ಶೌಚಾಲಯಕ್ಕಾಗಿ ವಿರಾಮ ನೀಡುವುದು ಕಾರ್ಯಸಾಧುವಲ್ಲ ಎಂದು ರೈಲ್ವೆ ಸಚಿವಾಲಯ ಹೇಳುತ್ತದೆ
>
> **ಎಂ.ಎನ್ ಪ್ರಸಾದ್,** ಪ್ರಧಾನ ಕಾರ್ಯದರ್ಶಿ, ಭಾರತೀಯ ರೈಲು ಚಾಲಕರ ಸಂಘ

97 ಶೌಚಾಲಯ ನಿರ್ಮಾಣ: ಸುರೇಶ್ ಪ್ರಭು ಅವರು ರೈಲ್ವೆ ಸಚಿವರಾಗಿದ್ದಾಗ ರೈಲು ಲೋಕೊಗಳಲ್ಲಿ ಶೌಚಾಲಯವನ್ನು ನಿರ್ಮಿಸುವ ಯೋಜನೆ ರೂಪಿಸಿ, ಇಂಥ ಮೊದಲ ಶೌಚಾಲಯವನ್ನು ಲೋಕಾರ್ಪಣೆ ಮಾಡಿದ್ದರು. ಅಲ್ಲಿಂದ ಇಲ್ಲಿಯ ವರೆಗೆ ಕೇವಲ 97 ಶೌಚಾಲಯಗಳಷ್ಟೇ ನಿರ್ಮಾಣವಾಗಿವೆ.

ರೈಲು ಚಾಲಕರಿಗೆ ಅನುಕೂಲವಾಗುವಂತೆಯೇ ಕೆಲಸಕ್ಕೆ ನಿಯೋಜಿಸಲಾಗುತ್ತದೆ ಎಂದು ರೈಲು ಅಧಿಕಾರಿಗಳು ಹೇಳುತ್ತಾರೆ.

ದೇಶದಲ್ಲಿ ಒಟ್ಟು 14 ಸಾವಿರ ಡೀಸೆಲ್ ರೈಲು ಲೋಕೊಗಳಿವೆ. 60 ಸಾವಿರ ರೈಲು ಚಾಲಕರಿದ್ದಾರೆ. ಇವರಲ್ಲಿ ಸಾವಿರ ಮಂದಿ ಚಾಲಕಿಯರಿದ್ದಾರೆ. ಶೌಚಾಲಯ ಇಲ್ಲದೆ ಇರುವುದರಿಂದ ಈ ಚಾಲಕಿಯರು ಕಡಿಮೆ ದೂರದ ಗೂಡ್ಸ್ ರೈಲು ಚಾಲನೆಯನ್ನೇ ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ.

'ಹಕ್ಕಿನ ನಿರಾಕರಣೆ'

ಭಾರತೀಯ ರೈಲ್ವೆಯ ಪುರುಷ ರೈಲು ಚಾಲಕರ ಸಂಘದ ಮಾಜಿ ಅಧ್ಯಕ್ಷ ಅಲೋಕ್ ವರ್ಮಾ ಅವರು ಈ ವಿಷಯನ್ನು ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಎದುರು ಇರಿಸಿದ್ದರು. 'ರೈಲ್ವೆಯು ಮಹಿಳೆಯರ ಮತ್ತು ಪುರುಷರ ಮೂಲಭೂತ ಹಕ್ಕನ್ನು ನಿರಾಕರಿಸುತ್ತಿದೆ' ಎನ್ನುತ್ತಾರೆ ಅಲೋಕ್.

'ಎಲ್ಲಾ ರೈಲು ಲೋಕೊಗಳಲ್ಲೂ ಶೌಚಾಲಯವನ್ನು ನಿರ್ಮಿಸಲಾಗುವುದು ಎಂದು ರಾಷ್ಟ್ರೀಯ ಮಾನವ ಹಕ್ಕು ಆಯೋಗಕ್ಕೆ ಸಚಿವಾಲಯ ತಿಳಿಸಿತ್ತು. ಆದರೆ, ಅದು ಈ ವರೆಗೂ ಜಾರಿಯಾಗಿಲ್ಲ' ಎನ್ನುತ್ತಾರೆ ಅವರು.

'ಒಬ್ಬ ಚಾಲಕನು ಕನಿಷ್ಠ 10ರಿಂದ 12 ತಾಸು ಚಾಲನೆ ಮಾಡುತ್ತಾನೆ. ಈ ವೇಳೆ ಆತ ಊಟ ಮಾಡಲು ಆಗುವುದಿಲ್ಲ ಅಥವಾ ಶೌಚಾಲಯಕ್ಕೂ ಹೋಗಲು ಆಗುವುದಿಲ್ಲ. ವಿರಾಮವನ್ನೂ ತೆಗೆದುಕೊಳ್ಳಬಾರದು ಎಂದು ಸಚಿವಾಲಯವು ಆಯೋಗಕ್ಕೆ ಉತ್ತರ ನೀಡಿತ್ತು. ಇದು ಅಮಾನವೀಯ' ಎಂದು ಅಲೋಕ್ ವಾದಿಸುತ್ತಾರೆ.

ಜಿಎಸ್‌ಟಿ: ಒಂದಿಷ್ಟು ಹೊಸ ತೆರಿಗೆ

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯು ಜೂನ್ ತಿಂಗಳ ಕೊನೆಯಲ್ಲಿ ನಡೆಸಿದ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಅನ್ವಯ ಕೆಲವು ಉತ್ಪನ್ನಗಳಿಗೆ ಹೊಸದಾಗಿ ತೆರಿಗೆ ಅನ್ವಯವಾಗಲಿದೆ. ಇನ್ನು ಕೆಲವು ಉತ್ಪನ್ನಗಳಿಗೆ ತೆರಿಗೆ ಪ್ರಮಾಣ ಹೆಚ್ಚಿಸಲಾಗಿದೆ. ಇವೆಲ್ಲ ಸೋಮವಾರದಿಂದ (ಜುಲೈ 18) ಜಾರಿಯಾಗಲಿವೆ. ಅದರ ವಿವರ ಇಲ್ಲಿದೆ.

5% ಪ್ಯಾಕ್ ಮಾಡಿರುವ, ಲೇಬಲ್ ಇರುವ ಮೊಸರು, ಮಜ್ಜಿಗೆ, ಲಸ್ಸಿ, ಬೆಲ್ಲ, ಮಂಡಕ್ಕಿ, ಆಹಾರ ಧಾನ್ಯಗಳು

12% ದಿನಕ್ಕೆ ₹ 1,000ಕ್ಕಿಂತ ಹೆಚ್ಚಿನ ಬಾಡಿಗೆಯ ಹೋಟೆಲ್ ಕೊಠಡಿ, ನಕಾಶೆ, ಚಾರ್ಟ್, ಅಟ್ಲಾಸ್

18% ಚೆಕ್ ಸೌಲಭ್ಯಕ್ಕೆ, ಆರ್‌ಬಿಐ, ಐಆರ್‌ಡಿಎ ಮತ್ತು ಸೆಬಿ ಕಡೆಯಿಂದ ಪಡೆವ ಸೇವೆಗಳಿಗೆ ತೆರಿಗೆ

18% ಮುದ್ರಣ, ಬರಹ, ಚಿತ್ರಬಿಡಿಸಲು ಬಳಸುವ ಶಾಯಿ, ಚೂರಿ ಮತ್ತು ಕತ್ತರಿಸುವ ಬ್ಲೇಡ್, ಪೇಪರ್ ಕತ್ತರಿಸುವ ಚಾಕು, ಪೆನ್ಸಿಲ್ ಶಾರ್ಪನರ್, ಎಲ್‌ಇಡಿ ಬಲ್ಬ್, ಚಿತ್ರ ಬಿಡಿಸುವ ಹಾಗೂ ಗುರುತು ಹಾಕಲು ಬಳಸುವ ಉಪಕರಣಗಳು, ಚಮಚ, ಫೋರ್ಕ್, ಸೌಟು, ಸ್ಕಿಮ್ಮರ್
ನೀರೆತ್ತುವ ಪಂಪ್‌ಸೆಟ್‌ಗಳು, ಕೊಳವೆ ಬಾವಿ ಟರ್ಬೈನ್ ಪಂಪ್, ಸಬ್ಮರ್ಸಿಬಲ್ ಪಂಪ್, ಹಾಲು ಕರೆಯುವ ಯಂತ್ರ, (ಈ ವಸ್ತುಗಳಿಗೆ ಇದುವರೆಗೆ ಶೇ 12ರಷ್ಟು ತೆರಿಗೆ ಇತ್ತು)

12% ಸೌರಶಕ್ತಿ ಚಾಲಿತ ವಾಟರ್ ಹೀಟರ್ (ಇದುವರೆಗೆ ಶೇ 5ರಷ್ಟು ತೆರಿಗೆ ಇತ್ತು)

5% ದಿನಕ್ಕೆ ₹ 5,000ಕ್ಕಿಂತ ಹೆಚ್ಚಿನ ಬಾಡಿಗೆಯ ಆಸ್ಪತ್ರೆ ಕೊಠಡಿಗೆ ತೆರಿಗೆ (ಐಸಿಯು ಕೊಠಡಿಗೆ ವಿನಾಯಿತಿ ಇದೆ), ವಿದ್ಯುತ್ ಚಾಲಿತ ವಾಹನಗಳಿಗೆ ತೆರಿಗೆ

'ಸಬ್ಸಿಡಿ ನಿರ್ವಹಣೆ ದಕ್ಷವಾಗಬೇಕಿದೆ'

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ಮೇಲಿನ ಸುಂಕವನ್ನು ಕಡಿಮೆ ಮಾಡಿರುವುದರಿಂದ ಕೇಂದ್ರ ಸರ್ಕಾರದ ಆದಾಯ ತುಸು ತಗ್ಗಿದ್ದು, ಕೇಂದ್ರವು ಸಬ್ಸಿಡಿ ಮೇಲಿನ ವೆಚ್ಚಗಳನ್ನು ಹೆಚ್ಚು ಎಚ್ಚರಿಕೆಯಿಂದ ನಿಭಾಯಿಸಬೇಕಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕೇಂದ್ರವು ಎಕ್ಸೈಸ್ ಸುಂಕವನ್ನು ಮೇ ತಿಂಗಳಲ್ಲಿ ತಗ್ಗಿಸಿದೆ. ಇದರಿಂದಾಗಿ ಕೇಂದ್ರಕ್ಕೆ ವಾರ್ಷಿಕ ₹ 1 ಲಕ್ಷ ವರಮಾನ ಕಡಿಮೆ ಆಗುವ ಅಂದಾಜು ಮಾಡಲಾಗಿದೆ. ಏಪ್ರಿಲ್‌ನಲ್ಲಿ ಕೇಂದ್ರವು ರಸಗೊಬ್ಬರಗಳಿಗೆ ಒಟ್ಟು ₹ 60,939 ಕೋಟಿ ಮೌಲ್ಯದ ಸಬ್ಸಿಡಿಗೆ ಅನುಮೋದನೆ ನೀಡಿದೆ. ಇದು ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಿಗೆ ಅನ್ವಯವಾಗಲಿದೆ. ಇದರ ಜೊತೆಯಲ್ಲಿ, ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ (ಪಿಎಂಜಿಕೆಎವೈ) ವ್ಯಾಪ್ತಿಯನ್ನು ಸೆಪ್ಟೆಂಬರ್‌ವರೆಗೆ ವಿಸ್ತರಿಸಲಾಗಿದೆ.

ಆಹಾರ ಮತ್ತು ರಸಗೊಬ್ಬರಗಳ ಮೇಲಿನ ಹೆಚ್ಚುವರಿ ಸಬ್ಸಿಡಿಗೆ ಹಣ ಸರಿದೂಗಿಸುವುದು ಸವಾಲಿನ ಕೆಲಸ. ಸಬ್ಸಿಡಿಯನ್ನು ಹೆಚ್ಚು ನಿಖರವಾಗಿ ನೀಡುವ ಕೆಲಸ ಆಗಬೇಕು ಎಂದು ಅಧಿಕಾರಿಯೊಬ್ಬರು ಹೇಳಿದರು.

ಪೀಠೋಪಕರಣ ಹಣ ಕೇಳಿದ್ದಕ್ಕೆ ಮನೆ ಒಡೆಯಲು ಆದೇಶಿಸಿದ ಅಧಿಕಾರಿ!

ಲಖನೌ (ಪಿಟಿಐ): ಪೀಠೋಪಕರಣ ಖರೀದಿಸಿದ ಉಪ ವಿಭಾಗೀಯ ಅಧಿಕಾರಿಯೊಬ್ಬರಿಂದ ಹಣ ಕೇಳಿದ್ದಕ್ಕೆ ತಮ್ಮ ಮನೆಯ ಒಂದು ಭಾಗವನ್ನೇ ಬುಲ್ಡೋಜರ್‌ನಿಂದ ಧ್ವಂಸ ಮಾಡಿಸಿದ್ದಾರೆ ಎಂದು ಮೊರಾದಾಬಾದ್‌ನ ಝುಹೀದ್ ಅಹ್ಮದ್ ಎಂಬ ವ್ಯಾಪಾರಿಯೊಬ್ಬರು ಆರೋಪಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಇದು ತೀವ್ರ ವಿವಾದಕ್ಕೆ ಗುರಿಯಾಗುತ್ತಿದ್ದಂತೆಯೇ, ಅಧಿಕಾರಿ ಘನಶ್ಯಾಮ್ ವರ್ಮಾ ಅವರನ್ನು ಮೊರಾದಾಬಾದ್ ಜಿಲ್ಲಾಧಿಕಾರಿ ಶೈಲೇಂದ್ರ ಕುಮಾರ್ ಸಿಂಗ್ ಎತ್ತಂಗಡಿ ಮಾಡಿದ್ದು, ತಮ್ಮ ಕಚೇರಿಯಲ್ಲಿ ನಿಯೋಜಿಸಿದ್ದಾರೆ.

'ಈ ವಿಷಯದ ಕುರಿತು ಜುಲೈ 11ರಂದು ದೂರನ್ನು ಸ್ವೀಕರಿಸಿದ್ದೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಜಿಲ್ಲಾಧಿಕಾರಿ (ಎಡಿಎಂ) ಮಟ್ಟದ ಅಧಿಕಾರಿಯಿಂದ ತನಿಖೆ ನಡೆಸುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಸೂಚಿಸಿದ್ದೇನೆ' ಎಂದು ಮೊರಾದಾಬಾದ್‌ನ ಉಪ ವಿಭಾಗಾಧಿಕಾರಿ ಆಂಜನೇಯ ಕುಮಾರ್ ಹೇಳಿದ್ದಾರೆ.

ತಮ್ಮ ಮಳಿಗೆಯಿಂದ ಘನಶ್ಯಾಮ್ ಅವರು ₹2.67 ಲಕ್ಷ ಮೌಲ್ಯದ ಪೀಠೋಪಕರಣ ಖರೀದಿಸಿದ್ದರು. ಆದರೆ, ಹಣ ಪಾವತಿಸಿರಲಿಲ್ಲ. ಹಣ ಕೊಡುವಂತೆ ಕೇಳಿದ್ದಕ್ಕೆ, ಮನೆ ಒಡೆಯಲು ಅವರು ಆದೇಶಿಸಿದ್ದಾರೆ. ಅದರಂತೆ ಬುಲ್ಡೋಜರ್ ಬಳಸಿ ಮನೆಯ ಒಂದು ಭಾಗವನ್ನು ಧ್ವಂಸ ಮಾಡಿದ್ದಾರೆ ಎಂದು ಝುಹೀದ್ ದೂರು ನೀಡಿದ್ದರು.

ಕ್ರಮಕ್ಕೆ ಒತ್ತಾಯ: ಈ ಘಟನೆಯ ಕುರಿತು ಸಮಾಜ ವಾದಿ ಪಕ್ಷವು ಉತ್ತರ ಪ್ರದೇಶ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ತಪ್ಪಿತಸ್ಥ ಅಧಿಕಾರಿ ವಿರುದ್ಧ ಕ್ರಮಕ್ಕೆ ಒತ್ತಾಯಿಸಿದೆ.

'ಯೋಗಿ ಆದಿತ್ಯನಾಥ್ ಸರ್ಕಾರವು ಪಾರದರ್ಶಕವಾಗಿದ್ದು, ಸಾಮಾನ್ಯ ವ್ಯಕ್ತಿಯಾಗಲಿ ಅಥವಾ ಹಿರಿಯ ಅಧಿಕಾರಿಯಾಗಲಿ ಅವರು ತಪ್ಪಿತಸ್ಥರು ಎಂದು ಕಂಡುಬಂದರೆ ಕಠಿಣ ಕ್ರಮ ತೆಗೆದುಕೊಳ್ಳುತ್ತದೆ' ಎಂದು ಬಿಜೆಪಿ ವಕ್ತಾರ ಹರಿಶ್ಚಂದ್ರ ಶ್ರೀವಾಸ್ತವ ಹೇಳಿದ್ದಾರೆ.

ಮೊಸರು, ಮಜ್ಜಿಗೆ ದರ ಏರಿಕೆ

ಒಂದನೇ ಪುಟದಿಂದ

ಈ ಉತ್ಪನ್ನಗಳ ಪೊಟ್ಟಣಗಳ ಮೇಲೆ ಸದ್ಯ ಹಳೆಯ ದರ ಮುದ್ರಣವಾಗಿದ್ದು, ದಾಸ್ತಾನು ಮುಗಿಯುವವರೆಗೆ ಇಂಕ್‌ಜೆಟ್ ಮೂಲಕ ಪರಿಷ್ಕೃತ ದರಗಳನ್ನು ಪೊಟ್ಟಣಗಳ ಮೇಲೆ ಮುದ್ರಿಸಿ ಮಾರುಕಟ್ಟೆಗೆ ಸರಬರಾಜು ಮಾಡಲಾಗುವುದು ಎಂದು ತಿಳಿಸಿದೆ.

'ಜಿಎಸ್‌ಟಿ ಹೊರೆಯಿಂದ ಉಂಟಾದ ಕೊರತೆಯನ್ನು ಭರ್ತಿ ಮಾಡಿಕೊಳ್ಳಲು ದರ ಪರಿಷ್ಕರಿಸಲಾಗಿದೆ. ಇದರಿಂದ, ಕೆಎಂಎಫ್‌ಗೆ ಯಾವುದೇ ರೀತಿಯಲ್ಲಿ ಹೆಚ್ಚಿನ ಆದಾಯ ದೊರೆಯುವುದಿಲ್ಲ. ಸಾಮಾನ್ಯ ಗ್ರಾಹಕರಿಗೆ ಹೊರೆಯಾಗದ ರೀತಿಯಲ್ಲಿ ದರಗಳನ್ನು ಪರಿಷ್ಕರಿಸಲಾಗಿದೆ. ಇದು ಕೇವಲ ಪರಿಹಾರ ರೂಪದ ದರ ಪರಿಷ್ಕರಣೆ' ಎಂದು ಕೆಎಂಎಫ್ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ದರ ಹೆಚ್ಚಳವಾದ ಕೆಎಂಎಫ್ ಉತ್ಪನ್ನಗಳು

ಉತ್ಪನ್ನ	ಪ್ಯಾಕ್	ಪ್ರಮಾಣ	ಈಗಿನ ದರ (₹ಗಳಲ್ಲಿ)	ಪರಿಷ್ಕೃತ ದರ (₹ಗಳಲ್ಲಿ)
ಮೊಸರು	ಸ್ಯಾಚೆ	200ಗ್ರಾಂ	10	12
		500ಗ್ರಾಂ	22	24
		1000ಗ್ರಾಂ	43	46
ಮಜ್ಜಿಗೆ	ಸ್ಯಾಚೆ	200ಮಿ.ಲೀ.	7	8
	ಟೆಟ್ರಾಪ್ಯಾಕ್		10	11
	ಪೆಟ್ ಬಾಟಲ್		12	13
ಲಸ್ಸಿ	ಸ್ಯಾಚೆ	200 ಮಿ.ಲೀ	10	11
	ಟೆಟ್ರಾಪ್ಯಾಕ್ ಸಾದ		20	21
	ಟೆಟ್ರಾಪ್ಯಾಕ್ ಮ್ಯಾಂಗೋ		25	27
	ಪೆಟ್ ಬಾಟಲ್ ಸಾದ		15	16
	ಪೆಟ್ ಬಾಟಲ್ ಮ್ಯಾಂಗೊ		20	21

ಐಪಿಒ ಹೂಡಿಕೆಯಲ್ಲಾಗುವ 5 ತಪ್ಪುಗಳು

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಕಳೆದ 18 ತಿಂಗಳ ಅವಧಿಯಲ್ಲಿ ದೇಶದ ನೂರಾರು ಕಂಪನಿಗಳು ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ) ಮೂಲಕ ಷೇರುಪೇಟೆ ಪ್ರವೇಶಿಸಿವೆ. 2021ರಲ್ಲಿ ಒಟ್ಟು 125 ಕಂಪನಿಗಳು ಐಪಿಒ ನಡೆಸಿ ಸುಮಾರು ₹ 1.3 ಲಕ್ಷ ಕೋಟಿ ಸಂಗ್ರಹ ಮಾಡಿವೆ. ಅಂದರೆ, ಪ್ರತಿ ಮೂರು ದಿನಕ್ಕೆ ಒಂದು ಕಂಪನಿ ಐಪಿಒ ನಡೆಸಿದಂತಾಗಿದೆ.

ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಾತಾವರಣ ಇಲ್ಲದಿದ್ದರೂ 2022ರಲ್ಲಿ ಸುಮಾರು 53 ಕಂಪನಿಗಳು ಐಪಿಒ ಮೂಲಕ ಷೇರು ಮಾರುಕಟ್ಟೆಗೆ ಲಗ್ಗೆಯಿಟ್ಟು ಅಂದಾಜು ₹ 45 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿವೆ. ಆನ್‌ಲೈನ್ ಮತ್ತು ಮೊಬೈಲ್ ಅಪ್ಲಿಕೇಷನ್‌ಗಳಿಂದಾಗಿ ಐಪಿಒ ಹೂಡಿಕೆ ಸರಳವಾಗಿರುವ ಕಾರಣ, ಇತ್ತೀಚೆಗೆ ನಡೆದ ಬಹುತೇಕ ಐಪಿಒಗಳು ನಿರೀಕ್ಷೆಗೂ ಮೀರಿ ಸಬ್‌ಸ್ಕ್ರೈಬ್ ಆಗಿದ್ದವು. ಐಪಿಒ ವೇಳೆ ಷೇರು ಪಡೆದುಕೊಂಡರೆ ಆ ಷೇರು ಲಿಸ್ಟ್ ಆಗುವ ದಿನ (ಷೇರುಪೇಟೆ ಪ್ರವೇಶಿಸುವ ದಿನ) ಲಾಭ ನಿಶ್ಚಿತ ಎನ್ನುವ ಕುರುಡು ಲೆಕ್ಕಾಚಾರ ಮಾಡಿ ಕೆಲವರು ಲಾಭ ಗಳಿಸಿದ್ದಾರೆ. ಅನೇಕರು ಕೈ ಸುಟ್ಟುಕೊಂಡಿದ್ದಾರೆ.

ನಿಮಗೆ ಗೊತ್ತಿರಲಿ, ಕೆಲವು ತಿಂಗಳ ಹಿಂದೆ 13,157 ಅಂಶಗಳಲ್ಲಿದ್ದ ಬಿಎಸ್‌ಇ ಐಪಿಒ ಸೂಚ್ಯಂಕ ಜೂನ್ 15ರ ಸುಮಾರಿಗೆ ಧುತ್ತೆಂದು 8,761 ಅಂಶಗಳಿಗೆ ಕುಸಿದಿದೆ. ಐಪಿಒದಿಂದ ದುಡ್ಡು ಬೆಳೆಸುವ ಆಸೆಯನ್ನು ಹಿಂದೆ-ಮುಂದೆ ಯೋಚಿಸದೆ ಬೆಳೆಸಿಕೊಂಡ ಕೆಲವರು ಈಗ ತಮಗೆ ತಾವೇ ಶಾಪ ಹಾಕಿಕೊಳ್ಳುತ್ತಿದ್ದಾರೆ. ಹಾಗಾದರೆ ಅವರು ಮಾಡಿದ ತಪ್ಪೇನು?

1. ಅರೆಬರೆ ಮಾಹಿತಿ: ಐಪಿಒ ಹೂಡಿಕೆ ಮಾಡುವಾಗ ಅರೆಬರೆ ಮಾಹಿತಿ ಆಧರಿಸಿ ಹೂಡಿಕೆ ಮಾಡುವುದು ಬಹುತೇಕರು ಮಾಡುವ ತಪ್ಪು. ಯಾವುದೋ ಲೇಖನ ಓದಿ, ಯೂಟ್ಯೂಬ್ ವಿಡಿಯೊ ನೋಡಿ, ನಿರ್ದಿಷ್ಟ ಕಂಪನಿಯಲ್ಲಿ ಹೂಡಿಕೆ ಮಾಡುವುದೋ ಬೇಡವೋ ಎನ್ನುವ ತೀರ್ಮಾನಕ್ಕೆ ಅನೇಕರು ಬರುತ್ತಾರೆ. ಆದರೆ ಕೇವಲ ಒಂದು ಲೇಖನ, ಯೂಟ್ಯೂಬ್ ವಿಡಿಯೊ ಆಧರಿಸಿ ಹೂಡಿಕೆ ನಿರ್ಧಾರ ಸರಿಯಲ್ಲ. ಕಂಪನಿ ಯಾವ ವಹಿವಾಟು ನಡೆಸುತ್ತದೆ, ಅದು ಒದಗಿಸುವ ಸರಕು-ಸೇವೆಗಳೇನು, ಗ್ರಾಹಕರು ಯಾರು, ಪ್ರತಿಸ್ಪರ್ಧಿ ಕಂಪನಿಗಳು ಯಾವುವು, ಹಣಕಾಸು ಸ್ಥಿತಿಗತಿ ಹೇಗಿದೆ, ಸಾಲದ ಪ್ರಮಾಣ ಎಷ್ಟಿದೆ, ವ್ಯಾಜ್ಯಗಳೇನಾದರೂ ಇವೆಯಾ, ಕಂಪನಿಯ ಆಡಳಿತ ಮಂಡಳಿಯಲ್ಲಿ ಅನುಭವಿಗಳು ಮತ್ತು ವಿಶ್ವಾಸಾರ್ಹ ವ್ಯಕ್ತಿಗಳಿದ್ದಾರಾ... ಹೀಗೆ ಅನೇಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಎಲ್ಲ ಲೆಕ್ಕಾಚಾರ ಮಾಡಿದ ಬಳಿಕ ಹೂಡಿಕೆ ತೀರ್ಮಾನ ಮಾಡಬೇಕು. ಇಲ್ಲದಿದ್ದರೆ ಐಪಿಒ ಹೂಡಿಕೆ ಜೂಜಾಟದಂತಾಗುತ್ತದೆ.

2. ಮೌಲ್ಯಮಾಪನದಲ್ಲಿ ವೈಫಲ್ಯ: ಇತ್ತೀಚಿನವರೆಗೂ ತೆರಿಗೆ ಪಾವತಿಗೂ ಮುನ್ನ ಯಾವ ಕಂಪನಿಗಳು ಕನಿಷ್ಠ ₹ 15 ಕೋಟಿ ಲಾಭ ಹೊಂದಿರುತ್ತವೆಯೋ ಅಂತಹ ಕಂಪನಿಗಳು ಮಾತ್ರ ಷೇರು ಮಾರುಕಟ್ಟೆ ಪ್ರವೇಶಿಸಬಹುದು ಎನ್ನುವ ನಿಯಮವನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಜಾರಿಯಲ್ಲಿಟ್ಟಿತ್ತು. ಇದರಿಂದ ತಂತ್ರಜ್ಞಾನ ಆಧಾರಿತವಾದ ಬಹುತೇಕ ಕಂಪನಿಗಳು ಷೇರು ಮಾರು ಕಟ್ಟೆ ಪ್ರವೇಶಿಸಲು ಸಾಧ್ಯವಾಗಿರಲಿಲ್ಲ. ಆದರೆ 2020ರಲ್ಲಿ ಸೆಬಿ ತನ್ನ ನಿಯಮ ಬದಲಾಯಿಸಿತು. ಸಾಂಸ್ಥಿಕ ಹೂಡಿಕೆದಾರರು ಶೇ 75ರಷ್ಟು ಷೇರುಗಳನ್ನು ಹೊಂದಿದ್ದರೆ ನಷ್ಟ ಅನುಭವಿಸುತ್ತಿರುವ ಕಂಪನಿಗಳೂ ಷೇರು ಮಾರುಕಟ್ಟೆ ಪ್ರವೇಶಿಸಬಹುದು ಎಂದು ಹೇಳಿತು. ಇದರ ನಂತರ ಪೇಟಿಎಂ ಮತ್ತು ಜೊಮ್ಯಾಟೊದಂತಹ ತಂತ್ರಜ್ಞಾನ ಆಧಾರಿತ ಕಂಪನಿಗಳು ಷೇರುಪೇಟೆ ಪ್ರವೇಶಿಸಲು ಸಾಧ್ಯವಾಯಿತು.

ಹೊಸ ತಲೆಮಾರಿನ ಕಂಪನಿಗಳ ಮಾರುಕಟ್ಟೆ ಮೌಲ್ಯ ಅಳೆಯುವುದು ಸದ್ಯದ ಮಟ್ಟಿಗೆ ಇರುವ ದೊಡ್ಡ ಸವಾಲು. ಷೇರಿನ ಬೆಲೆ ನಿಗದಿ ಯಾವ ರೀತಿ ಆಗಿದೆ, ಕಂಪನಿಯ ಷೇರು ನಿಜಕ್ಕೂ ಅಷ್ಟು ಮೌಲ್ಯ ಹೊಂದಿದೆಯಾ, ನಷ್ಟದಲ್ಲಿರುವ ಕಂಪನಿಯ ಷೇರಿನ ಮೌಲ್ಯ ಅಳೆಯುವುದು ಹೇಗೆ ಎಂಬಿತ್ಯಾದಿ ಪ್ರಶ್ನೆಗಳು ಹೂಡಿಕೆದಾರರಲ್ಲಿ ಇವೆ. ಇದರ ಅಂದಾಜಿಲ್ಲದೆ ಐಪಿಒ ಹೂಡಿಕೆ ನಿರ್ಧಾರ ಮಾಡುವ ಹೂಡಿಕೆದಾರರು ಇಕ್ಕಟ್ಟಿಗೆ ಸಿಲುಕುತ್ತಿದ್ದಾರೆ.

3. ಲಿಸ್ಟಿಂಗ್ ಲಾಭಕ್ಕಾಗಿ ಹೂಡಿಕೆ: ಕಂಪನಿಯ ವಹಿವಾಟು ಏನು, ಹೇಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದೆ ಲಿಸ್ಟಿಂಗ್ ಗೇನ್ಸ್‌ಗಾಗಿ ಹೂಡಿಕೆ ಮಾಡುವುದು ತಪ್ಪು. ಷೇರುಪೇಟೆ ಸೂಚ್ಯಂಕದಲ್ಲಿ ಕಂಪನಿಯೊಂದು ಮೊದಲ ಬಾರಿಗೆ ಸ್ಥಾನ ಪಡೆದುಕೊಳ್ಳುವಾಗ ಅದರ ಬೆಲೆ ಹೆಚ್ಚಳವಾಗಿ ಐಪಿಒದಲ್ಲಿ ಷೇರು ಪಡೆದವರಿಗೆ ಲಾಭವಾಗುವುದನ್ನು ಲಿಸ್ಟಿಂಗ್ ಗೇನ್ಸ್ ಎನ್ನುತ್ತಾರೆ. ಕಂಪನಿ ಷೇರುಪೇಟೆ ಪ್ರವೇಶಿಸಿದ ಮೊದಲ ದಿನವೇ ಇಲ್ಲಿ ಹೂಡಿಕೆದಾರ ಲಾಭಗಳಿಸಿಕೊಳ್ಳುವ ಲೆಕ್ಕಾಚಾರದಲ್ಲಿರುತ್ತಾನೆ. ಆದರೆ ಲಿಸ್ಟಿಂಗ್ ದಿನ ಷೇರಿನ ಬೆಲೆ ಹೆಚ್ಚಳವಾಗುತ್ತದೆ ಎನ್ನುವುದಕ್ಕೆ ಖಾತರಿ ಇರುವುದಿಲ್ಲ; ನಷ್ಟದ ಸಾಧ್ಯತೆಯೂ ಇರುತ್ತದೆ.

2020-21ರಲ್ಲಿ ನಡೆದ ಹಲವು ಐಪಿಒಗಳಲ್ಲಿ ಲಾಭ-ನಷ್ಟ ಎರಡೂ ಆದ ಉದಾಹರಣೆ ನಮ್ಮ ಮುಂದಿದೆ. ಹಾಗಾಗಿ ವಾಸ್ತವಕ್ಕೆ ಹತ್ತಿರದ ಅಂಶಗಳನ್ನು ಅರಿತು ಹೂಡಿಕೆ ತೀರ್ಮಾನ ಮಾಡುವುದು ಜಾಣತನ.

4. ಗ್ರೇ ಮಾರ್ಕೆಟ್ ಪ್ರೀಮಿಯಂ ಬಗ್ಗೆ ಅತಿ ವಿಶ್ವಾಸ: ಷೇರು ಮಾರುಕಟ್ಟೆಗೆ ಸೇರ್ಪಡೆಗೊಳ್ಳದ ಷೇರುಗಳಲ್ಲಿ ಹೂಡಿಕೆದಾರರು ಅನಧಿಕೃತವಾಗಿ ವಹಿವಾಟು ನಡೆಸುವುದನ್ನು ಗ್ರೇ ಮಾರ್ಕೆಟ್ ಎಂದು ಕರೆಯುತ್ತಾರೆ. ಅನೇಕರು ಐಪಿಒ ಹೂಡಿಕೆ ನಿರ್ಧಾರವನ್ನು ಗ್ರೇ ಮಾರ್ಕೆಟ್ ಪ್ರೀಮಿಯಂ ಆಧರಿಸಿ ತೆಗೆದುಕೊಳ್ಳುತ್ತಾರೆ. ಗ್ರೇ ಮಾರ್ಕೆಟ್ ಪ್ರೀಮಿಯಂ ಹೆಚ್ಚಿಗೆ ಇದೆ ಎಂದರೆ ಲಿಸ್ಟಿಂಗ್ ಗೇನ್ಸ್ ಖಂಡಿತ ಸಿಗುತ್ತದೆ ಎನ್ನುವ ಅಂದಾಜು ಕೆಲವು ಹೂಡಿಕೆದಾರರದ್ದು. ಆದರೆ ಗ್ರೇ ಮಾರ್ಕೆಟ್ ಪ್ರೀಮಿಯಂ ನಂಬಿಕೆಗೆ ಅರ್ಹವಲ್ಲ. ಅದೊಂದು ರೀತಿಯ ಅರ್ಧಸತ್ಯ, ಯಾವಾಗ ಬೇಕಾದರೂ ಪೂರ್ತಿ ಸುಳ್ಳಾಗಬಹುದು.

5. ಗುಂಪಲ್ಲಿ ಗೋವಿಂದ ಎನ್ನುವ ಲೆಕ್ಕಾಚಾರ: ಯಾಕೆ ಐಪಿಒ ಹೂಡಿಕೆ ಮಾಡುತ್ತಿದ್ದೀರಾ ಎಂದು ಪ್ರಶ್ನೆ ಕೇಳಿದರೆ 'ನನ್ನ ಸ್ನೇಹಿತ ಹೇಳಿದ ಎಂದು ಮಾಡಿದೆ. ನನ್ನ ಅಕ್ಕ ಹೇಳಿದ್ರು ಅಂತ ಬಿಡ್ ಮಾಡಿದೆ' ಎನ್ನುವವರು ಇದ್ದಾರೆ. ಹೂಡಿಕೆ ಮಾಡುವಾಗ ಗುಂಪಲ್ಲಿ ಗೋವಿಂದ ಎನ್ನುವ ಸಮೂಹ ಸನ್ನಿಯ ಮನಃಸ್ಥಿತಿ ಬೇಡ. ರಾತ್ರಿ ಕಂಡ ಬಾವಿಗೆ ಹಗಲು ಬೀಳಬಾರದು ಎನ್ನುವ ಮಾತು ನೆನಪಿರಲಿ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಎಣಿಕೆಗೆ ಸಿಗದ ಷೇರುಪೇಟೆ ವಹಿವಾಟು

ಷೇರುಪೇಟೆ

ಸತತ ಮೂರು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಇಳಿಕೆಯ ಹಾದಿ ತುಳಿದಿವೆ. ಜುಲೈ 15ಕ್ಕೆ ಕೊನೆಗೊಂಡ ವಾರದಲ್ಲಿ 53,760 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.32ರಷ್ಟು ಕುಸಿದಿದೆ. 16,049 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.06ರಷ್ಟು ಇಳಿಕೆ ದಾಖಲಿಸಿದೆ.

ಹಣದುಬ್ಬರ, ತೈಲ ಬೆಲೆಯಲ್ಲಿ ಏರಿಳಿತ, ಮೊದಲನೇ ತ್ರೈಮಾಸಿಕ ಫಲಿತಾಂಶದಲ್ಲಿ ಕಂಪನಿಗಳ ಸಾಧನೆ ಬಗ್ಗೆ ಅನಿಶ್ಚಿತತೆ, ಅಮೆರಿಕದ ಫೆಡರಲ್ ಬ್ಯಾಂಕ್‌ನಿಂದ ಬಡ್ಡಿ ದರ ಮತ್ತಷ್ಟು ಹೆಚ್ಚಳದ ಮುನ್ಸೂಚನೆ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಐ.ಟಿ. ಸೂಚ್ಯಂಕ ಭಾರೀ ಕುಸಿತ ಕಂಡಿದ್ದು ಶೇ 6.25ರಷ್ಟು ಇಳಿಕೆಯಾಗಿದೆ. ಬ್ಯಾಂಕ್ ಸೂಚ್ಯಂಕ ಶೇ 1.26ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 0.83ರಷ್ಟು, ಮಾಧ್ಯಮ ವಲಯ ಶೇ 0.46ರಷ್ಟು ಕುಸಿದಿವೆ. ನಿಫ್ಟಿ ಫಾರ್ಮಾ ಶೇ 2.27ರಷ್ಟು, ರಿಯಲ್ ಎಸ್ಟೇಟ್ ಶೇ 2.19ರಷ್ಟು, ವಾಹನ ವಲಯ ಶೇ 1.96ರಷ್ಟು, ಎಫ್‌ಎಂಸಿಜಿ ಶೇ 1.40ರಷ್ಟು, ಮಿಡ್ ಕ್ಯಾಪ್ 100 ಶೇ 1.33ರಷ್ಟು ಮತ್ತು ಲೋಹ ವಲಯ ಶೇ 0.65ರಷ್ಟು ಜಿಗಿದಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಟಾಟಾ ಕನ್ಸ್ಯೂಮರ್ ಶೇ 3.23ರಷ್ಟು, ಟೈಟನ್ ಶೇ 2.93ರಷ್ಟು, ಟಾಟಾ ಮೋಟರ್ಸ್ ಶೇ 2.84ರಷ್ಟು, ಹಿಂದೂಸ್ಥಾನ್ ಯುನಿಲಿವರ್ ಶೇ 2.83ರಷ್ಟು, ಐಷರ್ ಮೋಟರ್ಸ್ ಶೇ 2.67ರಷ್ಟು ಹೆಚ್ಚಳ ಕಂಡಿವೆ. ಟಾಟಾ ಸ್ಟೀಲ್ ಶೇ 2.67ರಷ್ಟು, ಪವರ್ ಗ್ರಿಡ್ ಶೇ 2.58ರಷ್ಟು, ಎಚ್‌ಸಿಎಲ್ ಟೆಕ್ ಶೇ 2.20ರಷ್ಟು, ವಿಪ್ರೊ ಶೇ 1.89ರಷ್ಟು ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಶೇ 1.30ರಷ್ಟು ಕುಸಿತ ಕಂಡಿವೆ.

ಮುನ್ನೋಟ: ಸೂಚ್ಯಂಕಗಳ ಏರಿಳಿತಗಳ ನಡುವೆ ಹೂಡಿಕೆದಾರರ ದೃಷ್ಟಿ ಮೊದಲನೇ ತ್ರೈಮಾಸಿಕ ಫಲಿತಾಂಶಗಳತ್ತ ನೆಟ್ಟಿದೆ. ಈ ನಡುವೆ ಬೆಲೆ ಏರಿಕೆ ನಿಯಂತ್ರಣಕ್ಕೆ ಅಮೆರಿಕದ ಫೆಡರಲ್ ಬ್ಯಾಂಕ್ 75 ಮೂಲಾಂಶಗಳಷ್ಟು ಬಡ್ಡಿ ದರ ಹೆಚ್ಚಳ ಮಾಡುವ ನಿರೀಕ್ಷೆಯಿದೆ. ಈ ನಿರ್ಧಾರದಿಂದ ಭಾರತ ಸೇರಿದಂತೆ ಇತರ ಹಲವು ಮಾರುಕಟ್ಟೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಬಹುದು. ಸದ್ಯದಲ್ಲೇ ನಡೆಯಲಿರುವ 5ಜಿ ಹರಾಜಿನ ಮೇಲೆಯೂ ಮಾರುಕಟ್ಟೆ ತಜ್ಞರ ದೃಷ್ಟಿ ನೆಟ್ಟಿದೆ. ತೈಲ ಬೆಲೆ ಯಾವ ದಿಕ್ಕಿನಲ್ಲಿ ಸಾಗಲಿದೆ ಎನ್ನುವುದು ಮುಖ್ಯವಾಗಲಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹440
12 ಮೊಟ್ಟೆಗೆ ₹67
ಮೈಸೂರು
100 ಮೊಟ್ಟೆಗೆ ₹440

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹266-489
ದ್ವಿತಳಿ (ಬಿ.ವಿ) ₹230-780

ಮಹಾರಾಷ್ಟ್ರ ಬಿಕ್ಕಟ್ಟು: 20ಕ್ಕೆ 'ಸುಪ್ರೀಂ' ವಿಚಾರಣೆ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಎಂವಿಎ ಸರ್ಕಾರದ ಪತನಕ್ಕೆ ಕಾರಣವಾದ ರಾಜಕೀಯ ವಿದ್ಯಮಾನಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಇದೇ 20ರಂದು ವಿಚಾರಣೆ ನಡೆಸಲಿದೆ.

ಅಧ್ಯಕ್ಷೀಯ ವ್ಯವಸ್ಥೆ ರದ್ದು, ಪೂರ್ಣ ಬದಲಾವಣೆವರೆಗೆ ಹೋರಾಟಕ್ಕೆ ತೀರ್ಮಾನ

ಶ್ರೀಲಂಕಾ: 100ನೇ ದಿನಕ್ಕೆ ಜನಹೋರಾಟ

ಪ್ರಜಾವಾಣಿ ವಾರ್ತೆ

ಕೊಲಂಬೊ (ಪಿಟಿಐ): ದೇಶದಲ್ಲಿ ಅಧ್ಯಕ್ಷೀಯ ವ್ಯವಸ್ಥೆಯನ್ನು ರದ್ದುಪಡಿಸುವುದು ಸೇರಿದಂತೆ ಆಡಳಿತ ವ್ಯವಸ್ಥೆಯಲ್ಲಿ ಸಂಪೂರ್ಣ ಬದಲಾವಣೆ ಆಗುವವರೆಗೂ ಹೋರಾಟ ಮುಂದುವರಿಸಲು ಶ್ರೀಲಂಕಾದ ನಾಗರಿಕರು ತೀರ್ಮಾನಿಸಿದ್ದಾರೆ. ದೇಶದ ಆರ್ಥಿಕ ವ್ಯವಸ್ಥೆ ವೈಫಲ್ಯದ ಹಿಂದೆಯೇ ಸರ್ಕಾರ, ಆಡಳಿತ ವ್ಯವಸ್ಥೆಯ ವಿರುದ್ಧ ಜನತೆ ನಡೆಸುತ್ತಿರುವ ಹೋರಾಟ ಭಾನುವಾರ 100ನೇ ದಿನಕ್ಕೆ ಕಾಲಿಟ್ಟಿದೆ.

ಸರ್ಕಾರ ವಿರೋಧಿ ಪ್ರತಿಭಟನೆಯು ಕೊಲಂಬೊದಲ್ಲಿ ಏಪ್ರಿಲ್ 9ರಂದು ಆರಂಭವಾಗಿತ್ತು. ನಾಗರಿಕರ ಪ್ರತಿಭಟನೆಗೆ ಮಣಿದು ಮೊದಲು ಪ್ರಧಾನಿ ಮತ್ತು ಈಚೆಗೆ ಅಧ್ಯಕ್ಷ ಗೊಟಬಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ನಾವು ನಮ್ಮ ಗುರಿ ಸಾಧಿಸುವವರೆಗೂ ಹೋರಾಟ ನಡೆಸಲಿದ್ದೇವೆ. ವ್ಯವಸ್ಥೆಯಲ್ಲಿ ಸಂಪೂರ್ಣ ಬದಲಾವಣೆ ತರಬೇಕು ಎಂಬುದೇ ನಮ್ಮ ಒಟ್ಟು ಬೇಡಿಕೆ' ಎಂದು ಹೋರಾಟಗಾರರಲ್ಲಿ ಒಬ್ಬರಾದ ಜೀವಂತಾ ಪೀರಿಸ್ ಭಾನುವಾರ ಪ್ರತಿಕ್ರಿಯಿಸಿದರು. 'ಇದೊಂದು ಸ್ವಾತಂತ್ರ್ಯ ಹೋರಾಟ' ಎಂದೂ ಅವರು ಬಣ್ಣಿಸಿದರು.

ನಾಗರಿಕರ ಪ್ರತಿಭಟನೆ ಹಿನ್ನೆಲೆಯಲ್ಲಿ ಕೊಲಂಬೊದಲ್ಲಿ ಸಂಸತ್ ಕಟ್ಟಡದ ಬಳಿ ಬಿಗಿ ಭದ್ರತೆ ನಿಯೋಜಿಸಲಾಗಿದೆ —ಎಎಫ್‌ಪಿ ಚಿತ್ರ

ತೀವ್ರ ಹೋರಾಟ ನಡೆಸಿದ್ದ ಜನರು ಪ್ರಧಾನಿ ಮತ್ತು ಅಧ್ಯಕ್ಷರ ನಿವಾಸಕ್ಕೂ ಲಗ್ಗೆ ಹಾಕಿದ್ದರು. ಜನಾಕ್ರೋಶಕ್ಕೆ ಮಣಿದ ಅಧ್ಯಕ್ಷ, 73 ವರ್ಷದ ಗೊಟಬಯ ರಾಜಪಕ್ಸ ಅವರು ಕಳೆದ ಬುಧವಾರ ದೇಶದಿಂದಲೇ ಪಲಾಯನ ಮಾಡಿದ್ದು, ಗುರುವಾರ ಸಿಂಗಪುರದಲ್ಲಿ ಕಾಣಿಸಿಕೊಂಡಿದ್ದರು. ಬಳಿಕ ಶುಕ್ರವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಹಂಗಾಮಿ ಅಧ್ಯಕ್ಷರಾಗಿರುವ ರಾನಿಲ್ ವಿಕ್ರಮಸಿಂಘೆ ಅವರು ಈಗ ಹೋರಾ ಟಗಾರರ ಮುಂದಿನ ಗುರಿಯಾಗಿದ್ದು, ಇವರ ಪದಚ್ಯುತಿಗಾಗಿ ಈಗಾಗಲೇ ಹೋರಾಟ ಆರಂಭವಾಗಿದೆ. ರಾಜಪಕ್ಸ ಆಡಳಿತ ಅಂತ್ಯಗೊಳಿಸಲು ಜುಲೈ 5ರಂದು ನಾವು ಕ್ರಿಯಾಯೋಜನೆ ಪ್ರಕಟಿಸಿದ್ದೆವು, ಈಗ ಅದರಲ್ಲಿ ಯಶಸ್ವಿಯಾಗಿದ್ದೇವೆ ಎಂದು ಹೋರಾಟಗಾರರೊಬ್ಬರು ತಿಳಿಸಿದರು.

ಸರ್ಕಾರದ ಬಗ್ಗೆ ನಮಗೆ ಭೀತಿಯಿಲ್ಲ. ಅಧ್ಯಕ್ಷೀಯ ವ್ಯವಸ್ಥೆಯನ್ನು ಪೂರ್ಣವಾಗಿ ರದ್ದುಪಡಿಸಬೇಕು ಎಂಬುದೇ ನಮ್ಮ ಬೇಡಿಕೆ ಎಂದು ಹೋರಾಟಗಾರರು ಸ್ಪಷ್ಟಪಡಿಸಿದ್ದಾರೆ. ರಾಜಧಾನಿಯಲ್ಲಿ ಪ್ರಮುಖ ಕಟ್ಟಡಗಳಿಗೆ ಲಗ್ಗೆ ಹಾಕಿದ್ದ ಅವರು ಸದ್ಯ ಅಧ್ಯಕ್ಷರ ನಿವಾಸ ಹೊರತುಪಡಿಸಿ ಉಳಿದ ಕಟ್ಟಡಗಳನ್ನು ತೆರವುಗೊಳಿಸಿದ್ದಾರೆ.

ಬಿಕ್ಕಟ್ಟು: ನಾಳೆ ಸರ್ವಪಕ್ಷ ಸಭೆ

ನವದೆಹಲಿ (ಪಿಟಿಐ): ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟಿನ ಕುರಿತ ಚರ್ಚಿಸಲು ಕೇಂದ್ರ ಸರ್ಕಾರ ಜುಲೈ19ರ ಮಂಗಳವಾರ ಸರ್ವಪಕ್ಷಗಳ ಸಭೆ ಕರೆದಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ವಿದೇಶಾಂಗ ಸಚಿವ ಎಸ್.ಜೈಶಂಕರ್ ಸಭೆಯಲ್ಲಿ ಬಿಕ್ಕಟ್ಟಿನ ಕುರಿತು ವಿವರಿಸಲಿದ್ದಾರೆ ಎಂದು ಸಂಸದೀಯ ಖಾತೆ ಸಚಿವ ಪ್ರಹ್ಲಾದ ಜೋಶಿ ಭಾನುವಾರ ಮಾಹಿತಿ ನೀಡಿದ್ದಾರೆ.

ಈ ಮಧ್ಯೆ ಶ್ರೀಲಂಕಾ ಆರ್ಥಿಕ ಬಿಕ್ಕಟ್ಟು ಪರಿಹಾರಕ್ಕೆ ಭಾರತ ಮಧ್ಯ ಪ್ರವೇಶಿಸಬೇಕು ಎಂದು ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳು ಬೇಡಿಕೆ ಇಟ್ಟಿವೆ.

ಫೇಸ್‌ಬುಕ್‌ನಲ್ಲಿ ಇಸ್ಲಾಂ ನಿಂದನೆ ಆರೋಪ: ಹಿಂದೂ ದೇಗುಲದ ಮೇಲೆ ದಾಳಿ

ಢಾಕಾ (ಪಿಟಿಐ): ಫೇಸ್‌ಬುಕ್ ಪೋಸ್ಟ್‌ವೊಂದರಲ್ಲಿ ಇಸ್ಲಾಂ ಅನ್ನು ನಿಂದಿಸಲಾಗಿದೆ ಎಂದು ಆಕ್ರೋಶಗೊಂಡ ಗುಂಪೊಂದು ಬಾಂಗ್ಲಾದೇಶದ ಗ್ರಾಮವೊಂದರಲ್ಲಿ ಹಿಂದೂ ದೇವಸ್ಥಾನ, ಅಂಗಡಿ, ಮನೆಗಳ ಮೇಲೆ ದಾಳಿ ನಡೆಸಿದ್ದು, ಧ್ವಂಸ ಮಾಡಿದೆ. ಮಾಧ್ಯಮ ವರದಿಗಳ ಪ್ರಕಾರ, ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ನಡೆದಿರುವ ದಾಂದಲೆಯ ಮತ್ತೊಂದು ಪ್ರಕರಣವಿದು.

ನರೈಲ್ ಜಿಲ್ಲೆಯ ಸಹಪರ ಗ್ರಾಮದಲ್ಲಿ ಶುಕ್ರವಾರ ಕೃತ್ಯ ನಡೆದಿದೆ. ಗುಂಪು ಚದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಲಾಯಿತು ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ. ದೇಗುಲಗಳ ಮೇಲೆ ಇಟ್ಟಿಗೆಗಳನ್ನು ತೂರಲಾಗಿದ್ದು, ಒಳಗೆ ನುಗ್ಗಿ ಪೀಠೋಪಕರಣಗಳನ್ನು ಜಖಂಗೊಳಿಸಲಾಗಿದೆ. ಹಲವು ಅಂಗಡಿಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ವರದಿ ತಿಳಿಸಿದೆ.

ಫೇಸ್‌ಬುಕ್‌ನಲ್ಲಿ ಯುವಕನೊಬ್ಬ ಮಾಡಿದ್ದ ಪೋಸ್ಟ್‌ನಿಂದ ಸ್ಥಳೀಯ ಮುಸಲ್ಮಾನರು ಆಕ್ರೋಶಗೊಂಡಿದ್ದರು. ಶುಕ್ರವಾರ ಪ್ರಾರ್ಥನೆಯ ನಂತರ ಆಕ್ರೋಶಗೊಂಡಿದ್ದ ಗುಂಪು ದಾಂದಲೆ ಮಾಡಿದೆ. ಪೋಸ್ಟ್ ಮಾಡಿದ್ದ ಯುವಕ ತಲೆಮರೆಸಿಕೊಂಡಿದ್ದು, ಆತನ ತಂದೆಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಜ. 2013ರಿಂದ ಸೆ. 2021ರ ಅವಧಿಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ದಾಳಿಗೆ ಸಂಬಂಧಿಸಿದಂತೆ ಒಟ್ಟು 3,679 ಪ್ರಕರಣಗಳು ದಾಖಲಾಗಿವೆ ಎಂದು ವರದಿಯೊಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಭಾರತದಿಂದ ಯುದ್ಧ ಹೆಲಿಕಾಪ್ಟರ್ ಖರೀದಿಗೆ ಫಿಲಿಪ್ಪೀನ್ಸ್ ಚಿಂತನೆ

ಫಿಲಿಪ್ಪೀನ್ಸ್ (ಪಿಟಿಐ): ದೇಶದ ರಕ್ಷಣಾ ವ್ಯವಸ್ಥೆ ಮತ್ತು ದಾಳಿ ಸಾಮರ್ಥ್ಯವನ್ನು ವೃದ್ಧಿಸುವ ಕ್ರಮವಾಗಿ ಭಾರತದಿಂದ ಹಗುರ ಯುದ್ಧ ಹೆಲಿಕಾಪ್ಟರ್‌ಗಳನ್ನು ಖರೀದಿಸಲು ಫಿಲಿಪ್ಪೀನ್ಸ್ ಚಿಂತನೆ ನಡೆಸಿದೆ.

ಮೂರು ಬ್ರಹ್ಮೋಸ್ ಕ್ಷಿಪಣಿ ಖರೀದಿಗೆ ಸುಮಾರು ₹ 3,000 ಕೋಟಿ (375 ಮಿಲಿಯನ್ ಡಾಲರ್) ಒಪ್ಪಂದಕ್ಕೆ ಸಹಿ ಹಾಕಿದ ಒಂದು ತಿಂಗಳ ನಂತರ ಫಿಲಿಪ್ಪೀನ್ಸ್ ಈ ಕುರಿತ ತೀರ್ಮಾನವನ್ನು ಪ್ರಕಟಿಸಿದೆ.

ಚೀನಾದೊಂದಿಗೆ ಗಡಿ ವಿವಾದವನ್ನು ಹೊಂದಿರುವ ಫಿಲಿಪ್ಪೀನ್ಸ್, ಇದರ ಜೊತೆಗೆ ದೇಶದ ಭದ್ರತೆಯ ಸವಾಲುಗಳನ್ನು ಎದುರಿಸುವ ಕ್ರಮವಾಗಿ ದಾಳಿ ಮತ್ತು ಶಸ್ತ್ರಾಸ್ತ್ರಗಳ ಸಾಮರ್ಥ್ಯವನ್ನು ವೃದ್ಧಿಸಲು ಒತ್ತು ನೀಡಿದೆ.

ರಷ್ಯಾ ದಾಳಿ: ಉಕ್ರೇನ್‌ನ ಯುದ್ಧ ವಿಮಾನ ಪತನ

ಮಾಸ್ಕೊ (ರಾಯಿಟರ್ಸ್): ದೇಶದ ಯುದ್ಧ ವಿಮಾನವು ಉಕ್ರೇನ್‌ನ ಎಂಐ-17 ಹೆಲಿಕಾಪ್ಟರ್ ಮತ್ತು ಎಸ್‌ಯು-25 ಯುದ್ಧ ವಿಮಾನವನ್ನು ಹೊಡೆದುರುಳಿಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿಕೊಂಡಿದೆ.

ಸೇನಾ ಕಾರ್ಯಾಚರಣೆಯಲ್ಲಿ ಉಕ್ರೇನ್‌ನ ಸ್ಲೊವಿಯಾನ್ಸ್ಕ್‌ನಲ್ಲಿ ಹೆಲಿಕಾಪ್ಟರ್ ಮತ್ತು ಹಾರ್ಕಿವ್‌ನ ವಲಯದಲ್ಲಿ ಯುದ್ಧ ವಿಮಾನವನ್ನು ಹೊಡೆದುರುಳಿಸಲಾಗಿದೆ ಎಂದು ತಿಳಿಸಿದೆ.

ದೂರದ ಪ್ರದೇಶ ಗುರಿಯಾಗಿಸಿ ದಾಳಿ ನಡೆಸಬಹುದಾದ ಕ್ಷಿಪಣಿಗಳ ದಾಳಿಯಿಂದ ಉಕ್ರೇನ್‌ನ ಒಡೆಸಾ ಕೈಗಾರಿಕಾ ವಲಯವನ್ನು ಧ್ವಂಸ ಮಾಡಲಾಗಿದೆ. ಇಲ್ಲಿ ನ್ಯಾಟೊ ರಾಷ್ಟ್ರಗಳು ಪೂರೈಸಿದ್ದ ಕ್ಷಿಪಣಿಗಳನ್ನು ದಾಸ್ತಾನಿಡಲಾಗಿತ್ತು ಎಂದು ತಿಳಿಸಿದೆ. ಜೀವ ಹಾನಿ ಸಂಭವಿಸಿದೆಯೇ ಎಂಬುದರ ಮಾಹಿತಿ ಸದ್ಯಕ್ಕೆ ಲಭ್ಯವಾಗಿಲ್ಲ.

ಕಮ್ಯುನಿಸ್ಟ್ ತತ್ವ ಪಾಲನೆ: ಉಯಿಗರ್ ಮುಸ್ಲಿಮರಿಗೆ ಷಿ ಜಿನ್‌ಪಿಂಗ್ ಸಲಹೆ

ಬೀಜಿಂಗ್ (ಪಿಟಿಐ): ಚೀನಾದಲ್ಲಿ ಇಸ್ಲಾಂ ಧರ್ಮವು ಚೀನಿ ದೃಷ್ಟಿಕೋನ ಹೊಂದಿರಬೇಕು. ಮುಸಲ್ಮಾನರು ಸ್ಥಳೀಯ ಕಮ್ಯುನಿಸ್ಟ್‌ನ ಸಮಾಜವಾದಿ ತತ್ವ ಪಾಲಿಸುವಂತೆ ಅಧಿಕಾರಿಗಳು ಕಾರ್ಯತತ್ಪರರಾಗಬೇಕು ಎಂದು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಸೂಚಿಸಿದ್ದಾರೆ.

ಚೀನಿಯರನ್ನು ಬೇರೆಡೆಗೆ ಸ್ಥಳಾಂತರಿಸಬೇಕು ಎಂದು ಉಯಿಗರ್ ಮುಸಲ್ಮಾನರು ಪ್ರತಿಭಟಿಸುತ್ತಿರುವ ಕ್ಸಿಂಜಿಯಾಂಗ್ ಪ್ರಾಂತ್ಯಕ್ಕೆ ಭೇಟಿ ನೀಡಿ ಅವರು ಪರಿಶೀಲಿಸಿದರು.

ನಾಲ್ಕು ದಿನದ ಪ್ರವಾಸದ ವೇಳೆ ಷಿ ಜಿನ್‌ಪಿಂಗ್ ಅವರು ಈ ಪ್ರಾಂತ್ಯದ ವಿವಿಧ ಅಧಿಕಾರಿಗಳ ಜೊತೆಗೆ ಚರ್ಚಿಸಿದರು. ಚೀನಾ ಪರವಾಗಿ ಸ್ಥಳೀಯದಲ್ಲಿ ಸಂವೇದನೆ ಬೆಳೆಸಬೇಕು, ವಿವಿಧ ಗುಂಪುಗಳ ಜೊತೆಗೆ ಚರ್ಚಿಸಬೇಕು ಎಂದು ಸಲಹೆ ಮಾಡಿದರು.

ಸರಕು ಸಾಗಣೆ ವಿಮಾನ ಪತನ: ಎಂಟು ಸಾವು

ಅಥೆನ್ಸ್ (ರಾಯಿಟರ್ಸ್): ಉಕ್ರೇನ್‌ನ ಸರಕು ಸಾಗಣೆ ವಿಮಾನವೊಂದು ಗ್ರೀಸ್‌ನ ಉತ್ತರ ಭಾಗದಲ್ಲಿ ಪತನಗೊಂಡಿದ್ದು, ಎಂಟು ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಸೆರ್ಬಿಯಾದ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನದಲ್ಲಿ ಸೆರ್ಬಿಯಾದಿಂದ ಬಾಂಗ್ಲಾದೇಶಕ್ಕೆ ಯುದ್ಧ ಸಾಮಗ್ರಿಗಳನ್ನು ಒಯ್ಯಲಾಗುತ್ತಿತ್ತು. ಪತನಗೊಂಡ ಸ್ಥಳದಲ್ಲಿ ಅಂಟೊನೊವ್ ಎಎನ್-12 ವಿಮಾನದ ಅವಶೇಷಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದು ಡ್ರೋನ್‌ನಿಂದ ಸೆರೆಹಿಡಿದ ದೃಶ್ಯದಲ್ಲಿ ದಾಖಲಾಗಿದೆ. ಗ್ರೀಕ್‌ನ ಸ್ಥಳೀಯ ಅಧಿಕಾರಿಗಳ ಪ್ರಕಾರ, ವಿಮಾನದಲ್ಲಿ 8 ಸಿಬ್ಬಂದಿ ಇದ್ದರು ಎಂದು ತಿಳಿಸಿದ್ದಾರೆ.

ಆದರೆ, ಉಕ್ರೇನ್‌ನ ವಿದೇಶಾಂಗ ಸಚಿವಾಲಯವು ಅವರೆಲ್ಲರೂ ಉಕ್ರೇನ್ ನಾಗರಿಕರು ಎಂದು ತಿಳಿಸಿದೆ.

ಸೆರ್ಬಿಯಾದ ರಕ್ಷಣಾ ಸಚಿವರು ಈ ಬಗ್ಗೆ ನೀಡಿರುವ ಹೇಳಿಕೆಯಲ್ಲಿ ವಿಮಾನದಲ್ಲಿ 11.5 ಟನ್ ತೂಕದ ಯುದ್ಧ ಸಾಮಗ್ರಿ ಒಯ್ಯಲಾಗುತ್ತಿತ್ತು. ಇದರಲ್ಲಿ ತರಬೇತಿಗೆ ಬಳಸುವ ಶೆಲ್‌ಗಳು ಸೇರಿದ್ದವು ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology

★||ಶ್ರೀಕೇದಾರನಾಥ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9148773459

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ_ಪರಿಹಾರ. 9535088827''

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರೇಮ-ವಿಚಾರ, ವಶೀಕರಣ, ಮಾಟ-ಮಂತ್ರ, ಇನ್ನು ಮುಂತಾದ ಸಮಸ್ಯೆಗಳಿಗೆ ಚಿಂತಿಸುವ ಅವಶ್ಯಕತೆ ಇಲ್ಲ,ನಿಮ್ಮ ಸಮಸ್ಯೆ ಏನೇ ಇರಲಿ ಪರಿಹಾರ ಶತಸಿದ್ಧ: 9513707409

ರಿಯಲ್ ಎಸ್ಟೇಟ್ ಸೆಲ್ಲಿಂಗ್
Residential/ Commercial
Banashankari

ಬನಶಂಕರಿ 6ನೇ ಹಂತದಲ್ಲಿ 4 BHK 20x30 BDA ಸುಸಜ್ಜಿತ ಮನೆ ಮಾರಾಟಕ್ಕಿದೆ. ಗಣಪತಿ: 9620008681

ಉದ್ಯೋಗಾವಕಾಶ
General

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-. 9513330916, 9513330914.

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

✓ ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು. ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 10,000- 15,000, 8951315839, 9880545002

Part-Time Jobs

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಪ್ರವಾಸ
Travel

30.09.2022ರಿಂದ 34ದಿನಗಳು ವಿಮಾನ.AC ಬಸ್ಸಿನಲ್ಲಿ ಮತ್ತು ರೂಂ ಸೌಲಭ್ಯದೊಂದಿಗೆ ಚಾರಧಾಮ್ ಸಮೇತ ವೈಷ್ಣೋದೇವಿ,ಕಾಶ್ಮೀರ,ಶ್ರೀನಗರ, ಅಮೃತ್ಸರ,ಕಾಶಿ,ಗಯಾ,ನೇಪಾಳ, ಜೈಪುರ,ಹರಿದ್ವಾರ,ನವದೆಹಲಿ ಇತ್ಯಾದಿ.,ಯಾತ್ರೆಗಳಿಗೆ ಏಷ್ಯನ್ ಟ್ರಾವಲ್ ಲೈನ್ಸ್.#164/3 ಆರ್.ವಿ.ರಸ್ತೆ,ಬಸ್‌ಸ್ಟಾಪ್. ಎದುರು,ಬೆಂಗಳೂರು.04. 8105657052, 9480182865.

ಸುಸಜ್ಜಿತ ಪ್ರವಾಸಗಳು: 04.09.2022 11.10.2022 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 13.09.2022 06.10.2022 ರಿಂದ 12 ದಿನಗಳ ಕಾಶಿ,ಗಯಾ. 02.10.2022 20.10.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 13.09.2022 19.10.2022 ರಿಂದ 11 ದಿನಗಳ ಕಾಶಿ,ನೇಪಾಳ. 07.10.2022 ರಿಂದ 12 ದಿನಗಳ ಶಿಮ್ಲಾ ಅಮೃತ್ಸರ್ ವೈಷ್ಣೋದೇವಿ, 06.09.2022 ರಿಂದ 6/16 ದಿನಗಳ ಪುರಿ,ಕಲ್ಕತ್ತ ನೇಪಾಳ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

18.08.2022 05.09.2022 15.09.2022 29.09.2022 11/17/35 ದಿನಗಳ ದೆಹಲಿ ನೇಪಾಳ,ಮುಕ್ತಿನಾಥ್, ಕಾಶಿ,ಗಯಾ ಚಾರ್‌ಧಾಮ್ ಹರಿದ್ವಾರ್ ವೈಷ್ಣೋದೇವಿ, ಅಮೃತಸರ್ ಕಾಶ್ಮೀರ್. 09.11.2022 ದ್ವಾರಕಾ ಸೋಮನಾಥ್ ಓಂಕಾರೇಶ್ವರ್ ದಕ್ಷಿಣಭಾರತ ಮಧ್ಯಭಾರತ ಪ್ರವಾಸಕ್ಕೆ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 080-26574131 8317446683

05.09.2022ರಿಂದ 9ದಿನಗಳು ಕಾಶಿ,ಅಲಹಾಬಾದ್,ಅಯೋಧ್ಯ, ಗಯಾ,ಭುದ್ಧಗಯಾ. 12.9.2022ರಿಂದ 17ದಿನಗಳು ಗಂಗೋತ್ರಿ,ಯಮುನೋತ್ರಿ, ಬದರಿನಾಥ್,ಕೇದಾರನಾಥ್ ಇತ್ಯಾದಿ.`ಹೆಗಡೆ ಟೂರ್ಸ್ ಅಂಡ್ ಟ್ರಾವೆಲ್ಸ್'.ಸೌತ್‌ಎಂಡ್ ರಸ್ತೆ. ಬೆಂಗಳೂರು.04. ಫೋನ್:8884866611, 8884366611.

ಫೈನಲ್‌ನಲ್ಲಿ ಗೆದ್ದ ಪಿ.ವಿ. ಸಿಂಧು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಬ್ಯಾಡ್ಮಿಂಟನ್: ಭಾರತದ ಆಟಗಾರ್ತಿಗೆ ಋತುವಿನ ಮೂರನೇ ಪ್ರಶಸ್ತಿ

ಸಿಂಧುಗೆ ಸಿಂಗಪುರ ಕಿರೀಟ

ಸಿಂಗಪುರ (ಪಿಟಿಐ): ಚಾಕಚಕ್ಯತೆಯ ಆಟವಾಡಿದ ಭಾರತದ ಪಿ.ವಿ. ಸಿಂಧು, ಭಾನುವಾರ ಇಲ್ಲಿ ಕೊನೆಗೊಂಡ ಸಿಂಗಪುರ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಹೈದರಾಬಾದ್‌ನ ಅನುಭವಿ ಆಟಗಾರ್ತಿ 21-9, 11-21, 21-15 ರಲ್ಲಿ ಚೀನಾದ ವಾಂಗ್ ಜಿ ಯಿ ಅವರನ್ನು ಮಣಿಸಿದರು. ಫೈನಲ್ ಹಣಾಹಣಿ 58 ನಿಮಿಷ ನಡೆಯಿತು.

ಸಿಂಧು ಅವರು ಹಾಲಿ ಏಷ್ಯನ್ ಚಾಂಪಿಯನ್ ಆಗಿರುವ 22 ವರ್ಷದ ವಾಂಗ್ ವಿರುದ್ಧದ ಜಯದ ದಾಖಲೆಯನ್ನು 2–0ಗೆ ಹೆಚ್ಚಿಸಿಕೊಂಡರು. ಕಳೆದ ವರ್ಷ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಇವರು ಎದುರಾಗಿದ್ದಾಗ ಸಿಂಧುಗೆ ಗೆಲುವು ಒಲಿದಿತ್ತು.

ಫೈನಲ್‌ನಲ್ಲಿ ಇಬ್ಬರು ಆಟಗಾರ್ತಿಯರೂ ಬಹಳಷ್ಟು ಲೋಪಗಳನ್ನು ಮಾಡಿದರು. ಆದರೆ ನಿರ್ಣಾಯಕ ಘಟ್ಟಗಳಲ್ಲಿ ಸಿಂಧು ಮೇಲುಗೈ ಸಾಧಿಸಿ ಗೆದ್ದರು. ಸಿಂಧುಗೆ ಈ ವರ್ಷ ದೊರೆತ ಮೂರನೇ ಪ್ರಶಸ್ತಿ ಇದು. ಈ ಹಿಂದೆ ಸೈಯದ್ ಮೋದಿ ಮತ್ತು ಸ್ವಿಸ್ ಓಪನ್ ಟೂರ್ನಿ ಜಯಿಸಿದ್ದರು.

ಮೊದಲ ಗೇಮ್‌ನಲ್ಲಿ ಆರಂಭದ ಎರಡು ಪಾಯಿಂಟ್ ಕಳೆದುಕೊಂಡ ಸಿಂಧು, ಆ ಬಳಿಕ ಅತ್ಯುತ್ತಮ ಆಟವಾಡಿ ಸತತ 11 ಪಾಯಿಂಟ್ ಕಲೆಹಾಕಿದರು. ವಿರಾಮದ ವೇಳೆ 11–2 ರಲ್ಲಿ ಮುನ್ನಡೆ ಪಡೆದರು. ಆ ಬಳಿಕವೂ ಅದೇ ಲಯ ಕಾಪಾಡಿಕೊಂಡು ಗೇಮ್ ಗೆದ್ದರು.

ಆದರೆ ಎರಡನೇ ಗೇಮ್‌ನಲ್ಲಿ ತಿರುಗೇಟು ನೀಡಿದ ವಾಂಗ್ 11–3 ರಲ್ಲಿ ಮೇಲುಗೈ ಸಾಧಿಸಿದರು. ಭಾರಿ ಹಿನ್ನಡೆ ಅನುಭವಿಸಿದ ಭಾರತದ ಆಟಗಾರ್ತಿ, ಮರುಹೋರಾಟ ನಡೆಸುವ ಪ್ರಯತ್ನ ಕೈಬಿಟ್ಟರು. ಗೇಮ್ ಗೆದ್ದ ವಾಂಗ್ 1–1 ಸಮಬಲ ಸಾಧಿಸಿದರು.

ನಿರ್ಣಾಯಕ ಸೆಟ್‌ನ ಆರಂಭದಲ್ಲಿ ತುರುಸಿನ ಪೈಪೋಟಿ ನಡೆದು 5–5 ರಲ್ಲಿ ಸಮಬಲ ಕಂಡುಬಂತು. ಈ ಹಂತದಲ್ಲಿ ಕೆಲವೊಂದು ಭರ್ಜರಿ ಕ್ರಾಸ್‌ಕೋರ್ಟ್ ಸ್ಮ್ಯಾಷ್‌ಗಳ ಮೂಲಕ ಸಿಂಧು 11–6 ಮುನ್ನಡೆ ಪಡೆದರು.

ವಾಂಗ್ ಹಿನ್ನಡೆಯನ್ನು 11–12 ಕ್ಕೆ ತಗ್ಗಿಸಿದರು. ಆದರೆ ಒತ್ತಡವನ್ನು ಸಮರ್ಥವಾಗಿ ಮೆಟ್ಟಿನಿಂತ ಸಿಂಧು, 18–14 ರಲ್ಲಿ ಮುನ್ನಡೆ ಸಾಧಿಸಿದರು. ಆಕರ್ಷಕ ಸ್ಮ್ಯಾಷ್‌ಗಳ ಮೂಲಕ ಮತ್ತೆರಡು ಪಾಯಿಂಟ್ ಕಲೆಹಾಕಿ ಐದು ಮ್ಯಾಚ್ ಪಾಯಿಂಟ್‌ಗಳನ್ನು ಗಳಿಸಿದರು.

ಮೊದಲ ಮ್ಯಾಚ್ ಪಾಯಿಂಟ್ ಅವಕಾಶದಲ್ಲೇ ಪಾಯಿಂಟ್ ಗಿಟ್ಟಿಸಿ ಗೆಲುವಿನ ಸಂಭ್ರಮ ಆಚರಿಸಿಕೊಂಡರು.

ಕಾಮನ್‌ವೆಲ್ತ್ ಕೂಟಕ್ಕೆ ಕೆಲವೇ ದಿನಗಳಿರುವಾಗ ಲಭಿಸಿದ ಈ ಪ್ರಶಸ್ತಿಯು ಸಿಂಧು ಅವರ ಆತ್ಮ-ವಿಶ್ವಾಸವನ್ನು ಸಹಜವಾಗಿಯೇ ಹೆಚ್ಚಿಸಿದೆ. ಕಾಮನ್‌ವೆಲ್ತ್ ಕೂಟ ಜುಲೈ 28 ರಿಂದ ನಡೆಯಲಿದ್ದು, ಸಿಂಧು ಭಾರತದ ಪದಕದ ಭರವಸೆ ಎನಿಸಿಕೊಂಡಿದ್ದಾರೆ.

ಗಿಂಟಿಂಗ್‌ಗೆ ಪ್ರಶಸ್ತಿ: ಇಂಡೊನೇಷ್ಯದ ಆಂಥೋಣಿ ಸಿನಿಸುಕ ಗಿಂತಿಂಗ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಗೆದ್ದರು. ಫೈನಲ್‌ನಲ್ಲಿ 23–21, 21–17 ರಲ್ಲಿ ಜಪಾನ್‌ನ ನರವೊಕ ಕೊದೈ ಅವರನ್ನು ಮಣಿಸಿದರು.

ಕಾಮನ್‌ವೆಲ್ತ್ ಗೇಮ್ಸ್; ಇಂದಿನಿಂದ ಶಿಬಿರ: ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತೆರಳಲಿರುವ ಆಟಗಾರರಿಗಾಗಿ ಸೋಮವಾರದಿಂದ ಹೈದರಾಬಾದ್‌ನಲ್ಲಿ ಒಂದು ವಾರ ಅಭ್ಯಾಸ ಶಿಬಿರ ನಡೆಯಲಿದೆ ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆ ಹೇಳಿದೆ.

ಜುಲೈ 28ರಿಂದ ಆರಂ-ಭವಾಗಲಿರುವ ಕೂಟಕ್ಕಾಗಿ ಭಾರತದ 10 ಮಂದಿಯ ತಂಡವು 25ರಂದು ಬರ್ಮಿಂಗ್‌ಹ್ಯಾಮ್‌ಗೆ ತೆರಳಲಿದೆ.

ಪ್ಯಾರಾ ಬ್ಯಾಡ್ಮಿಂಟನ್: ನಿತ್ಯಶ್ರೀಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ನಿತ್ಯಶ್ರೀ ಸುಮತಿ ಶಿವನ್ ಅವರು ಐರ್ಲೆಂಡ್‌ನ ಡಬ್ಲಿನ್‌ನಲ್ಲಿ ನಡೆಯುತ್ತಿರುವ ನಾಲ್ಕು ರಾಷ್ಟ್ರಗಳ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದು-ಕೊಂಡಿದ್ದಾರೆ.

ಭಾನುವಾರ ಮಹಿಳಾ ಸಿಂಗಲ್ಸ್‌ನ ಎಸ್‌ಎಚ್6 ವಿಭಾಗದಲ್ಲಿ ನಿತ್ಯಶ್ರೀ ಅವರು ಪದಕ ಜಯಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಪ್ರಮೋದ್ ಭಗತ್, ಪುರುಷರ ಸಿಂಗಲ್ಸ್ ಎಸ್‌ಎಲ್3 ವಿಭಾಗದಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ನಿತ್ಯಶ್ರೀ ಅವರು 32 ನಿಮಿಷಗಳ ಕಾಲ ನಡೆದ ಫೈನಲ್ ಹಣಾಹಣಿಯಲ್ಲಿ 21-14, 18-21, 21-7ರಿಂದ ಇಂಗ್ಲೆಂಡ್‌ನ ರಚೆಲ್ ಚೂಂಗ್ ಅವರನ್ನು ಸೋಲಿಸಿದರು.

ಭಗತ್ ಅವರು ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ 17-21 9-21ರಿಂದ ಇಂಗ್ಲೆಂಡ್‌ನ ಡೇನಿಯಲ್ ಬೆಥೆಲ್ ಎದುರು ಎಡವಿದರು.

‘ನಾನು ತೋರಿದ ಸಾಮರ್ಥ್ಯ ನಿರಾಸೆ ತಂದಿದೆ. ಗೆಲುವಿಗೆ ಸಾಧ್ಯವಾದಷ್ಟು ಪ್ರಯತ್ನಿಸಿದೆ. ಆದರೆ ಯಶಸ್ಸು ಲಭಿಸಲಿಲ್ಲ. ಡೇನಿಯಲ್ ಚೆನ್ನಾಗಿ ಆಡಿದರು’ ಎಂದು ಪ್ರಮೋದ್ ಹೇಳಿದರು.

ಎಸ್‌ಎಲ್3– ಎಸ್‌ಯು5 ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಚಿರಾಗ್ ಬರೆಥಾ ಮತ್ತು ಮನದೀಪ್ ಕೌರ್ ಕೂಡ ಬೆಳ್ಳಿ ಪದಕಕ್ಕೆ ಮುತ್ತಿಟ್ಟರು. ಫೈನಲ್ ಹಣಾಹಣಿಯಲ್ಲಿ ಇವರಿಬ್ಬರು 14-21, 18-21ರಿಂದ ಫ್ರಾನ್ಸ್‌ನ ಲೂಕಾಸ್ ಮಜೂರ್ ಮತ್ತು ಫೌಸ್ಟಿನ್ ನೋಯಲ್ ಎದುರು ಎಡವಿದರು.

ಐಎಸ್‌ಎಸ್‌ಎಫ್ ವಿಶ್ವಕಪ್: ಕಂಚು ಜಯಿಸಿದ ಅಂಜುಮ್

ಶೂಟಿಂಗ್: ಭಾರತಕ್ಕೆ ಬೆಳ್ಳಿ

ಪದಕದೊಂದಿಗೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದ ಸಂಜೀವ್ ರಜಪೂತ್, ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಮತ್ತು ಚೈನ್ ಸಿಂಗ್– ಪಿಟಿಐ ಚಿತ್ರ

ಚಾಂಗ್ವಾನ್ , ದಕ್ಷಿಣ ಕೊರಿಯಾ (ಪಿಟಿಐ): ಸಂಜೀವ್ ರಜಪೂತ್, ಚೈನ್ ಸಿಂಗ್ ಮತ್ತು ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಅವರ-ನ್ನೊಳಗೊಂಡ ಭಾರತ ಪುರುಷರ ತಂಡವು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿಯಲ್ಲಿ ಬೆಳ್ಳಿ ಪದಕ ಜಯಿಸಿದೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್ ತಂಡ ವಿಭಾಗದಲ್ಲಿ ಭಾರತದ ಶೂಟರ್‌ಗಳಿಗೆ ಬೆಳ್ಳಿ ಒಲಿಯಿತು.

ಜಿದ್ದಾಜಿದ್ದಿನ ಫೈನಲ್ ಹಣಾಹಣಿಯು ಭಾರತ ತಂಡದವರು 12–16ರಿಂದ ಜೆಕ್ ಗಣರಾಜ್ಯದ ಪೀಟರ್ ನಿಂಬರ್‌ಸ್ಕಿ, ಫಿಲಿಪ್ ನೆಪೆಚಾಲ್ ಮತ್ತು ಜಿರಿ ಪ್ರಿವ್ರಟ್‌ಸ್ಕಿ ಎದುರು ಮಣಿದರು.

ಮಹಿಳೆಯರ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್ ವೈಯಕ್ತಿಕ ವಿಭಾಗದಲ್ಲಿ ಅಂಜುಮ್ ಮೌದ್ಗಿಲ್ ಅವರು ಕಂಚಿನ ಪದಕ ಗೆದ್ದುಕೊಂಡರು. ಫೈನಲ್ ಸುತ್ತಿನಲ್ಲಿ ಅಂಜುಮ್ 402.9 ಅಂಕ ಗಳಿಸಿದರು. ಜರ್ಮನಿಯ ಅನ್ನಾ ಜಾನ್ಸೆನ್ (407.7 ಅಂಕ) ಚಿನ್ನ ಮತ್ತು ಇಟಲಿಯ ಬಾರ್ಬರಾ ಗ್ಯಾಂಬರೊ (403.4 ಅಂಕ) ಬೆಳ್ಳಿ ಗಳಿಸಿದರು.

28 ವರ್ಷದ ಅಂಜುಮ್ ಅವರಿಗೆ ಇದು ಸತತ ಎರಡನೇ ವಿಶ್ವಕಪ್ ಪದಕ. ಕಳೆದ ತಿಂಗಳು ಬಾಕುನಲ್ಲಿ ನಡೆದ ಟೂರ್ನಿಯಲ್ಲಿ ಅವರಿಗೆ ಬೆಳ್ಳಿ ಪದಕ ಒಲಿದಿತ್ತು. ಭಾರತ ಪದಕಪಟ್ಟಿಯಲ್ಲಿ ಸದ್ಯ 11 ಪದಕಗಳೊಂದಿಗೆ (ನಾಲ್ಕು ಚಿನ್ನ, ಐದು ಬೆಳ್ಳಿ, ಎರಡು ಕಂಚು) ಅಗ್ರಸ್ಥಾನ ಕಾಪಾಡಿಕೊಂಡಿದೆ.

ಈಜು: ಹಷಿಕಾ ಎರಡು ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಪ್ರದರ್ಶನ ಮುಂದುರಿಸಿದ ಕರ್ನಾಟಕದ ಹಷಿಕಾ ರಾಮಚಂದ್ರ ಅವರು ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಈಜು ಚಾಂ-ಪಿಯನ್‌ಷಿಪ್‌ನಲ್ಲಿ ಮತ್ತೆ ಎರಡು ಕೂಟ ದಾಖಲೆಗಳನ್ನು ಸ್ಥಾಪಿಸಿದರು.

ಎರಡನೇ ದಿನವಾದ ಭಾನುವಾರ ನಡೆದ 12ರಿಂದ 14 ವರ್ಷದೊಳಗಿನ ಬಾಲಕಿಯರ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಹಷಿಕಾ 4 ನಿ. 29.25 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ಆನ್ಯಾ ವಾಲಾ (4:31.99) ಹೆಸರಲ್ಲಿದ್ದ ದಾಖಲೆಯನ್ನು ಅವರು ಮುರಿದರು. ಕರ್ನಾಟಕದವ-ರೇ ಆದ ಎಸ್.ರುಜುಲಾ ಬೆಳ್ಳಿ ಗೆದ್ದರೆ, ತೆಲಂಗಾಣದ ಶ್ರೀನಿತ್ಯ ಸಾಗಿ ಮೂರನೇ ಸ್ಥಾನ ಗಳಿಸಿದರು.

ಆ ಬಳಿಕ 200 ಮೀ. ಬಟರ್‌ಫ್ಲೈ ವಿಭಾಗದಲ್ಲಿ ಕಣಕ್ಕಿಳಿದ ಹಷಿಕಾ, ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಹಷಿಕಾ ರಾಮಚಂದ್ರ

ಅವರು 2 ನಿಮಿಷ 23.20 ಸೆ.ಗಳಲ್ಲಿ ಗುರಿ ತಲುಪಿದರು. ಮಹಾರಾಷ್ಟ್ರದ ಅಪೇಕ್ಷಾ ಫೆರ್ನಾಂಡಿಸ್ (2:23.67 ಸೆ.) ಅವರು 2019 ರಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು ಮುರಿದರು.

ಹಷಿಕಾ ಕೂಟದ ಮೊದಲ ದಿನ 200 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಕೂಟ ದಾಖಲೆ ಮಾಡಿದ್ದರು. ನೀನಾ ವೆಂಟಕೇಶ್ ಅವರು 50 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

ಫಲಿತಾಂಶ: ಬಾಲಕಿಯರ ವಿಭಾಗ (12 ರಿಂದ 14 ವರ್ಷ): 400 ಮೀ. ಫ್ರೀಸ್ಟೈಲ್: ಹಷಿಕಾ ರಾಮಚಂದ್ರ (ಕರ್ನಾಟಕ)–1 ಕಾಲ: 4 ನಿ.29.25 ಸೆ., ಎಸ್.ರುಜುಲಾ (ಕರ್ನಾಟಕ)–2, ಶ್ರೀನಿತ್ಯಾ ಸಾಗಿ (ತೆಲಂಗಾಣ)–3.200 ಮೀ.ಬಟರ್‌ಫ್ಲೈ: ಹಷಿಕಾ ರಾಮಚಂದ್ರ (ಕರ್ನಾಟಕ)–1 ಕಾಲ: 2ನಿ. 23.29 ಸೆ., ತನಿಷಿ ಗುಪ್ತಾ (ಕರ್ನಾಟಕ)–2, ಮೋಕ್ಷಿತಾ ಎ. (ತೆಲಂಗಾಣ)–3. 15–17 ವರ್ಷ: 50 ಮೀ.ಫ್ರೀಸ್ಟೈಲ್: ನೀನಾ ವೆಂಕಟೇಶ್ (ಕರ್ನಾಟಕ)–1 ಕಾಲ: 27.30 ಸೆ., ಜಸ್‌ನೂರ್ ಕೌರ್ (ಪಂಜಾಬ್)–2, ರಿಧಿಮಾ ವೀರೇಂದ್ರ ಕುಮಾರ್ (ಕರ್ನಾಟಕ)–3

ಬಾಲಕರ ವಿಭಾಗ 15 ರಿಂದ 17 ವರ್ಷ: 200 ಮೀ. ಬಟರ್‌ಫ್ಲೈ: ಉತ್ಕರ್ಷ್ ಸಂತೋಷ್ ಪಾಟೀಲ್ (ಕರ್ನಾಟಕ)–1, ಕಾಲ: 2 ನಿ. 04.60 ಸೆ., ಯುಗ್ ಚೆಲನಿ (ರಾಜಸ್ತಾನ)–2, ಅನ್ವಯ್ ಜಿಂದಾಲ್ (ಪಂಜಾಬ್)–3

12 ರಿಂದ 14 ವರ್ಷ: 50 ಮೀ. ಬ್ರೆ-ಸ್ಟ್‌ಸ್ಟ್ರೋಕ್: ಆರ್.ನವನೀತ್ (ಕರ್ನಾಟಕ)–1, ಕಾಲ: 33.12 ಸೆ., ಎಂ.ಎಸ್.ನಿತೀಶ್ (ತಮಿಳುನಾಡು)–2, ಅಂಕಿತ್ ಯಾದವ್ (ಎಸ್‌ಎಸ್‌ಸಿಬಿ)–3

ಮುರಳಿ ಶ್ರೀಶಂಕರ್‌ಗೆ ಏಳನೇ ಸ್ಥಾನ

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಲಾಂಗ್‌ಜಂಪ್ ಫೈನಲ್‌ನಲ್ಲಿ ನಿರಾಸೆ

ಯೂಜೀನ್, ಅಮೆರಿಕ (ಪಿಟಿಐ/ ಎಎಫ್‌ಪಿ): ಭಾರತದ ಮುರಳಿ ಶ್ರೀಶಂಕರ್ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಪದಕದೆಡೆಗೆ ಜಿಗಿಯುವಲ್ಲಿ ವಿಫಲರಾದರು. ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಏಳನೇ ಸ್ಥಾನ ಪಡೆದುಕೊಂಡರು.

ವಿಶ್ವ ಅಥ್ಲೆಟಿಕ್ಸ್‌ನ ಪುರುಷರ ಲಾಂಗ್‌ಜಂಪ್‌ನಲ್ಲಿ ಫೈನಲ್ ಪ್ರವೇಶಿಸಿದ ಭಾರತದ ಮೊದಲ ಅಥ್ಲೀಟ್ ಎಂಬ ಗೌರವ ತಮ್ಮದಾಗಿಸಿಕೊಂಡಿದ್ದ ಮುರಳಿ, ಫೈನಲ್‌ನಲ್ಲಿ ನಿರೀಕ್ಷಿತ ಪ್ರದರ್ಶನ ನೀಡಲಿಲ್ಲ.

23 ವರ್ಷದ ಮುರಳಿ 7.96 ಮೀ. ದೂರ ಜಿಗಿದರು. ಕಣದಲ್ಲಿದ್ದ 12 ಸ್ಪರ್ಧಿಗಳಲ್ಲಿ ಅವರು ಏಳನೆಯವ-ರಾದರು. ಮೊದಲ ಅವಕಾಶದಲ್ಲಿ ಈ ದೂರ ಕಂಡುಕೊಂಡರು. ನಾಲ್ಕನೇ ಅವಕಾಶದಲ್ಲಿ 7.89 ಮೀ. ಮತ್ತು ಕೊನೆಯ ಅವಕಾಶದಲ್ಲಿ 7.83 ಮೀ. ದೂರ ಜಿಗಿದರು. 2, 3 ಮತ್ತು 5ನೇ ಪ್ರಯತ್ನಗಳು ಫೌಲ್ ಆದವು.

ಚೀನಾದ ಜಿಯನನ್ ವಾಂಗ್ 8.36 ಮೀ. ಸಾಧನೆಯೊಂದಿಗೆ ಚಿನ್ನ ಗೆದ್ದರು. ಒಲಿಂಪಿಕ್ ಚಾಂಪಿಯನ್ ಗ್ರೀಸ್‌ನ ಮಿಲ್ಟಿಯಾಡಿಸ್ ಟೆಂಟೊಗ್ಲೌ (8.30 ಮೀ.) ಬೆಳ್ಳಿ ಹಾಗೂ ಸ್ವಿಟ್ಜರ್‌ಲೆಂಡ್‌ನ ಸಿಮೊನ್ ಹಮೆರ್ (8.16 ಮೀ.) ಕಂಚು ಜಯಿಸಿದರು.

ಈ ಋತುವಿನಲ್ಲಿ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದ ಶ್ರೀಕುಮಾರ್, ಅಚ್ಚರಿಯ ಫಲಿತಾಂಶ ನೀಡುವರು ಎಂದು ನಿರೀಕ್ಷಿಸಲಾಗಿತ್ತು. ವಿವಿಧ ಕೂಟಗಳಲ್ಲಿ ಅವರು 8.17 ಮೀ, 8.36 ಮೀ., 8.31 ಮೀ. ದೂರ ಜಿಗಿದಿದ್ದರು. ‘ಮುರಳಿ ಉತ್ತಮ ಪ್ರದರ್ಶನದ ವಿಶ್ವಾ-ಸದಲ್ಲಿದ್ದರು. ಆದರೆ ಅವರಿಗೆ ಅದೃಷ್ಟ ಕೈಕೊಟ್ಟಿತು. 8.16 ಮೀ. ದೂರ ಜಿಗಿದರೂ ಪದಕ ದೊರೆಯುತ್ತಿತ್ತು. ಈ ಋತುವಿನಲ್ಲಿ ಹಲವು ಸಲ 8.16 ಮೀ. ಗಡಿ ದಾಟಿದ್ದರು’ ಎಂದು ಮುರಳಿ ಅವರ ಕೋಚ್ ಕೂಡಾ ಆಗಿರುವ ತಂದೆ ಎಸ್.ಮುರಳಿ ಪ್ರತಿಕ್ರಿಯಿಸಿದರು.

ಪಾರುಲ್ ಚೌಧರಿಗೆ 31ನೇ ಸ್ಥಾನ: ಭಾರತದ ಪಾರುಲ್ ಚೌಧರಿ, ಮಹಿಳೆಯರ 3,000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ವೈಯಕ್ತಿಕ ಶ್ರೇಷ್ಠ ಸಮಯ ಕಂಡುಕೊಂಡರೂ ಫೈನಲ್ ಪ್ರವೇಶಿಸಲು ವಿಫಲರಾದರು.

ಎರಡನೇ ಹೀಟ್‌ನಲ್ಲಿ ಸ್ಪರ್ಧಿಸಿದ ಅವರು 9 ನಿ. 38.09 ಸೆಕೆಂಡುಗಳಲ್ಲಿ 12ನೆಯವರಾಗಿ ಗುರಿ ತಲುಪಿದರು. ಒಟ್ಟಾರೆಯಾಗಿ ಅವರಿಗೆ 31ನೇ ಸ್ಥಾನ ಲಭಿಸಿತು.

ತಿರುವನಂತಪುರದಲ್ಲಿ ಮಾರ್ಚ್ ತಿಂಗಳಲ್ಲಿ ನಡೆದಿದ್ದ ಇಂಡಿಯನ್ ಗ್ರ್ಯಾನ್ ಪ್ರಿ ಸೀರಿಸ್‌ನಲ್ಲಿ 9 ನಿ. 38.29 ಸೆ.ಗಳಲ್ಲಿ ಕ್ರಮಿಸಿದ್ದು ಅವರ ಇದುವರೆಗಿನ ಉತ್ತಮ ಸಾಧನೆಯಾಗಿತ್ತು.

ಪುರುಷರ 400 ಮೀ. ಹರ್ಡಲ್ಸ್‌ನಲ್ಲಿ ಸ್ಪರ್ಧಿಸಿದ ಭಾರತದ ಎಂ.ಪಿ. ಜಾಬಿರ್ ಸೆಮಿಫೈನಲ್ ಪ್ರವೇಶಿಸಲು ವಿಫಲರಾದರು. ಏಳು ಅಥ್ಲೀಟ್‌ಗಳು ಪಾಲ್ಗೊಂಡ ಎರಡನೇ ಹೀಟ್ಸ್‌ನಲ್ಲಿ ಅವರು ಕೊನೆಯವರಾದರು.

ಟೋಲಗೆ ಮ್ಯಾರಥಾನ್ ಚಿನ್ನ: ಇಥಿಯೋಪಿಯದ ಟಮಿರತ್ ಟೋಲ, ಪುರುಷರ ಮ್ಯಾರಥಾನ್ ಚಿನ್ನ ಗೆದ್ದರು. 42 ಕಿ.ಮೀ ದೂರವನ್ನು ಅವರು 2 ಗಂಟೆ 5 ನಿ. 37 ಸೆಕೆಂಡುಗಳಲ್ಲಿ ಕ್ರಮಿಸಿದರು.

ಇಥಿಯೋಪಿಯದವರೇ ಆದ ಮಾಸಿನೆಟ್ ಗೆರೆಮೆವ್ (2 ಗಂ. 6.45 ನಿ.) ಬೆಳ್ಳಿ ಗೆದ್ದರು.

ಪುರುಷರ 100 ಮೀ. ಓಟದಲ್ಲಿ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದ ಅಮೆರಿಕದ ಫ್ರೆಡ್ ಕೆರ್ಲಿ (ಮಧ್ಯದಲ್ಲಿ) ಮತ್ತು ಮರ್ವಿನ್ ಬ್ರೇಸಿ (ಬಲ) ಗುರಿಯತ್ತ ಮುನ್ನುಗ್ಗಿದರು. ದಕ್ಷಿಣ ಆಫ್ರಿಕಾದ ಅಕನಿ ಸಿಂಬಿನೆ (ಎಡ) ಇದ್ದಾರೆ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- 7.96 ಮೀ. ದೂರ ಜಿಗಿದ ಭಾರತದ ಸ್ಪರ್ಧಿ
- ಸ್ಟೀಪಲ್ ಚೇಸ್: ಪಾರುಲ್‌ಗೆ 31ನೇ ಸ್ಥಾನ
- ಹರ್ಡಲ್ಸ್: ಸೆಮಿ ಪ್ರವೇಶಿಸಲು ಜಾಬಿರ್ ವಿಫಲ

ಭಾರತದ ಪಾರುಲ್ ಚೌಧರಿ (ಎಡ)– ಪಿಟಿಐ ಚಿತ್ರ

100 ಮೀ.: ಅಮೆರಿಕ ‘ಕ್ಲೀನ್‌ಸ್ವೀಪ್’

ಪುರುಷರ 100 ಮೀ. ಓಟದ ಸ್ಪರ್ಧೆಯಲ್ಲಿ ಅಮೆರಿಕ ‘ಕ್ಲೀನ್‌ಸ್ವೀಪ್’ ಸಾಧನೆ ಮಾಡಿತು. ಫ್ರೆಡ್ ಕೆರ್ಲಿ 9.86 ಸೆ.ಗಳೊಂದಿಗೆ ಗುರಿ ತಲುಪಿ ಚಿನ್ನ ಗೆದ್ದರೆ, ಮರ್ವಿನ್ ಬ್ರೇಸಿ (9.88 ಸೆ.) ಬೆಳ್ಳಿಪದಕ ಪಡೆದರು. ಟ್ರೇವನ್ ಬ್ರೊಮೆಲ್ (9.88 ಸೆ.) ಮೂರನೆಯವರಾದರು.

ತುರುಸಿನ ಪೈಪೋಟಿ ನಡೆದ ಸ್ಪರ್ಧೆಯಲ್ಲಿ ಬ್ರೇಸಿ ಅವರು 95 ಮೀ. ವರೆಗೂ ಮುನ್ನಡೆ ಕಾಯ್ದುಕೊಂಡಿದ್ದರು. ಆದರೆ ಕೊನೆಯ ಐದು ಮೀ. ಇರುವಾಗ ಮಿಂಚಿನ ವೇಗದಲ್ಲಿ ಮುನ್ನುಗ್ಗಿದ ಕೆರ್ಲಿ ಚಿನ್ನಕ್ಕೆ ಮುತ್ತಿಟ್ಟರು.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಪುರುಷರ 100 ಮೀ. ಓಟದಲ್ಲಿ ಅಮೆರಿಕ 1991ರ ಬಳಿಕ ಇದೇ ಮೊದಲ ಬಾರಿ ‘ಕ್ಲೀನ್‌ಸ್ವೀಪ್’ ಸಾಧನೆ ಮಾಡಿದೆ. ಅದಕ್ಕೂ ಮುನ್ನ 1983 ರಲ್ಲಿ ಇಂತಹದೇ ಸಾಧನೆ ಮಾಡಿತ್ತು.

1991ರಲ್ಲಿ ಕಾರ್ಲ್ ಲೆವಿಸ್, ಲೆರೊಯ್ ಬರೆಲ್ ಮತ್ತು ಡೆನಿಸ್ ಮಿಚೆಲ್ ಅವರು ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ಪಡೆದುಕೊಂಡಿದ್ದರು.

ಸೂಪರ್‌ನ್ಯಾಚುರಲ್ ಕುದುರೆಯು ಗೆಲುವಿನ ಗುರಿ ತಲುಪಿದಾಗ ಜಾಕಿ ಟ್ರೆವರ್ ಪಟೇಲ್ ಸಂಭ್ರಮಿಸಿದರು.

ಡರ್ಬಿ ವೀಕ್ಷಿಸಲು ಬಂದಿದ್ದ ರೇಸ್‌ಪ್ರಿಯರು

ರೇಸ್‌ಪ್ರಿಯರ ಮನತಣಿಸಿದ ‘ಬೆಟ್‌ವೇ ಬೆಂಗಳೂರು ಬೇಸಿಗೆ ಡರ್ಬಿ’

ಸೂಪರ್‌ನ್ಯಾಚುರಲ್‌ಗೆ ರೋಚಕ ಗೆಲುವು

• ರವಿಕುಮಾರ್

ಬೆಂಗಳೂರು: ಕೊನೆಯ ಕೆಲವು ಮೀಟರ್‌ಗಳು ಇದ್ದಾಗ ಮಿಂಚಿನ ವೇಗದಲ್ಲಿ ಓಡಿದ ‘ಸೂಪರ್ ನ್ಯಾಚುರಲ್’, ಭಾನುವಾರ ಇಲ್ಲಿ ನಡೆದ ‘ಬೆಟ್‌ವೇ ಬೆಂಗಳೂರು ಬೇಸಿಗೆ ಡರ್ಬಿ’ಯಲ್ಲಿ ಅನಿರೀಕ್ಷಿತ ಗೆಲುವು ಪಡೆಯಿತು.

ಪಿ.ಶ್ರಾಫ್ ಅವರಿಂದ ತರಬೇತಿ ಪಡೆದಿರುವ, ಟ್ರೆವರ್ ಪಟೇಲ್ ಅವರು ಜಾಕಿಯಾಗಿದ್ದ ಈ ಕುದುರೆ 2,000 ಮೀ. ದೂರದ ಓಟವನ್ನು 2 ನಿಮಿಷ 9.96 ಸೆಕೆಂಡುಗಳಲ್ಲಿ ಕ್ರಮಿಸಿತು. ಗೆದ್ದ ಕುದುರೆ ₹ 3 ಲಕ್ಷ ಮೌಲ್ಯದ ಟ್ರೋಫಿಯ ಜತೆಗೆ ₹ 1.18 ಕೋಟಿ ಬಹುಮಾನ ಮೊತ್ತ ತನ್ನದಾಗಿಸಿಕೊಂಡಿತು.

ಪಿ.ಶ್ರಾಫ್ ಅವರಿಂದಲೇ ತರಬೇ-ತುಗೊಂಡಿರುವ ಕಿಂಗ್ಸ್ ರಾನ್ಸಮ್ ಎರಡನೇ ಸ್ಥಾನ ಪಡೆದರೆ, ಮೊಜಿಟೊ ಮೂರನೇ ಸ್ಥಾನ ಗಳಿಸಿತು. ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಕಿಕ್ಕಿರಿದ್ದು ನೆರೆದಿದ್ದ ರೇಸ್ ಪ್ರಿಯರಿಗೆ ಡರ್ಬಿ ಸಾಕಷ್ಟು ರಸದೌತಣ ಉಣಬಡಿಸಿತು.

ಡರ್ಬಿಯ ಹಿಂದಿನ ದಿನದವರೆಗೂ ‘ಫಿಲಾಸಫಿ’ ಗೆಲ್ಲುವ ಫೇವರಿಟ್ ಎನಿಸಿಕೊಂಡಿತ್ತು. ಆದರೆ ಬೆಟ್ಟಿಂಗ್ ಪ್ರಾರಂಭವಾದಾಗ ಹಲವಾರು ಬದಲಾ-ವಣೆಗಳಾಗಿ ‘ರೇಸ್’ ಮುಕ್ತವಾಗಿ ಕಂಡಿತು. ಯಾವುದೇ ಕುದುರೆಯೂ ಗೆಲ್ಲಬಹುದು ಎಂಬ ನಿರೀಕ್ಷೆ ಮೂಡಿಸಿತು.

‘ಒನ್ಸ್ ಯು ಗೋ ಬ್ಲ್ಯಾಕ್’ ಕುದುರೆ, ರೇಸ್ ಪ್ರಾರಂಭಕ್ಕೂ ಮುನ್ನ ಗೇಟ್ ಬಳಿ ಗಾಯಗೊಂಡಿತು. ಇದರಿಂದ ಸ್ಪರ್ಧೆಯಿಂದ ಹಿಂದೆ ಸರಿಯಿತು. ಕಣದಲ್ಲಿ 12 ಕುದುರೆಗಳು ಉಳಿದುಕೊಂಡವು.

ಡರ್ಬಿ ವೀಕ್ಷಿಸಲು ಬಂದಿದ್ದ ರೇಸ್‌ಪ್ರಿಯರು– ಪ್ರಜಾವಾಣಿ ಚಿತ್ರಗಳು/ ಬಿ.ಎಚ್. ಶಿವಕುಮಾರ್

ರೇಸ್‌ನ ಆರಂಭದಿಂದ ಕೊನೆಯ ತಿರುವಿನವರೆಗೂ ಪ್ರಾಗ್ (ಜಾಕಿ– ಆಶಾದ್ ಅಸ್ಬರ್) ಮುನ್ನಡೆಯಲ್ಲಿತ್ತು. ಸಿರೇನಿಯಸ್ (ಜಾಕಿ– ಪಿ.ಪಿ. ದೆಬೆ) ಮತ್ತು ಸಕ್ಸಸ್ (ಜಾಕಿ–ಸಿ.ಎಸ್. ಜೋಧ) ಬಳಿಕದ ಸ್ಥಾನದಲ್ಲಿದ್ದವು. ಸೂಪರ್ ನ್ಯಾಚುರಲ್ ಸೇರಿದಂತೆ ಇತರ ಕುದುರೆಗಳು ಅಲ್ಪ ಹಿಂದಿದ್ದವು.

ಕೊನೆಯ 400 ಮೀ. ಗಳು ಇದ್ದಾಗ ರೇಸ್‌ನ ಚಿತ್ರಣ ಬದಲಾಯಿತು. ಎಲ್ಲ ಜಾಕಿಗಳು ಅಂತಿಮ 400 ಮೀ. ನಲ್ಲಿ ತಮ್ಮ ಯೋಜನೆಗಳನ್ನು ಕಾರ್ಯರೂ-ಪಕ್ಕಿಳಿಸಿದರು. ವೇಗ ಹೆಚ್ಚಿಸುವಂತೆ ಕುದುರೆಗಳಿಗೆ ಸೂಚನೆ ನೀಡಿದರು.

ಗುರಿ ತಲುಪಲು ಕೊನೆಯ 200 ಮೀ. ಇರುವಾಗಲೂ ಪ್ರಾಗ್ ಮುನ್ನಡೆ ಕಾಪಾಡಿಕೊಂಡಿತ್ತು. ಆದರೆ ಭಾರತದ ಅತ್ಯಂತ ಶ್ರೇಷ್ಠ ಜಾಕಿಗಳಲ್ಲಿ ಒಬ್ಬರೆನಿ-ಸಿಕೊಂಡಿರುವ ಟ್ರೆವರ್, ಅತಿಯಾದ ಒತ್ತಡದ ನಡುವೆಯೂ ತಮ್ಮ ಕುದುರೆ ‘ಸೂಪರ್‌ನ್ಯಾಚುರಲ್’ನ ವೇಗವನ್ನು ಹೆಚ್ಚಿಸಲು ಯಶಸ್ವಿಯಾದರು.

ಕೊನೆಯ 100 ಮೀಟರ್ಸ್ ಇರುವಂತೆಯೇ ಶರವೇಗದಲ್ಲಿ ಓಡಿ ಎರಡೂ ಕಾಲು ಲೆಂಗ್ತ್ ಅಂತರದಿಂದ ಗೆಲುವು ಪಡೆಯಿತು. ಕಿಂಗ್ಸ್ ರಾನ್ಸಮ್ ಕೂಡಾ ಹಿಂದಿನಿಂದ ವೇಗವಾಗಿ ಮುನ್ನುಗ್ಗಿ ಎರಡನೇ ಸ್ಥಾನ ಗಳಿಸಿತು. ಮೊಜಿಟೊ ಕೂಡಾ ವೇಗ ಹೆಚ್ಚಿಸಿ, ಪ್ರಾಗ್‌ಅನ್ನು ಹಿಂದಿಕ್ಕಿ ಮೂರನೇ ಸ್ಥಾನ ತನ್ನದಾಗಿಸಿಕೊಂಡಿತು.

‘ಕುದುರೆಯ ವರ್ತನೆ ಮತ್ತು ಸಾಮರ್ಥ್ಯ ನಾವು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇವೆ. ನಮ್ಮ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ಇಳಿಸಿದೆವು. ಕುದುರೆ ಕೂಡಾ ಸ್ಪಂದಿಸಿತು’ ಎಂದರು ಶ್ರಾಫ್.

ಮೊದಲ ನಾಲ್ಕು ಸ್ಥಾನ ಪಡೆದ ಕುದುರೆಗಳ ವಿವರ

ಸ್ಥಾನ	ಕುದುರೆ	ಸಮಯ	ಟ್ರೇನರ್	ಜಾಕಿ	ಬಹುಮಾನ ಮೊತ್ತ
1	ಸೂಪರ್ ನ್ಯಾಚುರಲ್	2 ನಿಮಿಷ 09.96 ಸೆ.	ಪಿ.ಶ್ರಾಫ್	ಟ್ರೆವರ್ ಪಟೇಲ್	₹1.18 ಕೋಟಿ
2	ಕಿಂಗ್ಸ್ ರಾನ್ಸಮ್	2 ನಿಮಿಷ 10.33 ಸೆ.	ಪಿ.ಶ್ರಾಫ್	ಪಿ.ಎಸ್. ಚೌಹಾಣ್	₹ 39.60 ಲಕ್ಷ
3	ಮೊಜಿಟೊ	2 ನಿಮಿಷ 10.51 ಸೆ.	ಎಂ.ಕೆ. ಜಾಧವ್	ಎನ್.ಎಸ್. ಪರ್ಮಾರ್	₹ 19.80 ಲಕ್ಷ
4	ಪ್ರಾಗ್	2 ನಿಮಿಷ 10.64 ಸೆ.	ಅತಾವೊಲ್ಲ	ಆಶಾದ್ ಅಸ್ಬರ್	₹ 9.90 ಲಕ್ಷ

‘ಏಷ್ಯಾಕಪ್ ಕ್ರಿಕೆಟ್ ಸ್ಥಳಾಂತರ ಸಾಧ್ಯತೆ’

ನವದೆಹಲಿ (ಪಿಟಿಐ): ಏಷ್ಯಾಕಪ್ ಕ್ರಿಕೆಟ್ ಟೂರ್ನಿಯು ಶ್ರೀಲಂಕಾದಿಂದ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ (ಯುಎಇ) ಸ್ಥಳಾಂತರವಾಗುವ ಸಾಧ್ಯತೆಯಿದೆ ಎಂದು ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ಮಂಡಳಿ ಕಾರ್ಯದರ್ಶಿ ಮೋಹನ್ ಡಿಸಿಲ್ವಾ ಹೇಳಿದ್ದಾರೆ.

‘ಆರ್ಥಿಕ ಬಿಕ್ಕಟ್ಟು ಎದುರಿಸು-ತ್ತಿರುವ ದ್ವೀಪರಾಷ್ಟ್ರದಲ್ಲಿ ಅಶಾಂತಿ ತಲೆದೋರಿದೆ. ಹೀಗಾಗಿ ಈ ಟಿ20 ಮಾದರಿಯ ಟೂರ್ನಿಯು ಸ್ಥಳಾಂತರ-ವಾಗುವ ಸಾಧ್ಯತೆಯಿದೆ’ ಎಂದು ಡಿಸಿಲ್ವಾ ತಿಳಿಸಿದ್ದಾರೆ.

ಆರು ತಂಡಗಳು ಭಾಗವಹಿಸುವ ಟೂರ್ನಿಯ ವೇಳಾಪಟ್ಟಿಯಲ್ಲಿ (ಆಗಸ್ಟ್ 26ರಿಂದ ಸೆಪ್ಟೆಂಬರ್ 11) ಬದಲಾವಣೆ ಆಗುವ ಸಾಧ್ಯತೆಯಿಲ್ಲ.

ಅಫ್ಗಾನಿಸ್ತಾನ, ಶ್ರೀಲಂಕಾ, ಪಾಕಿಸ್ತಾನ, ಭಾರತ ಮತ್ತು ಬಾಂಗ್ಲಾದೇಶ ಪೂರ್ಣ ಸದಸ್ಯತ್ವ ಹೊಂದಿದ ತಂಡಗಳಾಗಿವೆ.

ಬ್ಯಾಸ್ಕೆಟ್‌ಬಾಲ್: ಭಾರತ ಹೊರಕ್ಕೆ

ಜಕಾರ್ತ(ಪಿಟಿಐ): ಭಾರತ ಪುರುಷರ ಬ್ಯಾಸ್ಕೆಟ್‌ಬಾಲ್ ತಂಡವು ಫಿಬಾ ಏಷ್ಯಾಕಪ್ ಟೂರ್ನಿಯಿಂದ ಸೋತು ಹೊರಬಿದ್ದಿದೆ.

ಭಾನುವಾರ ನಡೆದ ‘ಡಿ’ ಗುಂಪಿನ ಫೈನಲ್ ಪಂದ್ಯದಲ್ಲಿ ಭಾರತ ತಂಡವು 63–104ರಿಂದ ಲೆಬನಾನ್ ಎದುರು ಮುಗ್ಗರಿಸಿತು. ತಂಡಕ್ಕೆ ಟೂರ್ನಿಯಲ್ಲಿ ಇದು ಸತತ ಮೂರನೇ ಸೋಲಾಗಿತ್ತು.

ನಾಲ್ಕು ತಂಡಗಳ ಗುಂಪಿನಲ್ಲಿ ಭಾರತ ಕೊನೆಯ ಸ್ಥಾನ ಪಡೆಯಿತು. ಪ್ರತಿ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿದ ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸಿದವು.

1975ರ ಆವೃತ್ತಿಯಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದೇ ಏಷ್ಯಾಕಪ್‌ನಲ್ಲಿ ಭಾರತ ತಂಡದ ಶ್ರೇಷ್ಠ ಸಾಧನೆಯಾಗಿದೆ.

ಭಾರತಕ್ಕೆ ಸರಣಿ ವಿಜಯ

ಹಾರ್ದಿಕ್ ಆಲ್‌ರೌಂಡ್ ಆಟ; ಪಂತ್ ಶತಕ: ಇಂಗ್ಲೆಂಡ್ ದೂಳಿಪಟ



ಭಾರತದ ರಿಷಭ್ ಪಂತ್ ಶತಕ ಸಂಭ್ರಮ– ಎಪಿ ಚಿತ್ರ

ಮ್ಯಾಂಚೆಸ್ಟರ್ (ಪಿಟಿಐ): ಮತ್ತೊಮ್ಮೆ 'ಆಪದ್ಬಾಂದವ'ನಾದ ರಿಷಭ್ ಪಂತ್ ದಿಟ್ಟ ಶತಕ ಮತ್ತು ಹಾರ್ದಿಕ್ ಪಾಂಡ್ಯ ಆಲ್‌ರೌಂಡ್ ಆಟದ ಮುಂದೆ ಆತಿಥೇಯ ಇಂಗ್ಲೆಂಡ್ ಶರಣಾಯಿತು.

ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು 2–1ರಿಂದ ಏಕದಿನ ಕ್ರಿಕೆಟ್ ಸರಣಿಯನ್ನು ಗೆದ್ದಿತು.

ಭಾನುವಾರ ಎಮಿರೇಟ್ಸ್ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ಭಾರತ ತಂಡವು 5 ವಿಕೆಟ್‌ಗಳಿಂದ ಜಯಿಸಿತು. 47 ಎಸೆತಗಳು ಬಾಕಿಯಿರುವಾಗಲೇ ತಂಡವು ವಿಜಯದ ಕೇಕೆ ಹಾಕಲು ರಿಷಭ್ (ಅಜೇಯ 125; 113ಎ, 4X16, 6X2) ಕಾರಣರಾದರು. 106 ಎಸೆತಗಳಲ್ಲಿ ಶತಕ ಬಾರಿಸಿದ ಅವರು, ನಂತರದ ಏಳು ಎಸೆತಗಳಲ್ಲಿ 25 ರನ್‌ಗಳನ್ನು ಸೂರೆ ಮಾಡಿದರು. ಡೇವಿಡ್ ವಿಲಿ ಹಾಕಿದ 42ನೇ ಓವರ್‌ನಲ್ಲಿ ಸತತ ಐದು ಬೌಂಡರಿ ಬಾರಿಸಿದ ಅವರು, ಕೊನೆಯ ಎಸೆತದಲ್ಲಿ ಒಂದು ರನ್ ಹೊಡೆದರು. ನಂತರ ತಂಡದ ಗೆಲುವಿಗೆ ಬೇಕಾಗಿದ್ದ ಮೂರು ರನ್‌ಗಳಿಗೂ ರಿಷಭ್, 43ನೇ ಓವರ್ ಬೌಲ್ ಮಾಡಿದ ರೂಟ್ ಎಸೆತವನ್ನು ರಿವರ್ಸ್ ಸ್ವೀಪ್ ಮೂಲಕ ಬೌಂಡರಿಗೆರೆ ದಾಟಿಸಿದರು.

ಇದರಿಂದಾಗಿ ಇಂಗ್ಲೆಂಡ್ ತಂಡವು ನೀಡಿದ್ದ 259 ರನ್‌ಗಳ ಗುರಿಯನ್ನು ಭಾರತ ತಂಡವು ಸರಾಗವಾಗಿ ತಲುಪಿತು. 42.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 261 ರನ್ ಗಳಿಸಿತು.

ಹಾರ್ದಿಕ್–ಪಂತ್ ಜೊತೆಯಾಟ: ಗುರಿ ಬೆನ್ನಟ್ಟಿದ ಭಾರತ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಮತ್ತೊಮ್ಮೆ ಮುಗ್ಗರಿಸಿದರು. ರೋಹಿತ್, ಕೊಹ್ಲಿ ಮತ್ತು ಶಿಖರ್ ಪೆವಿಲಿಯನ್ ಸೇರಿದಾಗ ತಂಡವು 50 ರನ್‌ಗಳ ಮೊತ್ತವನ್ನೂ ಮುಟ್ಟಿರಲಿಲ್ಲ. ಸೂರ್ಯ ಕುಮಾರ್ ಕೂಡ ಸ್ವಲ್ಪ ಹೊತ್ತಿನಲ್ಲಿಯೇ ನಿರ್ಗಮಿಸಿದರು.

ಈ ಹಂತದಲ್ಲಿ ಜೊತೆಗೂಡಿದ ರಿಷಭ್ ಮತ್ತು ಹಾರ್ದಿಕ್ ತಂಡದಿಂದ ದೂರ ಹೋಗುತ್ತಿದ್ದ ಗೆಲುವನ್ನು ಎಳೆದುತಂದರು. ಇಬ್ಬರ ಅಬ್ಬರಕ್ಕೆ ಇಂಗ್ಲೆಂಡ್ ಬೌಲರ್‌ಗಳು ಬಸವಳಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ 115 ಎಸೆತಗಳಲ್ಲಿ 133 ರನ್‌ಗಳನ್ನು ಸೇರಿಸಿದರು. ಪಾಂಡ್ಯ 43 ಎಸೆತಗಳಲ್ಲಿ ಅರ್ಧಶತಕ ಹೊಡೆದರು. ಪಂತ್, 71 ಎಸೆತಗಳಲ್ಲಿ 50ರ ಗಡಿ ಮುಟ್ಟಿದರು. 36ನೇ ಓವರ್‌ನಲ್ಲಿ ಕಾರ್ಸ್ ಎಸೆತದಲ್ಲಿ ಪಾಂಡ್ಯ (71 ರನ್) ಔಟಾದಾಗ ತಂಡಕ್ಕೆ 87 ಎಸೆತಗಳಲ್ಲಿ 55 ರನ್‌ಗಳು ಬೇಕಾಗಿದ್ದವು.

ಪಂತ್ ಇಲ್ಲಿ ತಮ್ಮ ಆಟದ ವೇಗ ಹೆಚ್ಚಿಸಿದರು. ಸ್ಟ್ರೇಟ್ ಡ್ರೈವ್, ಪುಲ್, ಫ್ಲಿಕ್‌ಗಳ ಸುಂದರ ಆಟವಾಡಿದ ಎಡಗೈ ಬ್ಯಾಟರ್ ಏಕದಿನ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕದತ್ತ ದಾಪುಗಾಲಿಟ್ಟರು. ಇನ್ನೊಂದೆಡೆ ಜಡೇಜ ಅವರಿಗೆ ಉತ್ತಮ ಜೊತೆ ನೀಡಿದರು.

ಪಾಂಡ್ಯ ನಾಲ್ಕು ವಿಕೆಟ್: ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡದ ಆರಂಭ ಚೆನ್ನಾಗಿರಲಿಲ್ಲ. ಅದಕ್ಕೆ ಕಾರಣವಾಗಿದ್ದು ಮೊಹಮ್ಮದ್ ಸಿರಾಜ್. ಬೂಮ್ರಾ ಗಾಯಗೊಂಡಿದ್ದರಿಂದ ಸ್ಥಾನ ಪಡೆದ ಸಿರಾಜ್ ತಮ್ಮ ಮೊದಲ ಓವರ್‌ನಲ್ಲಿಯೇ ರೂಟ್ ಮತ್ತು ಜಾನಿ ಬೆಸ್ಟೊ ಅವರ ವಿಕೆಟ್ ಕಬಳಿಸಿದರು.

ಇನ್ನೊಂದೆಡೆ ಪಾಂಡ್ಯ (24ಕ್ಕೆ4) ಕಾಡಿದರು. ಜೇಸನ್ ರಾಯ್, ಅರ್ಧಶತಕ ಗಳಿಸಿದ ಜೋಸ್ ಬಟ್ಲರ್, ಬೆನ್ ಸ್ಟೋಕ್ಸ್ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಹಾರ್ದಿಕ್ ಪಾಂಡ್ಯ

ರಿಷಭ್ ಪಂತ್	
ರನ್	125*
ಎಸೆತ	113
ಬೌಂಡರಿ	16
ಸಿಕ್ಸರ್	2
ಸ್ಟ್ರೈಕ್‌ರೇಟ್	110.61

ಇಂಗ್ಲೆಂಡ್ ತಂಡವನ್ನು ಅವರದ್ದೇ ನೆಲದಲ್ಲಿ ಮಣಿಸುವುದು ಸುಲಭವಲ್ಲ. ಭಾರತ ತಂಡದ್ದು ಅಮೋಘ ಸಾಧನೆಯಿದು. ಟೆಸ್ಟ್‌ನಲ್ಲಿ 2–2ರಿಂದ, ಟಿ20 ಮತ್ತು ಈಗ ಏಕದಿನ ಸರಣಿಗಳಲ್ಲಿ ಜಯ ಸಾಧಿಸಿದೆ. ದ್ರಾವಿಡ್, ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಪಂತ್ ಸ್ಪೆಷಲ್ ಮತ್ತು ಅಮೋಘ ಪಾಂಡ್ಯಗೆ ಅಭಿನಂದನೆಗಳು

–ಸೌರವ್ ಗಂಗೂಲಿ
ಬಿಸಿಸಿಐ ಅಧ್ಯಕ್ಷ

ಮತ್ತೆ ಎಡವಿದ ವಿರಾಟ್

ಮ್ಯಾಂಚೆಸ್ಟರ್: 'ರನ್ ಯಂತ್ರ' ವಿರಾಟ್ ಕೊಹ್ಲಿಯ ಬ್ಯಾಟಿಂಗ್ ವೈಫಲ್ಯಕ್ಕೆ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದಲ್ಲಿಯೂ ಪೂರ್ಣವಿರಾಮ ಬೀಳಲಿಲ್ಲ. ಭಾನುವಾರ ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯದಲ್ಲಿಯೂ ಅವರು ದೊಡ್ಡ ಇನಿಂಗ್ಸ್ ಆಡುವಲ್ಲಿ ಎಡವಿದರು. ಇದರೊಂದಿಗೆ ಸತತ ಐದು ಏಕದಿನ ಪಂದ್ಯಗಳಲ್ಲಿ 20 ರನ್‌ಗಳ ಮೊತ್ತದೊಳಗೆ ಔಟಾದರು. ಕೊಹ್ಲಿಯ ವೃತ್ತಿಜೀವನದಲ್ಲಿ ಈ ರೀತಿಯಾಗಿರುವುದು ಇದೇ ಮೊದಲು. ಕಳೆದ ಐದು ಪಂದ್ಯಗಳಲ್ಲಿ ಅವರು ಕ್ರಮವಾಗಿ 8, 18, 0, 16 ಮತ್ತು 17 ರನ್ ಗಳಿಸಿದರು.

ಕಳೆದ ಎರಡು ವರ್ಷಗಳಿಗಿಂತಲೂ ಹೆಚ್ಚು ಸಮಯದಿಂದ ವಿರಾಟ್ ಯಾವುದೇ ಮಾದರಿಯಲ್ಲಿಯೂ ಶತಕ ದಾಖಲಿಸಿಲ್ಲ. ಅವರು ಅಂತರರಾಷ್ಟ್ರೀಯ ಮತ್ತು ಐಪಿಎಲ್ ಟೂರ್ನಿಯ ಪಂದ್ಯಗಳಲ್ಲಿ ರನ್‌ಗಳ ಬರ ಎದುರಿಸುತ್ತಿದ್ದಾರೆ. ಇದಕ್ಕಾಗಿ ಅವರ ಪರ ಮತ್ತು ವಿರೋಧವಾಗಿ ಚರ್ಚೆಗಳು ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿವೆ.

'ಎರಡನೇ ರ್‍ಯಾಂಕ್ ಆಟಗಾರ ಅಶ್ವಿನ್ ಅವರನ್ನೇ ತಂಡದಿಂದ ಕೈಬಿಡಲಾಗಿದೆ. ಇಷ್ಟೊಂದು ಪಂದ್ಯಗಳಲ್ಲಿ ವಿಫಲರಾಗಿರುವ ವಿರಾಟ್ ಬದಲಿಗೆ ಬೆಂಚ್‌ನಲ್ಲಿರುವ ಪ್ರತಿಭಾವಂತರಿಗೆ ಏಕೆ ಅವಕಾಶ ನೀಡಬಾರದು' ಎಂದು ಈಚೆಗಷ್ಟೇ ಮಾಜಿ ನಾಯಕ ಕಪಿಲ್ ದೇವ್ ಹೇಳಿದ್ದು ಚರ್ಚೆಗೆ ಗ್ರಾಸವಾಗಿತ್ತು.

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಸೇರಿದಂತೆ ಹಲವರು ಕೊಹ್ಲಿ ಪರವಾಗಿ ಬ್ಯಾಟಿಂಗ್ ಮಾಡಿದ್ದರು.

ಸ್ಕೋರ್ ಕಾರ್ಡ್

ಇಂಗ್ಲೆಂಡ್ 259 (45.5 ಓವರ್‌ಗಳಲ್ಲಿ)
ಜೇಸನ್ ಸಿ ಪಂತ್ ಬಿ ಹಾರ್ದಿಕ್ 41 (31ಎ, 4X7), ಜಾನಿ ಸಿ ಶ್ರೇಯಸ್ (ಬದಲಿ) ಬಿ ಸಿರಾಜ್ 0 (3ಎ), ರೂಟ್ ಸಿ ರೋಹಿತ್ ಬಿ ಸಿರಾಜ್ 0 (3ಎ), ಸ್ಟೋಕ್ಸ್ ಸಿ ಮತ್ತು ಬಿ ಹಾರ್ದಿಕ್ 27 (29ಎ, 4X4), ಬಟ್ಲರ್ ಸಿ ಜಡೇಜ ಬಿ ಹಾರ್ದಿಕ್ 60 (80ಎ, 4X3, 6X2), ಮೋಯಿನ್ ಸಿ ಪಂತ್ ಬಿ ಜಡೇಜ 34 (44ಎ, 4X2, 6X2), ಲಿವಿಂಗ್‌ಸ್ಟೋನ್ ಸಿ ಜಡೇಜ ಬಿ ಹಾರ್ದಿಕ್ 27 (31ಎ, 4X2, 6X2), ವಿಲಿ ಸಿ ಸೂರ್ಯಕುಮಾರ್ ಬಿ ಚಾಹಲ್ 18 (15ಎ, 4X1, 6X1), ಕ್ರೇಗ್ ಸಿ ಕೊಹ್ಲಿ ಬಿ ಚಾಹಲ್ 32 (33ಎ, 4X1, 6X1), ಬ್ರೈಡನ್ ಕಾರ್ಸ್ ಔಟಾಗದೆ 3 (7ಎ), ರೀಸ್ ಬಿ ಚಾಹಲ್ 0 (1ಎ)
ಇತರೆ 17 (ಲೆಗ್‌ಬೈ 2, ವೈಡ್ 13, ನೋಬಾಲ್ 2)
ವಿಕೆಟ್ ಪತನ: 1–12 (ಜಾನಿ ಬೆಸ್ಟೊ; 1.3), 2–12 (ಜೋ ರೂಟ್; 1.6), 3–66 (ಜೇಸನ್ ರಾಯ್; 9.5), 4–74 (ಬೆನ್ ಸ್ಟೋಕ್ಸ್;13.2), 5–149 (ಮೋಯಿನ್ ಅಲಿ; 27.2), 6–198 (ಲಿಯಾಮ್ ಲಿವಿಂಗ್‌ಸ್ಟೋನ್;36.3), 7–199 (ಜೋಸ್ ಬಟ್ಲರ್;36.6), 8–247 (ಡೇವಿಡ್ ವಿಲಿ; 43.4), 9–257 (ಕ್ರೇಗ್ ಒವರ್ಟನ್;45.3), 10–259 (ರೀಸ್ ಟಾಪ್ಲಿ;45.5)
ಬೌಲಿಂಗ್: ಮೊಹಮ್ಮದ್ ಶಮಿ 7–0–38–0, ಮೊಹಮ್ಮದ್ ಸಿರಾಜ್ 9–1–66–2, ಪ್ರಸಿದ್ಧಕೃಷ್ಣ 9–0–48–0, ಹಾರ್ದಿಕ್ ಪಾಂಡ್ಯ 7–3–24–4, ಯಜುವೇಂದ್ರ ಚಾಹಲ್ 9.5–0–60–3, ರವೀಂದ್ರ ಜಡೇಜ 4–0–21–1

ಭಾರತ 5ಕ್ಕೆ 261 (42.1 ಓವರ್)
ರೋಹಿತ್ ಸಿ ರೂಟ್ ಬಿ ರೀಸ್ 17 (17ಎ, 4X4), ಧವನ್ ಸಿ ಜೇಸನ್ ಬಿ ರೀಸ್ 1 (3ಎ), ವಿರಾಟ್ ಸಿ ಬಟ್ಲರ್ ಬಿ ರೀಸ್ 17 (22ಎ, 4X3), ರಿಷಭ್ ಔಟಾಗದೆ 125 (113ಎ, 4X16, 6X2), ಸೂರ್ಯಕುಮಾರ್ ಸಿ ಬಟ್ಲರ್ ಬಿ ಕ್ರೇಗ್ 16 (28ಎ, 4X1), ಹಾರ್ದಿಕ್ ಸಿ ಸ್ಟೋಕ್ಸ್ ಬಿ ಕಾರ್ಸ್ 71 (55ಎ, 4X10), ಜಡೇಜ ಔಟಾಗದೆ 7 (15ಎ)
ಇತರೆ (ಬೈ 1, ಲೆಗ್‌ಬೈ 3, ವೈಡ್ 3) 7
ವಿಕೆಟ್ ಪತನ: 1–13 (ಶಿಖರ್ ಧವನ್; 2.1), 2–21(ರೋಹಿತ್ ಶರ್ಮಾ;4.6), 3–38 (ವಿರಾಟ್ ಕೊಹ್ಲಿ;8.1), 4–72 (ಸೂರ್ಯಕುಮಾರ್ ಯಾದವ್;16.2), 5–205 (ಹಾರ್ದಿಕ್ ಪಾಂಡ್ಯ; 35.3)
ಬೌಲಿಂಗ್: ರೀಸ್ ಟಾಪ್ಲಿ 7–1–35–3, ಡೇವಿಡ್ ವಿಲಿ 7–0–58–0, ಬ್ರೈಡನ್ ಕಾರ್ಸ್ 8–0–45–1, ಮೋಯಿನ್ ಅಲಿ 8–0–33–0, ಕ್ರೇಗ್ ಓವರ್ಟನ್ 8–0–54–0, ಬೆನ್ ಸ್ಟೋಕ್ಸ್ 2–0–14–0, ಲಿಯಾಮ್ ಲಿವಿಂಗ್‌ಸ್ಟೋನ್ 2–0–14–0, ಜೋ ರೂಟ್ 0.1–0–4–0

ಫಲಿತಾಂಶ: ಭಾರತಕ್ಕೆ 5 ವಿಕೆಟ್‌ಗಳ ಜಯ, 2–1ರಿಂದ ಸರಣಿ ಗೆಲುವು

ಗಾಲ್ಫ್: 2ನೇ ಸ್ಥಾನದಲ್ಲಿ ವಾಣಿ

ಅರ್ನ್‌ಹೆಮ್, ನೆದರ್ಲೆಂಡ್ಸ್ (ಪಿಟಿಐ): ಭಾರತದ ವಾಣಿ ಕಪೂರ್ ಅವರು ಇಲ್ಲಿ ನಡೆಯುತ್ತಿರುವ ಬಿಗ್ ಗ್ರೀನ್ ಎಗ್ ಓಪನ್ ಟೂರ್ನಿಯ ಮೂರನೇ ಸುತ್ತಿನ ಬಳಿಕ ಜಂಟಿ ಎರಡನೇ ಸ್ಥಾನದಲ್ಲಿ ಮುನ್ನಡೆದಿದ್ದಾರೆ.

ಆಸ್ಟ್ರಿಯಾದ ಸಾರಾ ಶೋಬರ್ ಕೂಡ ಎರಡನೇ ಸ್ಥಾನದಲ್ಲಿದ್ದರು.

ಸ್ವೀಡನ್‌ನ ಅನ್ನಾ ನಾರ್ದ್‌ವಿಸ್ಟ್ ಮೊದಲ, ಭಾರತದ ದೀಕ್ಷಾ ದಾಗರ್ ಜಂಟಿ 5ನೇ ಮತ್ತು ಅಮನ್ ದೀಪ್ ಡ್ರಾಲ್ ಜಂಟಿ 30ನೇ ಸ್ಥಾನದಲ್ಲಿದ್ದರು.

ಜಯಸೂರ್ಯಗೆ 5 ವಿಕೆಟ್

ಗಾಲ್(ಎಎಫ್‌ಪಿ): ಐದು ವಿಕೆಟ್ ಗಳಿಸಿದ ಪ್ರಭಾತ್ ಜಯಸೂರ್ಯ ಅಮೋಘ ಬೌಲಿಂಗ್ ಬಲದಿಂದ ಶ್ರೀಲಂಕಾ ತಂಡವು ಇಲ್ಲಿ ನಡೆಯುತ್ತಿ ರುವ ಟೆಸ್ಟ್‌ನಲ್ಲಿ ಪಾಕಿಸ್ತಾನ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಪಾಕ್ ನಾಯಕ ಬಾಬರ್ ಆಜಂ (119; 244ಎ, 4X11, 6X2) ಶತಕ ಗಳಿಸಿದರು. ಇದರಿಂದಾಗಿ ಪಾಕ್ ತಂಡವು ಅವರ ಅಮೋಘ ಬೌಲಿಂಗ್ ಮುಂದೆ ಕುಸಿದ ಪಾಕ್ ತಂಡವು 90.5 ಓವರ್‌ಗಳಲ್ಲಿ 218 ರನ್ ಗಳಿಸಿತು. ಲಂಕಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 222 ರನ್ ಗಳಿಸಿತ್ತು.

ದಿನದಾಟದ ಕೊನೆಗೆ ಲಂಕಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 11.5 ಓವರ್‌ಗಳಲ್ಲಿ 1 ವಿಕೆಟ್‌ಗೆ 36 ರನ್ ಗಳಿಸಿತು.

ಜಯಸೂರ್ಯ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಶ್ರೀಲಂಕಾ:222; ಪಾಕಿಸ್ತಾನ: 90.5 ಓವರ್‌ಗಳಲ್ಲಿ 218 (ಬಾಬರ್ ಆಜಂ 119, ಯಾಸೀರ್ ಶಾಹ 18, ಹಸನ್ ಅಲಿ 17, ಪ್ರಭಾತ್ ಜಯಸೂರ್ಯ 82ಕ್ಕೆ5, ಮೆಂಡಿಸ್ 18ಕ್ಕೆ), ಎರಡನೇ ಇನಿಂಗ್ಸ್: ಶ್ರೀಲಂಕಾ: 11.5 ಓವರ್‌ಗಳಲ್ಲಿ 1 ವಿಕೆಟ್‌ಗೆ 36 (ಒಷಾಡೊ ಫರ್ನಾಂಡೊ ಬ್ಯಾಟಿಂಗ್ 17, ಕಸುನ ರಜಿತಾ ಬ್ಯಾಟಿಂಗ್ 3)

ತಮೀಮ್ ನಿವೃತ್ತಿ

ಜಾರ್ಜ್‌ಟೌನ್, ಗಯಾನ (ಪಿಟಿಐ): ಬಾಂಗ್ಲಾದೇಶ ಏಕದಿನ ತಂಡದ ನಾಯಕ ತಮೀಮ್ ಇಕ್ಬಾಲ್ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

ಬಾಂಗ್ಲಾದೇಶ ತಂಡವು ಶನಿವಾರ ಕೊನೆಗೊಂಡ ಏಕದಿನ ಸರಣಿಯಲ್ಲಿ ವೆಸ್ಟ್ ಇಂಡೀಸ್ ತಂಡವನ್ನು 3–0ಯಿಂದ ಮಣಿಸಿತ್ತು. ಇದಾದ ಬಳಿಕ ತಮೀಮ್ ನಿವೃತ್ತಿ ಹೇಳಿದ್ದಾರೆ.